

ಹಾವಸೆಗಲ್ಲಿನ ಪಥಿಕ

ಶಿವಸ್ವಾಮಿ ಚೀನಕೇರಿ





ಲೇಖಕರು

ಡಾ. ವೀರಶೆಟ್ಟಿ ಗಾರಂಪಳ್ಳಿ

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಬೀದರ.

Email : kasapabidar@gmail.com - www.kasapabidar.in



ಡಾ. ವೀರಶೆಟ್ಟಿ ಗಾರಂಪಳ್ಳಿ.



ಸರಳ, ಸೌಜನ್ಯದ ಪ್ರತಿರೂಪದಂತಿರುವ ಡಾ. ವೀರಶೆಟ್ಟಿ ಬಿ. ಗಾರಂಪಳ್ಳಿ ವಿನಯಶೀಲರು. ದಕ್ಷತೆ, ಪ್ರಾಮಾಣಿಕತೆಗೆ ಹೆಸರಾದವರು. ಎಂಎ., ಎಂ.ಫಿಲ್., ಪಿಹೆಚ್.ಡಿ ಪದವಿಧರರು. ಮೂಲತಃ ಕಲಬುರ್ಗಿ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ಸಾಲೇ ಬೀರನಹಳ್ಳಿಯವರು. ಕೃಷಿ ಕಾಯಕ ಕುಟುಂಬದ ತಾಯಿ ಶೇಕಮ್ಮ ತಂದೆ ಬಸವರಾಜ ದಂಪತಿಗಳಿಗೆ ಜನಿಸಿದ (೦೧.೦೫.೧೯೮೫) ಇವರು ಪ್ರಾಥಮಿಕ ಪ್ರೌಢ ಶಿಕ್ಷಣವನ್ನು ಹುಟ್ಟೂರು, ಜನವಾಡ ಹಾಗೂ ಕೊಳ್ಳೂರುಗಳಲ್ಲಿ ಪೂರೈಸಿ, ಕಾಲೇಜು ಶಿಕ್ಷಣವನ್ನು ತಾಯಿಯ ತವರು ಮನೆ ಹುಮನಾಬಾದ್ ತಾಲೂಕು, ಬೀದರ್ ಜಿಲ್ಲೆಯ ಚೀನಕೇರಾದಲ್ಲಿದ್ದು ಪೂರೈಸಿದವರು. ಎಂ.ಎ ಇತಿಹಾಸದಲ್ಲಿ ೩ ಚಿನ್ನದ ಪದಕಗಳನ್ನು ಪಡೆದು, 'ಚಿಂಚೋಳಿ ತಾಲೂಕಿನ ಸ್ವಾತಂತ್ರ್ಯ. ಮತ್ತು ಏಕೀಕರಣ ಹೋರಾಟ' ಎಂಬ ವಿಷಯ ಕುರಿತು ಎಂ.ಫಿಲ್ ಹಾಗೂ 'ಬೀದರ ಜಿಲ್ಲೆಯ ಶರಣರ ಸ್ಮಾರಕಗಳು' ಎಂಬ ವಿಷಯದ ಕುರಿತು ಪಿಹೆಚ್.ಡಿ ಸಂಶೋಧನಾ ಅಧ್ಯಯನ ಮಾಡಿದವರು. ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ ವಿಧಾನಸೌಧ ಬೆಂಗಳೂರಲ್ಲಿ ೨೦೧೪ಕ್ಕೆ ಸಹಾಯಕ ನಿರ್ದೇಶಕರಾಗಿ ವೃತ್ತಿ ಜೀವನ ಆರಂಭಿಸಿದ್ದು ಪ್ರಸ್ತುತ ಹಿರಿಯ ಸಹಾಯಕ ನಿರ್ದೇಶಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ವೃತ್ತಿಯಲ್ಲಿರುವಾಗ ಕನ್ನಡ ವಿಶ್ವವಿದ್ಯಾಲಯ ಹಂಪಿಯಿಂದ ೨೦೧೬-೧೭ರಲ್ಲಿ 'ಪುರಾತತ್ವ ಸಂಸ್ಕೃತಿ ಮತ್ತು ಪ್ರವಾಸೋದ್ಯಮ ಸ್ನಾತಕೋತ್ತರ ಡಿಪ್ಲೊಮಾ ಪದವಿ ಪಡೆದಿರುವರು. 'ಬೀದರ್ ಜಿಲ್ಲೆಯ ಶರಣ ಸ್ಮಾರಕಗಳು', 'Unsung Freedom Struggle' (೧೯೪೧), ಮೊದಲಾದ ಕೃತಿಗಳನ್ನು ರಚಿಸಿದ್ದಲ್ಲದೆ 'ಆದಿಲ್ ಶಾಹಿ ಕಾಲದ ಕರ್ನಾಟಕ: ಬಹುಸಂಸ್ಕೃತಿಯ ಅನುಸಂಧಾನ' ಎಂಬ ಕೃತಿಯನ್ನೂ ಡಾ.ಶಿವಗಂಗಾ ರುಮ್ಮಾ ಅವರೊಂದಿಗೆ ಸಂಪಾದಿಸಿದ್ದಾರೆ. ಶರಣ ತತ್ವದಿಂದ ಪ್ರಭಾವಿತರಾಗಿ 'ಸತ್ಯಶುದ್ಧ ಕಾಯಕನಿಷ್ಟೆ, ದಾಸೋಹ ಭಾವ' ಮೈಗೂಡಿಸಿಕೊಂಡು ಅದಕ್ಕೆ ಅನ್ವರ್ಥವಾಗಿ ಬದುಕುತ್ತಿರುವವರು. ಕನ್ನಡದ ಬಗ್ಗೆ ಅವರಿಗೆ ಅಪಾರ ಗೌರವ, ಅಭಿಮಾನ. ಅದು ಒಣ ಅಭಿಮಾನವಲ್ಲ, ಆತ್ಮನಿಷ್ಠೆಯ ಪ್ರೇಮ. ಡಾ.ವೀರಶೆಟ್ಟಿಯವರು ಇತಿಹಾಸದ ವಿದ್ಯಾರ್ಥಿಯಾದರೂ ಕನ್ನಡ ಸಾಹಿತ್ಯವನ್ನು ಆಳವಾಗಿ ಅಧ್ಯಯನ ಮಾಡಿದ್ದಾರೆ. ಅದರಲ್ಲೂ ವಚನ ಸಾಹಿತ್ಯದ ಬಗ್ಗೆ ಅವರಿಗೆ ವಿಶೇಷವಾದ ಆಸಕ್ತಿ. ವೃತ್ತಿ ನಿಷ್ಠೆಯೊಂದಿಗೆ ಸಾಹಿತ್ಯದ ಓದು ಸಂಸ್ಕೃತಿ ಚಿಂತನೆ, ಶೈಕ್ಷಣಿಕ ಸಂಶೋಧನೆ ಕಡೆಗೂ ಒಲವು ಹೊಂದಿರುವುದು ಅವರ ಬೆಳವಣಿಗೆಯ ಭಾಗವಾಗಿವೆ. ಕರ್ತವ್ಯ ಪ್ರಜ್ಞೆಯ ಜೊತೆಗೆ ಸಮಯ ಪಾಲನೆ, ಸಾಮಾಜಿಕ ಕಾಳಜಿ ಅವರ ಬದುಕಿನ ಅಂತಃಶಕ್ತಿಗಳು. ಪ್ರಸ್ತುತ 'ಹಾವಸೆಗಲ್ಲಿನ ಪಥಿಕ ಶಿವಸ್ವಾಮಿ ಚೀನಕೇರಿ' ಅವರ ಜೀವನ ಚರಿತ್ರೆ ಬರೆದಿದ್ದು ಈ ಸಾಧಕರ ಬಗ್ಗೆ ಅವರು ಕಲೆಹಾಕಿದ ಮಾಹಿತಿಗಳು ಹಾಗೂ ಅವನ್ನು ಬರಹಕ್ಕೆ ತರುವಾಗ ಹೊಂದಿದ ಸಾಮಾಜಿಕ ಸಂವೇದನೆ ಅಪರೂಪದ್ದು. ಅವರಿಂದ ಇನ್ನಷ್ಟು ಕೃತಿಗಳು ಹೊರಬರಲೆಂದು ಶುಭ ಹಾರೈಸುವೆ.

* ವಿದ್ಯಾವತಿ ಬಲ್ಲೂರ, ಬೀದರ

ಬೀದರ ಜಿಲ್ಲಾ ೧೭ನೇ ಕನ್ನಡ ಸಾಹಿತ್ಯ ಸಮ್ಮೇಳನ ನಿಮಿತ್ತ
ಸಾಂಸ್ಕೃತಿಕ ಚಿಂತಕರು ಮಾಲಿಕೆ

ಹಾವಸೆಗಲ್ಲಿನ ಪಥಿಕ

ಶಿವಸ್ವಾಮಿ ಚೀನಕೇರಿ

ಲೇಖಕರು

ಡಾ. ವೀರಶೆಟ್ಟಿ ಗಾರಂಪಳ್ಳಿ

ಪ್ರಕಾಶಕರು

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಬೀದರ

೨೦೨೧

ಹಾವಸೆಗಲ್ಲಿನ ಪಥಿಕ ಶಿವಸ್ವಾಮಿ ಚೀನಕೇರಿ
ಲೇ: ಡಾ. ವೀರಶೆಟ್ಟಿ ಗಾರಂಪಳ್ಳಿ, ಹಿರಿಯ ಸಹಾಯಕ ನಿರ್ದೇಶಕರು, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ಬಿ-೨, ದಕ್ಷಿಣ ಬಾಗಿಲು, ವಿಧಾನಸೌಧ, ಬೆಂಗಳೂರು-೦೧. ಮೊ: ೯೮೪೪೬೧೫೦೨೦
E-mail:veershetty121@gmail.com
ಪ್ರಕಾಶಕರು ಃ **ಸುರೇಶ ಚನಶೆಟ್ಟಿ,**
ಅಧ್ಯಕ್ಷರು, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಬೀದರ. ಮೊ: ೯೯೮೬೭೯೨೩೨೩
E-mail:kasapabidar@gmail.com, web: www.kasapabidar.in
ಪ್ರಥಮ ಮುದ್ರಣ ಃ ೨೦೨೧
ಪುಟಗಳು ಃ xxii+೧೦೬
ಬೆಲೆ ಃ ೧೦೦/-
ಅಕ್ಷರ ಜೋಡಣೆ ಃ ಪಾಟೀಲ ಕಂಪ್ಯೂಟರ್ಸ್, ಬೀದರ.
ಪುಸ್ತಕ ವಿನ್ಯಾಸ ಃ ಆರ್.ವ್ಹಿ. ಕುಂಬಾರ, ಬೀದರ.
ಮುಖಪುಟ ವಿನ್ಯಾಸ ಃ ಅಕ್ಷಯ ಗ್ರಾಫಿಕ್ಸ್, ಬೀದರ
ಮುದ್ರಕರುಃ ವಿಶ್ವಾಸ ಪ್ರೆಸ್ ಬೆಂಗಳೂರು

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಬೀದರ
ಕಾರ್ಯಕಾರಿ ಸಮಿತಿ

ಅಧ್ಯಕ್ಷರು
ಸುರೇಶ ಚನಶೆಟ್ಟಿ

ಗೌರವಾಧ್ಯಕ್ಷರು
ಪಂಚಾಕ್ಷರಿ ಪುಣ್ಯಶೆಟ್ಟಿ

ಗೌರವ ಕಾರ್ಯದರ್ಶಿ
ಡಾ.ಬಸವರಾಜ ಬಲ್ಲೂರ
ಡಾ. ರಾಜಕುಮಾರ ಹೆಬ್ಬಾಳೆ

ಗೌರವ ಕೋಶಾಧ್ಯಕ್ಷರು
ಟಿ.ಎಂ.ಮಚ್ಚೆ

ಉಪಾಧ್ಯಕ್ಷರು
ಜಯದೇವಿ ಯದಲಾಪೂರೆ
ವಿಜಯಕುಮಾರ ಗೌರೆ,
ವಿರೂಪಾಕ್ಷ ಗಾದಗಿ

ಮಹಿಳಾ ಪ್ರತಿನಿಧಿ
ಕಸ್ತೂರಿ ಪಟಪಳ್ಳಿ

ಮಹಿಳಾ ಸಾಹಿತಿ
ಮೇನಕಾ ಪಾಟೀಲ

ಮಹಿಳಾ ಘಟಕ ಅಧ್ಯಕ್ಷರು
ಜಯಶ್ರೀ ಸುಕಾಲೆ

ಮಕ್ಕಳ ಘಟಕ ಅಧ್ಯಕ್ಷರು
ರಜಿಯಾ ಬಳಬಟ್ಟಿ

ಪರಿಶಿಷ್ಟ ಜಾತಿ ಪ್ರತಿನಿಧಿ
ಡಾ.ಮಲ್ಲಿಕಾರ್ಜುನ ನಿಂಗದಳ್ಳಿ

ಪರಿಶಿಷ್ಟ ಪಂಗಡ ಪ್ರತಿನಿಧಿ
ಡಾ. ರಾಜಕುಮಾರ ಅಲ್ಲೂರೆ

ಸಂಘ ಸಂಸ್ಥೆ ಪ್ರತಿನಿಧಿ
ಸುಬ್ರಹ್ಮಣ್ಯ ಪ್ರಭು

ಜಿಲ್ಲಾ ವಾರ್ತಾಧಿಕಾರಿ
ಗವಿಸಿದ್ದಪ್ಪ ಹೊಸಮನಿ

ಕನ್ನಡ ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರು
ಸಿದ್ರಾಮ ಸಿಂಧೆ

ನಿಕಟಪೂರ್ವ ಅಧ್ಯಕ್ಷರು
ಪ್ರೊ. ಸಿದ್ರಾಮಪ್ಪ ಮಾಸಿಮಾಡೆ

ಜಿಲ್ಲಾ ಶಿಕ್ಷಣಾಧಿಕಾರಿ
ಡಾ. ಮಹಮದ್ ಗುಲ್ಷನ್

ಗಡಿ ಪ್ರತಿನಿಧಿ
ಪ್ರೊ. ಶಿವಕುಮಾರ ಕಟ್ಟೆ
ವಸಂತ ಹುಣಸನಾಳೆ,

ಜಿಲ್ಲೆಯಲ್ಲಿ ವಿವಿಧ ಕ್ಷೇತ್ರಗಳಲ್ಲಿ ನಿಸ್ವಾರ್ಥ ಸೇವೆ ಸಲ್ಲಿಸಿದ ಮಹನೀಯರನ್ನು ಗುರುತಿಸಿ ಅವರ ಜೀವಿತಾವಧಿಯಲ್ಲಿಯೇ ಅವರು ಪ್ರತಿಪಾದಿಸಿದ ಜೀವನಮೌಲ್ಯಗಳನ್ನು ಅಕ್ಷರರೂಪಕ್ಕೆ ಇಳಿಸಬೇಕು ಎಂದು ಅವರು ಒಂದು ಯೋಜನೆಯನ್ನೂ ರೂಪಿಸಿದರು.

ಅದಕ್ಕೆ ಪೂರಕವಾಗಿ 'ಸಾಂಸ್ಕೃತಿಕ ಚಿಂತಕರು' ಎಂಬ ಸರಣಿಯಲ್ಲಿ ೧೭ ಜನ ಸಾಧಕರನ್ನು ಕುರಿತು ಅಷ್ಟೇ ಸಂಖ್ಯೆಯ ಲೇಖಕಿಯರು ಕೃತಿ ರಚಿಸಿದ್ದಾರೆ. ಅದರ ಜೊತೆಗೆ ಜಿಲ್ಲೆಯಲ್ಲಿ 'ಕನ್ನಡ ಕಟ್ಟಿದವರು' ಕುರಿತ ಸರಣಿಯಲ್ಲಿ ೧೭ ಜನ ಸಾಧಕರ ಬಗೆಗೆ ಅಷ್ಟೇ ಸಂಖ್ಯೆಯ ಬರಹಗಾರರು ಕೃತಿಗಳನ್ನು ರಚಿಸಿದ್ದಾರೆ. ಇದೆಲ್ಲ ಆಗಿರುವುದು ಜಿಲ್ಲೆಯ ೧೭ನೇ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಂಗವಾಗಿ ಎಂಬುದು ಇಲ್ಲಿ ಉಲ್ಲೇಖನಾರ್ಹ.

ಇದು ಒಂದು ಅಪರೂಪದ ದಾಖಲೆಯ ಕಾರ್ಯ; ನಮ್ಮ ಸಮಾಜದ ಏಳಿಗೆಗೆ ದುಡಿದ ಮಹನೀಯರನ್ನು, ಮಹಿಳೆಯರನ್ನು ನೆನಪಿಸಿಕೊಳ್ಳುವ ಕಾರ್ಯ. ಆದರೆ, ಇದು ಕೇವಲ ಒಂದು ದಾಖಲೀಕರಣದ ಕೆಲಸ ಮಾತ್ರ ಅನಿಸದೇ ಆಸಕ್ತರು ಈ ಕೃತಿಗಳನ್ನು ಓದಿದರೆ ಬೀದರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರ ಹಾಗೂ ಪದಾಧಿಕಾರಿಗಳ ಕಾರ್ಯ ಸಾರ್ಥಕ ಎನಿಸುತ್ತದೆ. ಇದಕ್ಕಾಗಿ ದುಡಿದ ಎಲ್ಲರಿಗೂ ನನ್ನ ಅಭಿನಂದನೆಗಳು.

ನಾಡೋಜ ಡಾ. ಮನು ಬಳಿಗಾರ್
ಅಧ್ಯಕ್ಷರು,
ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

ಸದಾಶಯ ನುಡಿ

ಶರಣರ ವಿಚಾರಗಳು ಅವರ ವಚನದಲ್ಲಿವೆ. ಅವರ ವಚನಗಳು ಅವರದೇ ವಚನಾಂಕಿತದಿಂದ ಗುರುತಿಸಲ್ಪಟ್ಟಿದೆ. ಇತ್ತೀಚೆಗೆ ಕೆಲವರು ವಚನಾಂಕಿತ ಬದಲಾವಣೆ ಮಾಡಿದ್ದರಿಂದ ಐತಿಹಾಸಿಕ ದಾಖಲೆಗಳ ಮತ್ತು ಸಾಹಿತ್ಯ ಕ್ಷೇತ್ರದಲ್ಲಿ ಆಗಬಹುದಾದ ದುಷ್ಪರಿಣಾಮಗಳನ್ನು ಕೆಲವು ಪ್ರಜ್ಞಾವಂತ ಲೇಖಕರು ಸಮಾಜಕ್ಕೆ ಮುಟ್ಟಿಸುತ್ತಿದ್ದಾರೆ. ಆ ಮಾಲಿಕೆಯಲ್ಲಿ ಶ್ರೀ ಶಿವಸ್ವಾಮಿ ಚೇನಕೇರಿ ಇವರು 'ಲಿಂಗದೇವ' ಎಂಬ ನಾಮಾಂಕಿತದೊಂದಿಗೆ ೧೨೩ ವಚನಗಳನ್ನು ರಚಿಸಿ, ಶರಣರ ವಚನಾಂಕಿತ ಬದಲಾವಣೆಯ ವಿರುದ್ಧ ಸಾತ್ವಿಕ ಪ್ರತಿಭಟನೆಯನ್ನು ವ್ಯಕ್ತಪಡಿಸಿದ್ದಾರೆ. ಈ ವಚನಕಾರರಿಗೆ ಶರಣರ ವಚನಗಳ ವಚನಾಂಕಿತಗಳ ರಕ್ಷಣೆಯೇ ಒಂದು ಚಿಂತನೆಯಾಗಿದ್ದು, ಅದರ ನಿವಾರಣೆಗಾಗಿ ತಮ್ಮವೇ ವಚನಗಳನ್ನು ರಚಿಸಿ, 'ಕೂಡಲಸಂಗಮದೇವ' ವಚನಾಂಕಿತವನ್ನು ಎತ್ತಿಹಿಡಿದಿದ್ದಾರೆ. 'ವ್ಯಾಧಿನಿಗೊಂದು ಚಿಂತೆ ಮೊಲನಿಗೊಂದು ಚಿಂತೆ ಧರ್ಮಿಗೊಂದು ಚಿಂತೆ ಕರ್ಮಿಗೊಂದು ಚಿಂತೆ ಎಮಗೆ ಬಸವತತ್ತ್ವ ಪ್ರಸಾರದ ಚಿಂತೆ ಲಿಂಗದೇವ ಬಸವಣ್ಣನ ಹಿಯ ಶತ್ರುಗಳಿಂದ ಬಸವನ ವಚನಾಂಕಿತ ಅಳಿಯುವುದೋ ಉಳಿಯುವುದೋ ಎಂಬ ಚಿಂತೆ' ಎಂದು ಅವರು ತಮ್ಮ ಚಿಂತೆಯ ಚಿಂತನೆಯನ್ನು ಬಯಲುಗೊಳಿಸಿದ್ದಾರೆ. ಅದರಲ್ಲಿ ಶರಣರ ವಚನಾಂಕಿತಗಳ ರಕ್ಷಣೆಯ ಕಾಳಜಿ ಜನರಲ್ಲಿ ಇಲ್ಲದಿರುವ ಸಂದರ್ಭದಲ್ಲಿ ಇವರು ಆದರ್ಶ ವ್ಯಕ್ತಿಗಳಾಗಿ ರೂಪುಗೊಳ್ಳುತ್ತಿರುವುದು ಅಭಿನಂದನೀಯ.

ಕೂಡಲಸಂಗಮದೇವ ಎಂಬ ಬಸವಣ್ಣನವರ ವಚನಾಂಕಿತವನ್ನು ಲಿಂಗದೇವ ಎಂದು ತಿದ್ದಿರುವುದರ ವಿರುದ್ಧವಾಗಿ ತಮ್ಮ ಅಮೂಲ್ಯವಾದ

ಚಿಂತನೆಗಳನ್ನು ವಚನಗಳ ರೂಪದಲ್ಲಿ ಸೆರೆಹಿಡಿದಿದ್ದಾರೆ. 'ಬಸವಣ್ಣನ ನಿಲುವಿಂಗೆ ಬಸವಣ್ಣನೇ ಸಾಕ್ಷಿ, ಬಸವಣ್ಣನ ಅನುಭಾವ ಪರಿಪೂರ್ಣ, ಪರಿಪೂರ್ಣದೊಳಗೆ ಅಪೂರ್ಣ ಕಂಡಿಹೆನೆಂಬುದು ಅರಿವಿನ ಅಭಾವವಲ್ಲದೆ ಅನುಭಾವದ ಅರಿವು ಅಲ್ಲವಯ್ಯ, ಇದು ಕಾರಣ ಲಿಂಗದೇವ ಮಹಾಮಹಿಮ ಸಂಗನ ಬಸವಣ್ಣನ ವಚನ ಮುದ್ರಿಕೆ ಕೂಡಲ ಸಂಗಮದೇವನೆಂಬುದು ಪರಿಪೂರ್ಣ, ಪರಿಪೂರ್ಣ ಪರಿಪೂರ್ಣ ಕಾಣಿರಣ್ಣ' ಎಂದಾಗಿ ಬಸವಣ್ಣನವರಲ್ಲಿಯೇ ದೋಷವನ್ನು ಕಾಣುವ ವ್ಯಕ್ತಿಗಳಲ್ಲಿ ಅರಿವು ಮೂಡಿಸುವ ಪ್ರಯತ್ನ ಮಾಡಿದ್ದಾರೆ. ಇವರ ಬರಹಗಳಲ್ಲಿ ಉತ್ತಮ ಚಿಂತನೆ ಇದೆ. ಬಸವಣ್ಣನವರ ವಚನಾಂಕಿತ ರಕ್ಷಣೆಯ ಕಾಳಜಿ, ಎಲ್ಲಾ ವಚನಗಳುದ್ದಕ್ಕೂ ಹರಿದಿದೆ. ಶಿವಯೋಗ ಅನುಸಂಧಾನ ಮತ್ತು ಶರಣರ ವಚನಗಳ ಅಧ್ಯಯನ ಬಲದಿಂದ ವಚನ ಶೈಲಿ ವಚನಕಾರರಿಗೆ ಕರಗತವಾಗಿದೆ.

ಬಸವಣ್ಣನವರ ತತ್ವ ಪ್ರಸಾರವನ್ನೇ ತಮ್ಮ ಕಾಯಕವನ್ನಾಗಿ ಸ್ವೀಕರಿಸಿರುವ ಈ ವಚನಕಾರರ ಬದುಕು ಸಾರ್ಥಕ. ಅವರ ಬದುಕನ್ನು ಬರಹಕ್ಕಿಳಿಸುತ್ತಿರುವ ಜಿಲ್ಲಾ ಕಸಪಾದವರಿಗೆ ಮನಃಪೂರ್ವಕ ಅಭಿನಂದನೆಗಳು. ಸಾತ್ವಿಕರು, ಚಿಂತನಾಶೀಲರೂ ಆದ ಶ್ರೀ ಶಿವಸ್ವಾಮಿಯವರು ಸಮಾಜದ ಇನ್ನೂ ಹತ್ತು ಹಲವಾರು ಚಿಂತನೆಗಳನ್ನು ವಚನಗಳಲ್ಲಿ ಸೆರೆಹಿಡಿಯುವ ಕಾರ್ಯವನ್ನು ಬಸವಾದಿ ಶರಣರ ಅನುಗ್ರಹದಿಂದ ಮುಂದುವರೆಸಲೆಂದು ಹಾರೈಸುತ್ತೇವೆ.

ಶ್ರೀ ಶಿವಮೂರ್ತಿ ಮುರುಘರಾಜೇಂದ್ರ ಶರಣರು,
ಬೃಹನ್ಮಠ, ಚಿತ್ರದುರ್ಗ

ಸದಭಿಪ್ರಾಯ

'ಶ್ರೀಸಾಮಾನ್ಯನೆ ಭಗವನ್ ಮಾನ್ಯಂ'

'ಶ್ರೀಸಾಮಾನ್ಯನೆ ಭಗವನ್ ಮಾನ್ಯಂ' ಎಂಬ ರಾಷ್ಟ್ರಕವಿ ಕುವೆಂಪುರವರ ಮಾತೊಂದಿದೆ. ಇವತ್ತಿನ ಸಾಮಾಜಿಕ ವ್ಯವಸ್ಥೆಯಲ್ಲಿ ಹಣ ಇರುವವನು, ಅಧಿಕಾರ ಇರುವವನು, ತೋಳ್ಬಲ ಮತ್ತು ಜಾತಿಯ ಬಲ ಇರುವವನು ಮುಖ್ಯನಾಗಿಬಿಟ್ಟಿದ್ದಾನೆ. ಆದರೆ ದೈವದ ದೃಷ್ಟಿಯಲ್ಲಿ ಎಲ್ಲರೂ ಸಮಾನರೇ. ಅವನು ಎಂಥವನೇ ಇದ್ದರೂ ಕಾಲ ಬಂದಾಗ ಎಲ್ಲವನ್ನು ಬಿಟ್ಟು ಹೊರಡಲೇಬೇಕು. ಸಮಾಜದಲ್ಲಿ ಮೌಲ್ಯಗಳು ಉಳಿದಿದ್ದರೆ ಅದು ದೊಡ್ಡವರ ಕಾರಣಕ್ಕಾಗಿ ಅಲ್ಲ. ಸಾಮಾನ್ಯನಲ್ಲಿ ಸಾಮನ್ಯನಾಗಿ ಬದುಕುತ್ತಾ ಮನುಷ್ಯಪರ ಮತ್ತು ಜೀವಪರ ಮೌಲ್ಯಗಳನ್ನು ಉಳಿಸಿಕೊಂಡ ಶ್ರೀಸಾಮಾನ್ಯನೇ ನಿಜಕ್ಕೂ ದೊಡ್ಡವನು. ಅಂಥ ಒಬ್ಬ ಶ್ರೇಷ್ಠ ಶ್ರೀಸಾಮಾನ್ಯ ರೊಬ್ಬರ ಜೀವನ ಕಥನವೇ ಈ ಕೃತಿ.

ಜೀವನ ಚರಿತ್ರೆಯ ಉತ್ತಮ ಕೃತಿ ಎಂದರೆ ಅದೊಂದು ಕೇವಲ ಒಬ್ಬರ ಜೀವನಾನುಭವದ ಸೀಮಿತ ಕಥನವಲ್ಲ; ಬದಲಾಗಿ ಆ ವ್ಯಕ್ತಿಯ ಸಮಕಾಲೀನವಾದ ಸಾಮಾಜಿಕಾರ್ಥಿಕ ಕಥನ. ಹಾಗೆಯೇ ವ್ಯಕ್ತಿಯೊಬ್ಬನ ಜೀವನ ಚರಿತ್ರೆ ಒಂದು ಒಡಕಲು ಬಿಂಬವಲ್ಲ; ಅವನ ಬಾಳಿನ ಆದರ್ಶಗಳನ್ನು ಮತ್ತು ಮೌಲ್ಯಗಳನ್ನು ಪುನರ್‌ಸ್ಥಾಪಿಸುವ ಜವಾಬ್ದಾರಿಯ ಕೆಲಸವೂ ಹೌದು. ಆ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿಭಾಯಿಸುವಲ್ಲಿ ಮಿತ್ರ ಡಾ.ವೀರಶೆಟ್ಟಿ ಅವರು ಸಫಲರಾಗಿದ್ದಾರೆ. ವ್ಯಕ್ತಿಯ ಜೀವನಾನುಭವದ ಜೊತೆಜೊತೆಗೇ ಸಮಕಾಲೀನ ಬದುಕಿನ ಗುಣದೋಷಗಳನ್ನೂ ಒರೆಗೆ ಹಚ್ಚಿದ್ದಾರೆ.

ಈ ಜೀವನ ಚರಿತ್ರೆಯ ನಾಯಕ ನಾನೀಗಾಗಲೇ ಹೇಳಿದಂತೆ ಲೌಕಿಕ ಸಂಪತ್ತನ್ನು ಗಳಿಸಿದ ವ್ಯಕ್ತಿಯಲ್ಲ; ಜ್ಞಾನದ ಶ್ರೀಮಂತಿಕೆ ಉಳ್ಳವರು.

ಅವರೇ ಶ್ರೀ ಶಿವಸ್ವಾಮಿ ಚೀನಕೇರಿ ಅವರು. ಬದುಕೆಂಬ ಕುದಿಹೆಸರಿನಲ್ಲಿ ಬೆಂದು, ಕಷ್ಟಗಳ ಸರಮಾಲೆಯನ್ನೇ ಅನುಭವಿಸಿ, ಜ್ಞಾನದೀಕ್ಷೆಯ ಮೂಲಕ ಬದುಕೆಂಬ ಬಂಡಾಯಕ್ಕೆ ಅಡಿ ಇಟ್ಟವರು. ಚಿನ್ನದ ಮೇಲೆ ಪಡೆದ ಸಾಲ ತೀರಿಸುವುದಕ್ಕಾಗಿ ಜೀತಕ್ಕೆ ಒಳಗಾದ ಶಿವಸ್ವಾಮಿ ಅವರ ತಂದೆಯ ಬದುಕೇ ಅವರ ಅಂದಿನ ಧಾರುಣ ಸ್ಥಿತಿಗಳನ್ನು ಅರಹುತ್ತದೆ. ಅಂಥ ಕಷ್ಟಗಳಲ್ಲೂ ಅನೇಕ ಕನಸುಗಳನ್ನು ಹೊತ್ತು ಜೀವನದ ಹೊಸ್ತಿಲಿಗೆ ಕಾಲಿಟ್ಟ ಬಾಲಕ ಶಿವಸ್ವಾಮಿ, ಈ ಜಗತ್ತನ್ನು ನೋಡಬೇಕಾದ ಕಣ್ಣುಗಳನ್ನೇ ಕಳೆದುಕೊಳ್ಳಬೇಕಾದ ದುರಂತ ಸ್ಥಿತಿಗೆ ತಲುಪುತ್ತಾನೆ. ನಾನು ಓದುತ್ತಿದ್ದ ಅಷ್ಟೊತ್ತೂ ಅವರಿಗೆ ಮತ್ತೆ ದೃಷ್ಟಿ ಬರುತ್ತದೆ ಎಂಬ ತಹತಹಿಕೆಯಲ್ಲಿಯೇ ಪುಟಗಳನ್ನು ತಿರುವಿಹಾಕಿದೆ. ಆದರೆ ಹಾಗಾಗಲಿಲ್ಲ. ಶಿವಸ್ವಾಮಿ ಜಗತ್ತಿನ ಕಣ್ಣಿಗೆ ಕುರುಡಾಗಿ ಉಳಿದರು.

ಆದರೆ, ಶಿವಸ್ವಾಮಿಯವರು ಆ ಅಂಥ ಬದುಕನ್ನು ಒಂದು ಸವಾಲಾಗಿ ಸ್ವೀಕರಿಸಿದರು. ಹೊರಗಣ್ಣು ಹೋದರೂ ಒಳಗಣ್ಣು ತೆರೆದರು! ಬಸವಣ್ಣ ಮತ್ತು ಅವರ ಅನುಯಾಯಿಗಳ ಕಾಯಕ ತತ್ವವನ್ನು ಜ್ಞಾನದ ಮಾರ್ಗಗಳನ್ನು ಬದುಕಿಗೆ ಬೆಸೆದುಕೊಂಡರು. ಪುಟ್ಟರಾಜ ಗವಾಯಿಗಳ ವಿದ್ಯಾಕೇಂದ್ರ ಮೊದಲ್ಗೊಂಡು ಹಲವು ಕಡೆ ಸಂಗೀತಾಭ್ಯಾಸ ಮಾಡಿದರು, ಬಯಲಾಟಗಳಿಗೆ ಹಾರ್ಮೋನಿಯಂ ನುಡಿಸಿದರು, ಹಲವು ವಿರೋಧಗಳ ನಡುವೆಯೂ ಲಿಂಗಾಯತ ಧರ್ಮ ಸ್ವೀಕರಿಸಿ ಬಸವತತ್ವ ಪ್ರವಚನಕಾರರಾಗಿ ಹೆಸರು ಪಡೆದರು. ಬಾಲ್ಯದಿಂದಲೂ ಹವ್ಯಾಸವಾಗಿದ್ದ ಸಾಹಿತ್ಯದ ಓದನ್ನು ಮುಂದುವರೆಸಿ ಭಾಷಾ ಪ್ರೌಢಿಮೆಯನ್ನು ಪಡೆದು ಕವಿಯಾಗಿ, ಕಥೆಗಾರರಾಗಿ, ವೈಚಾರಿಕ ಬರಹಗಳ ಎಚ್ಚೆತ್ತ ಲೇಖಕರಾಗಿಯೂ ಸಾಧನೆಗೈದರು. ಪ್ರವಚನ ಅವರಿಗೆ ಲೋಕಾನುಭವವನ್ನು ತಂದುಕೊಟ್ಟಿತು. ದಲಿತರು ಮತ್ತು ಮಹಿಳೆಯರ ಪರವಾದ ಅವರ ಚಿಂತನೆಗಳು ಎಂದಿಗೂ ಆದರ್ಶಮಯ. ಪರಿಸರದ ಬಗೆಗಿನ ಅವರ ಕಾಳಜಿ ಇವತ್ತಿನ ತುರ್ತು. 'ಕಾವಿಯ ಧರಿಸಿ ಭವಿಯಾಗಿಪ್ಪರ ಕಂಡೆ, ಖಾದಿಯ ಧರಿಸಿ ದೇಶ ವಿರೋಧಿಯಾಗಿಪ್ಪರ ಕಂಡೆ, ಖಾಕಿಯ ಧರಿಸಿ ಕಳ್ಳತನವ ಮಾಡುವವರ ಕಂಡೆ, ಇಂತಪ್ಪ ಮೂವರ ಲಾಂಛನಕ್ಕೆ ಶರಣೆನ್ನದೆ, ಲಾಂಛನಕ್ಕೆ ತಕ್ಕ

ನಡೆ ಉಳ್ಳವರಾದರೆ ಮಣಿವೆನಯ್ಯಾ' ಇದು ಅವರ ಸಾಹಿತ್ಯ ಚಿಂತನೆಯ ಒಂದು ಝಲಕ್! ಹೀಗೆ ಆಧ್ಯಾತ್ಮದೊಡನೆ ವೈಚಾರಿಕತೆಯೂ ಬೆರೆತಾಗ ಲೋಕದ ಕಣ್ಣು ತೆರೆಯುವ ಮಾರ್ಗ ಪ್ರಚುರವಾಗುತ್ತದೆ. ಅಂಥ 'ಆತ್ಮಜ್ಯೋತಿ' ಶಿವಸ್ವಾಮಿ ಚೀನಕೇರಿ ಅವರ ಚಿಂತನೆಯ ಕೇಂದ್ರವಾಗಿದೆ.

ಪುಟ್ಟದಾದರೂ ಸೊಗಸಾದ ಹಾಗೂ ಚಿಂತನಶೀಲವಾದ ಈ ಜೀವನ ಚರಿತ್ರೆಯನ್ನು ಅತ್ಯಂತ ಪ್ರಮಾಣಿಕ ಸ್ವರೂಪದಲ್ಲಿ ಕಟ್ಟಿಕೊಟ್ಟಿರುವ ವೀರಶೆಟ್ಟಿಯವರು ನಿಜಕ್ಕೂ ಅಭಿನಂದನಾರ್ಹರು. ಜೀವನ ವೃತ್ತಾಂತಗಳ ಜೊತೆಗೊತೆಗೇ ಅಂದಿನ ಆ ಭಾಗದ ಸಾಮಾಜಿಕ ಪರಿಸರ, ಸಾಂಸ್ಕೃತಿಕ ಸಂಗತಿಗಳು ಹಾಗೂ ಗ್ರಾಮೀಣ ಕ್ರೀಡಾ ವೈವಿಧ್ಯಗಳನ್ನು ಹದವಾಗಿ ಸೇರಿಸುವ ಮೂಲಕ ಸರಳ ಸುಂದರ ಭಾಷೆಯಲ್ಲಿ ನಿರೂಪಿಸಿರುವ ಈ ಬರಹ ಶಿವಸ್ವಾಮಿಯವರ ವ್ಯಕ್ತಿತ್ವದಂತೆಯೇ ಆಪ್ತವಾಗುತ್ತದೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧಿಕಾರಿಯಾಗಿ ಮಾತೃಭಾಷೆಯ ಸೇವೆಯನ್ನು ಅಹರ್ನಿಶಿಯಾಗಿ ಮಾಡುತ್ತಿರುವ ಡಾ.ವೀರಶೆಟ್ಟಿ ಅವರಿಂದ ಇನ್ನಷ್ಟು ಉತ್ತಮ ಕೃತಿಗಳು ಹೊರಬರಲಿ ಎಂದು ಹಾರೈಸುತ್ತೇನೆ.

ಈ ಮಾದರಿಯ ವಿನೂತನ ಯೋಜನೆಯನ್ನು ಹಮ್ಮಿಕೊಂಡ ಬೀದರ್ ಜಿಲ್ಲಾ ಕ.ಸಾ.ಪ. ಪ್ರಯತ್ನ ಉಳಿದೆಲ್ಲಾ ಜಿಲ್ಲಾ ಘಟಕಗಳಿಗೆ ಮಾದರಿ ಎನಿಸುತ್ತದೆ. ಆ ಕಾರಣವಾಗಿ ಜಿಲ್ಲಾ ಕ.ಸಾ.ಪ. ಅಧ್ಯಕ್ಷರಿಗೂ ಹಾಗೂ ಪದಾಧಿಕಾರಿಗಳಿಗೂ ಈ ಮೂಲಕ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ.

–ಪ್ರೊ. ಹಿ.ಚಿ.ಬೋರಲಿಂಗಯ್ಯ.

ಖ್ಯಾತ ಬರಹಗಾರರು ಹಾಗೂ ವಿಶ್ರಾಂತ ಕುಲಪತಿಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಸದಭಿಪ್ರಾಯ

ಪ್ರಾಮಾಣಿಕ ದುಡಿಮೆಗಾರ

ಡಾ. ವೀರಶೆಟ್ಟರು ನನ್ನ ಆತ್ಮೀಯರು. ಪರಿಚಯ ಸುದೀರ್ಘವಾದದ್ದಲ್ಲವಾದರೂ ಮಿತ ಸಮಯದಲ್ಲಿಯೇ ಹಿತೈಷಿಯಾಗಿ ಆಪ್ತರಾದವರು. ಇವರನ್ನು ನನಗೆ ಪರಿಚಯಿಸಿದವರೂ ಮಿತ್ರರಾದ ಕೆ.ಎ ದಯಾನಂದ ಅವರು. ಶಿವಮೊಗ್ಗ ಜಿಲ್ಲಾಧಿಕಾರಿಯಾಗಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾಗಿ ಅದ್ಭುತವಾಗಿ ಕೆಲಸ ಮಾಡಿ ಹೆಸರು ಮಾಡಿದ ದಕ್ಷ ಪ್ರಾಮಾಣಿಕ ಅಧಿಕಾರಿ ಅವರು. ೨೦೧೭ರ ಒಂದು ದಿನ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರ ಕೊಠಡಿಗೆ ಒಬ್ಬ ಹುಡುಗನನ್ನು ಕರೆತಂದು ನಿಮ್ಮಲ್ಲಿ ಆಪ್ತ ಕಾರ್ಯದರ್ಶಿ ಹುದ್ದೆ ಖಾಲಿ ಇದೆಯಲ್ಲಾ ಸಾರ್ ಇವರು ಡಾ. ವೀರಶೆಟ್ಟಿ, ಇವರನ್ನು ಆ ಹುದ್ದೆಗೆ ಸೇರಿಸಿಕೊಳ್ಳಿ. ಪ್ರಾಮಾಣಿಕವಾಗಿ ಕೆಲಸ ಮಾಡುತ್ತಾರೆ. ಸದ್ಯದಲ್ಲಿ ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆಯಲ್ಲಿ ಸಹಾಯಕ ನಿರ್ದೇಶಕರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ ಎಂದು ಹೇಳಿದರು. ಅವರ ಮಾತಿಗೆ ಪ್ರತಿ ಮಾತನಾಡದೇ ನಾನು ಒಪ್ಪಿಗೆ ನೀಡಿದೆ. ಅದಕ್ಕೆ ಕಾರಣ ಅವರು ಬಳಸಿದ 'ಪ್ರಾಮಾಣಿಕವಾಗಿ' ಕೆಲಸ ಮಾಡುತ್ತಾರೆ ಎಂಬ ಪದ. ಆಗ ಪರಿಚಯವಾದದ್ದು ನನಗೆ ಆಪ್ತ ಕಾರ್ಯದರ್ಶಿಯಾಗಿ ೨ ವರ್ಷ ದುಡಿದದ್ದು ಇವೆಲ್ಲಾ ನೆನಪಿಸಿಕೊಂಡರೆ ಹೃದಯ ತುಂಬಿ ಬರುತ್ತದೆ. ಕಾರಣ ಅಂದು ದಯಾನಂದ ಬಳಸಿದ ಪದಕ್ಕೆ ಒಂದು ಅಣುರೇಣುವಿನಷ್ಟೂ ಎರವಾಗದಂತೆ ದುಡಿದವರು ವೀರಶೆಟ್ಟರು. ಶರಣರ ಪರಂಪರೆಯ 'ಸತ್ಯಶುದ್ಧ ಕಾಯಕಜೀವಿ' ಎಂಬ ಮಾತಿಗೆ ಅನ್ವರ್ಥವಾಗಿ ಬದುಕಿದವರು ಬದುಕುತ್ತಿರುವವರು. ಕನ್ನಡದ ಬಗ್ಗೆ ಅವರಿಗೆ ತುಂಬು ಗೌರವದ ಅಭಿಮಾನ. ಅದು ಒಣ ಅಭಿಮಾನವಲ್ಲ, ಆತ್ಮನಿಷ್ಠೆಯ ಪ್ರೇಮ. ಕನ್ನಡ ಅಭಿವೃದ್ಧಿ

ಪ್ರಾಧಿಕಾರದಲ್ಲಿ ಆ ಅವಧಿಯಲ್ಲಿ ನಮ್ಮ ಸಮಿತಿ ಏನಾದರೂ ಕಿಂಚಿತ್ ಕೆಲಸ ಮಾಡಿದ್ದರೆ ಅದಕ್ಕೆ ಅಲ್ಲಿ ತೊಡಗಿಸಿಕೊಂಡಿದ್ದ ಡಾ.ವೀರಶೆಟ್ಟಿ, ಡಾ.ಕೆ.ಮುರಳಿಧರ, ಎಸ್.ಮಂಜುನಾಥ್ ಹಾಗೂ ಅಲ್ಲಿ ಸೇವಾ ನಿರತರಾಗಿದ್ದ ಎಲ್ಲಾ ನೌಕರ ಬಂಧುಗಳು ಕಾರಣ. ಅವರ ಒಗ್ಗೂಡಿದ ಕಾರ್ಯಸಾಧನೆ ಅದು ಪ್ರಾಧಿಕಾರದ ಹಿರಿಮೆಗೆ ಕಾರಣವಾಯಿತು. ಡಾ.ವೀರಶೆಟ್ಟಿಯವರು ಇತಿಹಾಸದ ವಿದ್ಯಾರ್ಥಿ. ಅದರ ಜೊತೆಗೆ ಕನ್ನಡ ಸಾಹಿತ್ಯವನ್ನು ಆಳವಾಗಿ ಅಧ್ಯಯನ ಮಾಡಿದ್ದಾರೆ. ಅದರಲ್ಲೂ ವಚನ ಸಾಹಿತ್ಯದ ಬಗ್ಗೆ ವಿಶೇಷವಾದ ಆಸಕ್ತಿ. ಇಷ್ಟು ಹೇಳಿದರೆ ಅವರ ನಿಜವಾದ ವ್ಯಕ್ತಿತ್ವವನ್ನು ಹೇಳಿದಂತಾಗಲಿಲ್ಲ. ನಾನು ಕಂಡ ಅವರ ಕಾರ್ಯತತ್ಪರತೆ ಅವರ ಯಶಸ್ಸಿನ ಹಿರಿಮೆಯನ್ನು ಕಾಣಿಸುವಂಥದ್ದು ಅನ್ನಿಸಿದೆ. ಕನ್ನಡದ ಅನುಷ್ಠಾನದ ಬಗ್ಗೆ ಆಡಳಿತವರ್ಗ ತೋರುತ್ತಿದ್ದ ನಿರ್ಲಕ್ಷ್ಯ, ಅದರಲ್ಲೂ ಕೆಲವು ಅಧಿಕಾರಿಗಳು ಕನ್ನಡವನ್ನು ತುಂಬಾ ತಾತ್ಸಾರದಲ್ಲಿ ಕಡೆಗಣಿಸುತ್ತಿದ್ದ ರೀತಿ ಇದೆಲ್ಲಕ್ಕೂ ಚಾಟಿ ಬೀಸುವ ಕೆಲಸವನ್ನು ಪ್ರಾಧಿಕಾರ ಮಾಡುತ್ತಾ ಬಂದಾಗ ಅದರಲ್ಲಿ ಪತ್ರ ವ್ಯವಹಾರದ ಪಾತ್ರ ಪ್ರಮುಖವಾದದ್ದು. ಈ ಕಾರ್ಯವನ್ನು ಒಂದು ಸಮರದ ರೀತಿಯಲ್ಲಿ ಒಂದರಹಿಂದೊಂದು ಪತ್ರ ಬರೆದು ಅನುಪಾಲನಾ ವರದಿ ತರಿಸಿಕೊಂಡು ಎಚ್ಚರಿಸುವ ಕಾರ್ಯವನ್ನು ವೀರಶೆಟ್ಟರು ವೀರವ್ರತದಂತೆ ಮಾಡುತ್ತಿದ್ದರು. ನಮ್ಮ ಅವಧಿಯಲ್ಲಿ ಈ ಬಗೆಯ ಪತ್ರ ವ್ಯವಹಾರ ಸಾವಿರಗಟ್ಟಲೇ ಆಗಿತ್ತು ಎಂಬುದು ಕಾರ್ಯವನ್ನು ಗುರಿ ಮುಟ್ಟಿಸುವ ಕಟಿಬದ್ಧ ಪ್ರಯತ್ನಕ್ಕೆ ಸಾಕ್ಷಿ. ಹೀಗೆ ಮಾಡದಿದ್ದರೆ ಅಧಿಕಾರಿಗಳು ಪರಿಶೀಲನೆ ಮರೆವು ಎಂಬ ಮಂತ್ರದಲ್ಲಿ ತಿಪ್ಪೇಸಾರಿಸುವ ಕಾರ್ಯ ಮಾಡಿ ಕನ್ನಡ ಅನುಷ್ಠಾನವನ್ನು ಕಾಗದದಲ್ಲಿ ಮಾತ್ರ ತೋರಿಸುವ ತೋರಿಕೆ ಅಭಿವೃದ್ಧಿಗೆ ನಿಲ್ಲಿಸಿ ಬಿಡುತ್ತಿದ್ದರು. ಆದರೆ ಹಾಗಾಗದಂತೆ ಪ್ರತಿಯೊಂದು ಇಲಾಖೆಯ ದೈನಂದಿನ ಆಗುಹೋಗುಗಳಲ್ಲಿ ಕನ್ನಡ ಬಳಕೆಯನ್ನು 'ಕಟ್ಟೆಚ್ಚರದ ಪ್ರಜ್ಞೆ'ಯಲ್ಲಿ ಕಣ್ಣಿಟ್ಟು ನೋಡುವ ಕಾರ್ಯವನ್ನು ಡಾ.ವೀರಶೆಟ್ಟರು ನಿರ್ವಹಿಸುತ್ತಿದ್ದರು. ಇದು ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಶಕ್ತಿ ನೀಡಿದ ಕಾರ್ಯತತ್ಪರತೆ ಎಂದರೆ ಅದು ಉತ್ಪ್ರೇಕ್ಷೆಯಲ್ಲ.

ಪ್ರತಿದಿನ ದಿನಪತ್ರಿಕೆಗಳಲ್ಲಿ ಬರುವ ಕನ್ನಡ ವಿರೋಧಿ ನಡೆಯ ಸುದ್ದಿಗಳಿದ್ದರೆ ಅವುಗಳನ್ನು ಪಟ್ಟಿಮಾಡಿ ತಂದು ಸಂಬಂಧಿಸಿದವರಿಗೆ ಎಚ್ಚರಿಕೆಯ ಪತ್ರ

ಬರೆದು, ಸ್ಪಷ್ಟೀಕರಣ ಕೇಳುವ ಕಾರ್ಯವನ್ನು ನಿಗಾ ಇಟ್ಟು ಮಾಡುತ್ತಿದ್ದರು. ಇದು ಅವರ ಕಾರ್ಯನಿಷ್ಠಗೆ ಮತ್ತೊಂದು ಉದಾಹರಣೆ.

ತಮ್ಮ ಸೇವಾ ನಿಷ್ಠೆಯ ಜೊತೆಗೆ ಸಾಹಿತ್ಯದ ಓದು ಹಾಗೂ ತಮ್ಮ ಶೈಕ್ಷಣಿಕ ವಿಷಯದ ಸಂಶೋಧನೆ ಈ ಕಡೆಗೂ ಅವರೂ ಗಮನ ಹರಿಸುತ್ತಿದ್ದದ್ದು ಅವರ ಬೆಳವಣಿಗೆಯ ಭಾಗವಾಗಿತ್ತು. ಸಮಯ ಪಾಲನೆ, ಕರ್ತವ್ಯ ಪ್ರಜ್ಞೆಯ ಜೊತೆಗೆ ಸಾಮಾಜಿಕ ಕಾಳಜಿ ಅವರ ವ್ಯಕ್ತಿತ್ವದ ಮೂಲ ಅಸ್ಮಿತೆಗಳಾಗಿದ್ದವು. ಅವರು ಇಂದು 'ಹಾವಸೆಗಲ್ಲಿನ ಪ್ರಥಿಕ ಶಿವಸ್ವಾಮಿ ಚೀನಕೇರಿ' ಅವರ ಜೀವನ ಚರಿತ್ರೆ ಬರೆದಿದ್ದಾರೆ. ಇತಿಹಾಸದ ವಿದ್ಯಾರ್ಥಿಯಾಗಿ ಈ ಸಾಧಕನ ಬಗ್ಗೆ ಅವರು ಕಲೆಹಾಕಿದ ಮಾಹಿತಿಗಳು ಹಾಗೂ ಅವನ್ನು ಬರಹಕ್ಕೆ ಇಳಿಸುವಾಗ ಸಾಮಾಜಿಕ ಜವಾಬ್ದಾರಿ ಇಟ್ಟುಕೊಂಡಂತೆ ವಸ್ತುಸಂಗತಿಗೆ ಎರವಾಗದೇ ಶೋಧಿಸಿ ನಿರೂಪಿಸಿದ್ದಾರೆ. ಅವರಿಂದ ಸರ್ಕಾರಿ ಸೇವಾಕ್ಷೇತ್ರಕ್ಕೆ ಹೆಚ್ಚು ಅನುಕೂಲವಿದೆ. ಅಂತಹವರ ಬಳಗ ಬಳಿಸಾಲು ಹೆಚ್ಚಬೇಕು. ಅವರು ಯಾರೆಂಥವರ ಸ್ನೇಹ ಮಾಡಿದ್ದರೂ ಎಂಬುದಕ್ಕೆ ಒಂದೇ ಒಂದು ಉದಾಹರಣೆ ಕೋ.ಚೆನ್ನಬಸಪ್ಪನವರು. ಕೋಚೆಯವರಿಗೆ ಇವರು ಆಪ್ತರಾಗಿದ್ದ ಕಿರಿಯ ಮಿತ್ರ. ಕೋಚೆಯವರು ಇವರ ಸಹಾಯದಿಂದ ಎಷ್ಟೋ ಪತ್ರಗಳ ರವಾನೆ ಕಾರ್ಯವನ್ನು ಸಲೀಸಾಗಿ ಮಾಡುತ್ತಿದ್ದರು. ಅಂಥಾ ಹಿರಿಯರ ಬಗ್ಗೆ ವೀರಶೆಟ್ಟರಿಗೆ ಗೌರವ ಮಾತ್ರವಲ್ಲ ಅವರ ದಾರಿ ನನ್ನ ಜೀವನಪಥ ಎಂದು ಭಾವಿಸಿದ್ದಾರೆ. ಇದು ಮುಖ್ಯ ವಿಚಾರ. ಗೆಳೆಯರಾದ ವೀರಶೆಟ್ಟರಿಗೆ ಈ ಸಂದರ್ಭದಲ್ಲಿ ತುಂಬು ಅಭಿನಂದನೆ ಹೇಳುತ್ತೇನೆ.

–ಪ್ರೊ.ಎಚ್.ಜಿ ಸಿದ್ಧರಾಮಯ್ಯ.
ಖ್ಯಾತ ಲೇಖಕರು ಮತ್ತು ಸಂಸ್ಕೃತಿ ಚಿಂತಕರು

ಅಕ್ಷರ ಪ್ರೀತಿಯ ನುಡಿ
(ಪ್ರಕಾಶಕರ ಮಾತು)

ಕನ್ನಡ, ಕನ್ನಡಿಗ, ಕರ್ನಾಟಕದ ಸಮಗ್ರ ಏಳಿಗೆ ಹಾಗೂ ಕನ್ನಡ ಭಾಷೆ, ಸಾಹಿತ್ಯ ಮತ್ತು ಸಾಂಸ್ಕೃತಿಕ ನೆಲೆಗಳನ್ನು ಕಟ್ಟುವ ಮಹದುದ್ದೇಶದಿಂದ ಕನ್ನಡ ಸಾಹಿತ್ಯ ಪರಿಷತ್ತು ಹುಟ್ಟಿಕೊಂಡಿದೆ. ಅದರ ಆಶಯಕ್ಕೆ ತಕ್ಕಂತೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಕ್ರಿಯಾಶೀಲವಾಗಿದೆ. ಐತಿಹಾಸಿಕ, ಸಾಹಿತ್ಯಿಕ, ಸಾಂಸ್ಕೃತಿಕ ಶ್ರೀಮಂತಿಕೆ ಹೊಂದಿರುವ ಬೀದರ ಜಿಲ್ಲೆಯ ಪ್ರಬಲ ಇಚ್ಛಾಶಕ್ತಿ, ಇಚ್ಛಾಸಕ್ತಿಯ ಕೊರತೆಯಿಂದಾಗಿ ಈ ಭಾಗ ಹಿಂದುಳಿದ ಹಣೆಪಟ್ಟಿಹೊತ್ತಿರುವುದರಿಂದ ಕನ್ನಡ ಸಾಹಿತ್ಯ ಪರಿಷತ್ತು ಸ್ಥಳೀಯ ಕಲೆ, ಸಾಹಿತ್ಯ, ಸಂಸ್ಕೃತಿಯ ಸಂವರ್ಧನೆಗಾಗಿ ಅನೇಕ ಕಾರ್ಯಚಟುವಟಿಕೆಗಳನ್ನು ಆಯೋಜಿಸಿದೆ. ಜಾಗತೀಕರಣದ ಕರಿನೆರಳಿನಿಂದ ಸ್ಥಳೀಯ ಭಾಷೆ ಸಂಸ್ಕೃತಿ ನಲುಗುತ್ತಿರುವಾಗ ಅವನ್ನು ಉಳಿಸುವ ಹೋರಾಟದ ಹಲವು ದಾರಿಗಳು ಕಟ್ಟಿಕೊಳ್ಳಬೇಕಾಗಿದೆ. ಅದರಲ್ಲಿ ಗಡಿಭಾಗದಂಥ ಬೀದರ ನೆಲದಲ್ಲಿ ಇನ್ನೂ ಹೆಚ್ಚು ರಚನಾತ್ಮಕ ಕಾರ್ಯಗಳ ಮೂಲಕ ಪಾಶ್ಚಾತ್ಯ ಸಂಸ್ಕೃತಿ, ಪರಭಾಷೆಗಳಿಗೆ ಸವಾಲಾಗಿ ನಿಲ್ಲುವ ಅಗತ್ಯತೆ ಇದೆ. ಈ ಹಿನ್ನಲೆಯಲ್ಲಿ ಪರಿಷತ್ತು ಕಾರ್ಯನಿರತವಾಗಿದೆ.

ಮಾಹಿತಿ ತಂತ್ರಜ್ಞಾನ ಬೆಳೆದಂತೆ ಆಧುನಿಕತೆ ಹೆಚ್ಚಾಗಿ ಜೀವನ ಪ್ರೀತಿ ಕಡಿಮೆಯಾಗುತ್ತಿದೆ. ವಿದ್ಯುನ್ಮಾನ (ಎಲೆಕ್ಟ್ರಾನಿಕ್) ಗ್ಯಾಜೆಟ್ ಲೋಕದಲ್ಲೇ ಮುಳುಗುತ್ತಿರುವ ನಮಗೆ ಅಕ್ಷರ ಲೋಕದ ಪುಸ್ತಕ ಸಂಸ್ಕೃತಿಯ ಉಳಿವು ಅಷ್ಟೇ ಮುಖ್ಯವಾಗಿದೆ. ಆದ್ದರಿಂದ ಸ್ಥಳೀಯ ಲೇಖಕರು, ಕಲಾವಿದರನ್ನು, ಪ್ರತಿಭೆಗಳನ್ನು ಪ್ರೋತ್ಸಾಹಿಸುವುದು, ಸ್ಥಳೀಯ ಕಲೆ, ಸಾಹಿತ್ಯವನ್ನು ಸಾಂಸ್ಕೃತಿಕವಾಗಿ ದಾಖಲಿಸುವುದು, ಕನ್ನಡಿಗರಲ್ಲಿ ಓದುವ ಅಭಿರುಚಿಯನ್ನು ಮೂಡಿಸುವುದು. ಒಟ್ಟಾರೆ ಕನ್ನಡ ನಾಡು, ನುಡಿ, ನೆಲ, ಜಲ, ಜನ ಭಾಷೆ, ಸಾಹಿತ್ಯ ಈ ಎಲ್ಲವುಗಳ ಹಿತಚಿಂತನೆಯೊಂದೆ ನಮ್ಮ ಮೊದಲ ಮತ್ತು ಕೊನೆಯ ಆಶಯವಾಗಿದೆ. ಈ ಹಿನ್ನಲೆಯಲ್ಲಿ ಈಗಾಗಲೇ ಕೆಲ ಕೃತಿಗಳನ್ನು ಪ್ರಕಟಿಸಲಾಗಿದೆ. ಬಹುಮುಖ್ಯವಾಗಿ

ಸ್ಥಳೀಯ ಕಲೆ, ಸಾಹಿತ್ಯ, ಶಿಕ್ಷಣ, ಸಮಾಜ ಮೊದಲಾದ ಸಾಂಸ್ಕೃತಿಕ ಸಂಗತಿಗಳನ್ನು ರಚನಾತ್ಮಕವಾಗಿ ಕಟ್ಟುವಲ್ಲಿ ಅನೇಕ ಮಹನೀಯರ ಪರಿಶ್ರಮವಿದೆ. ಸಮಾಜೋಸಾಂಸ್ಕೃತಿಕ ಏಳಿಗೆಗಾಗಿ ತಮ್ಮನ್ನು ಗಂಧದ ಕೊರಡಂತೆ ಸವೆಸಿಕೊಂಡಿದ್ದಾರೆ. ಅಂಥವರ ಜೀವನ ಸಾಧನೆ ಕಾಲದಲ್ಲಿ ಮರೆಯಾಗದೆ ಒಂದು ಸಾಂಸ್ಕೃತಿಕ ದಾಖಲೆಯಾಗಬೇಕೆಂಬ ಸದಾಶಯದಿಂದ ಸಾಂಸ್ಕೃತಿಕ ಚಿಂತಕರು ಮಾಲಿಕೆ ಆರಂಭಿಸಲಾಗಿದ್ದು ೧೭ನೆಯ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಅಂಗವಾಗಿ ಮೊದಲ ಹಂತದಲ್ಲಿ ೧೭ ಪುಸ್ತಕ ಹೊರತರುವ ಉದ್ದೇಶದಿಂದ ಈ ಕೃತಿಗಳನ್ನು ಪ್ರಕಟಿಸಲಾಗುತ್ತಿದೆ. ಮುಂಬರುವ ದಿನಗಳಲ್ಲಿ ಸ್ಥಳೀಯ ಎಲ್ಲ ಸಾಂಸ್ಕೃತಿಕ ಚಿಂತಕರ ಜೀವನ ಸಾಧನೆ ಕುರಿತ ಪುಸ್ತಕಗಳನ್ನು ಹೊರತರಲಾಗುವುದು.

ನಮ್ಮ ಮಧ್ಯದ ಅಪರೂಪದ ಇತಿಹಾಸಕಾರರು, ಸಾಹಿತಿಗಳಾದ **ಡಾ. ವೀರಶೆಟ್ಟಿ ಗಾರಂಪಳ್ಳಿಯವರು** ಬರೆದ **ಹಾವಸೆಗಲ್ಲಿನ ಪಥಿಕ ಶಿವಸ್ವಾಮಿ ಚೀನಕೇರಿ** ಜೀವನ ಸಾಧನೆ ಎಂಬ ಪುಸ್ತಕ ಪ್ರಕಟಿಸಲು ಹೆಮ್ಮೆ, ಸಂತೋಷವೆನಿಸುತ್ತದೆ. ಶಿವಸ್ವಾಮಿ ಚೀನಕೇರಿ ಅವರು ಅಪ್ಪಟ ಬಸವತತ್ವನಿಷ್ಠರು. ವೈಚಾರಿಕ, ತಾತ್ವಿಕ ಕಾರಣಕ್ಕಾಗಿ ತಮ್ಮ ಬಂಡಾಯದ ಮೂಲಕ ಈ ಭಾಗದಲ್ಲಿ ಬಹುದೊಡ್ಡ ಕ್ರಾಂತಿ ಮಾಡಿರುವರು. ಅವರು ಶರಣ ತತ್ವದ ಸಮತಾವಾದವನ್ನು, ದಾಸೋಹ ತತ್ವವನ್ನು ನಿಜಾಚರಣೆಯಲ್ಲಿ ತಂದ ಶ್ರೀಯುತರ ಬದುಕು ಬರಹ ಕುರಿತ ಚಿಂತನೆ ಮಾಡುವುದು, ಅದನ್ನು ಪುಸ್ತಕ ರೂಪದಲ್ಲಿ ಹೊರತರುವುದು ನಾಗರಿಕ ಸಮಾಜದ ಆದ್ಯ ಕರ್ತವ್ಯವೆಂದು ಭಾವಿಸಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಈ ಕೈಂಕರ್ಯ ಪೂರೈಸುತ್ತಿದೆ. ಪ್ರಸ್ತುತ ಪುಸ್ತಕಕ್ಕೆ ಮೌಲಿಕ ಮುನ್ನುಡಿ ಬರೆದು ಕೃತಿಯ ಮೌಲ್ಯ ಹೆಚ್ಚಿಸಿದ ನಾಡೋಜ ಡಾ. ಮನು ಬಳಿಗಾರ ಅವರನ್ನು ತುಂಬು ಹೃದಯದಿಂದ ನೆನೆಯುತ್ತೇವೆ. ಈ ಕೃತಿಯನ್ನು ಬೀದರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಪ್ರಕಟಿಸಲು ಅನುಮತಿ ನೀಡಿರುವ ಲೇಖಕರಿಗೂ ವಿಶೇಷವಾಗಿ ಕನ್ನಡ ಸಾಹಿತ್ಯ ಪರಿಷತ್ತಿನ ಎಲ್ಲ ಪದಾಧಿಕಾರಿಗಳಿಗೂ ವಂದನೆಗಳು.

ಸುರೇಶ ಚನಶೆಟ್ಟಿ
ಅಧ್ಯಕ್ಷರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಬೀದರ

ಸಾಂಸ್ಕೃತಿಕ ಚಿಂತಕರು

ಹಿಂದಣ ಹೆಜ್ಜೆಯನರಿತಲ್ಲದೆನಿಂದ ಹೆಜ್ಜೆಯನರಿಯಬಾರದೆಂಬ ಅಲ್ಲಮ ಪ್ರಭುದೇವರ ಮಾತು ಇತಿಹಾಸದ ಪ್ರಾಮುಖ್ಯತೆಯನ್ನು ಒತ್ತಿ ಹೇಳುತ್ತದೆ. ಇತಿಹಾಸವೆಂದರೆ ಕೇವಲ ರಾಜ ಮಹಾರಾಜರ ವೈಭವದ ಬದುಕು, ಕೋಟೆ ಕೊತ್ತಲಗಳೇ ಅಲ್ಲ, ರಾಜ ಪರಿವಾರದ ಪರಿಸರ, ಅರಸರ ಸುತ್ತಲಿನ ಜನ ಸಾಮಾನ್ಯರ ಬದುಕಿನ ಏಳುಬೀಳುಗಳು, ಸಮಕಾಲೀನ, ಕಲೆ, ಸಾಹಿತ್ಯ, ಸಂಸ್ಕೃತಿ ಅವುಗಳ ಬೆಳವಣಿಗೆಗೆ ಪೂರಕವಾದ ಅಂಶಗಳೆಲ್ಲ ಸೇರಿ ಇತಿಹಾಸವಾಗುತ್ತದೆ. ಚಾರಿತ್ರಿಕವಾದ ಒಂದು ಕೋಟೆಗೆ ಎಷ್ಟು ಮಹತ್ವವೋ ಒಂದೂರಿನ ಹಳೆ ವಾಡೆ(ಘೂಡೆ)ಗಳಿಗೂ ಅಷ್ಟೇ ಮಹತ್ವವಿರುತ್ತದೆ. ಒಬ್ಬ ರಾಜ ರಾಣಿಗೆ ಇರುವಷ್ಟೆ ಮಹತ್ವ ಒಂದೂರಿನ ಜನಪರ ಕಾಳಜಿಯ ವ್ಯಕ್ತಿಗಳಿಗೂ ಇರುತದೆ. ಅಂಥ ಸಾಂಸ್ಕೃತಿಕ ವ್ಯಕಿಗಳ ಕಾರ್ಯ ಸಾಧನೆ ಕಾಲಗತಿಯಲ್ಲಿ ಮರೆಯಾಗಬಾರದೆಂಬ ಕಾರಣವಾಗಿ ಕಲೆ, ಸಾಹಿತ್ಯ, ಶಿಕ್ಷಣ, ಸಮಾಜ ಮೊದಲಾದ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿ ಸಮಾಜಕ್ಕೆ ಬೆಳಕಾದ ಸಾಧಕರ ಜೀವನ ಸಾಧನೆ ದಾಖಲಿಸಬೇಕಾಗಿರುವುದು ಪ್ರಜ್ಞಾವಂತ ಸಮಾಜದ ಹೊಣೆಗಾರಿಕೆ ಎಂದರಿತು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತು ಈ **ಸಾಂಸ್ಕೃತಿಕ ಚಿಂತಕರು ಮಾಲಿಕೆ** ಆರಂಭಿಸಿದೆ. ೧೭ನೆಯ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಅಂಗವಾಗಿ ಮೊದಲ ಹಂತದಲ್ಲಿ ೧೭ ಪುಸ್ತಕ ಹೊರತರುವ ಉದ್ದೇಶದಿಂದ ಈ ಕೃತಿಗಳನ್ನು ಪ್ರಕಟಿಸಲಾಗುತ್ತಿದೆ. ಮುಂಬರುವ ದಿನಗಳಲ್ಲಿ ಸ್ಥಳೀಯ ಎಲ್ಲ ಸಾಂಸ್ಕೃತಿಕ ಚಿಂತಕರ ಜೀವನ ಸಾಧನೆ ಕುರಿತ ಪುಸಕಗಳನ್ನು ಹೊರತರಲಾಗುವುದು. ಹಿತ್ತಲ ಗಿಡ ಮದ್ದಲ್ಲ, ತಮ್ಮ ತಮ್ಮ ನೆಲದಲ್ಲಿ ಸಾಧಕರಿಗೆ ಮನ್ನಣೆ ದೊರೆಯಲಾರದು ಎಂಬ ತೆಳು ಗ್ರಹಿಕೆಯ ಮಾತಿವೆ. ಅದನ್ನು ಹುಸಿಗೊಳಿಸಲು ಸಾಧಕರ ಜೀವನ ಚರಿತ್ರೆ ಈ ಯೋಜನೆ ರೂಪಿಸಲಾಗಿದೆ. ಸಾಮಾನ್ಯವಾಗಿ ಜೀವನ ಚರಿತ್ರೆಗಳು ವಿವರಗಳ ಕಟ್ಟಾಗಿರುತ್ತವೆ. ಆದರೆ ಈ ಮಾಲಿಕೆಯ ಕೃತಿಗಳು ಹಾಗಲ್ಲ. ನಮ್ಮೆಲ್ಲರ ಅಂತಃಶಕ್ತಿ, ಪ್ರೇರಣೆಯಾಗಿದ್ದು, ಸತ್ಯ, ದಕ್ಷತೆ, ಪ್ರಾಮಾಣಿಕತೆ, ಕಾಯಕ ನಿಷ್ಠೆ, ದಾಸೋಹ ಜೀವನ, ಸಮಯ ಪ್ರಜ್ಞೆ ಇವುಗಳಿಗೆ ವ್ಯಾಖ್ಯಾನ ಬರೆದಂತೆ ಬದುಕಿದವರ ಚರಿತ್ರೆಗಳನ್ನು ಆಯ್ದುಕೊಳ್ಳಲಾಗಿದೆ ಇದೊಂದು ಅಪರೂಪದ ಮಾಲಿಕೆ. ಈ ಪುಸಕಗಳಲ್ಲಿ ಏಕಕಾಲಕ್ಕೆ ಹಲವು ವ್ಯಕಿಗಳ ಸಂಬಂಧಗಳನ್ನು ಜೋಡಿಸುವ, ಸಮಕಾಲೀನ ಸಾಂಸ್ಕೃತಿಕ ಚಿಂತನೆಗಳನ್ನು ಸಂಕ್ಷಿಪ್ತವಾಗಿ ದಾಖಲಿಸುವ ಮೂಲಕ ಪರಿಪೂರ್ಣ ರೂಪದ ಜೀವನ ಚರಿತ್ರೆ ಕಟ್ಟಿಕೊಡಲಾಗುತಿದೆ. ಮುಂದಿನ ದಿನಗಳಲ್ಲಿ ಈ ಸಾಧಕರ ಕುರಿತು ಅಧ್ಯಯನ ಮಾಡುವವರೆಗೆ ಈ ಕೃತಿ ಮೂಲ ಆಕರವಾಗುತ್ತದೆ ಎಂಬುದರಲ್ಲಿ ಅನುಮಾನವಿಲ್ಲ.

ಡಾ. ಬಸವರಾಜ ಬಲ್ಲೂರ

ನನ್ನ ನುಡಿ

ಜೀವನ ಚರಿತ್ರೆಗಳು ಕನ್ನಡದಲ್ಲಿ ಒಂದು ಸಾಹಿತ್ಯ ಪ್ರಕಾರವಾಗಿ ಬೆಳೆದು ಬಂದಿದ್ದು ಇತ್ತೀಚಿಗೆ. ಅದು ಪಾಶ್ಚಾತ್ಯ ಸಾಹಿತ್ಯದ ಪ್ರಭಾವದಿಂದ ಎನ್ನಬಹುದು. ಮಹಾಪುರುಷರ ಜೀವಿತದ ಸಾಧನೆ ಸಿದ್ಧಿಗಳನ್ನು, ದೇಶಾಭಿಮಾನವನ್ನು, ಉನ್ನತ ಧ್ಯೇಯ ಧೋರಣೆಗಳನ್ನು ಜನತೆಯ ಮನಸ್ಸಿನಲ್ಲಿ ಬಿತ್ತುವ ಉದ್ದೇಶದಿಂದಾಗಿ ಜೀವನ ಚರಿತೆಗಳು ಮುಖ್ಯವೆನಿಸುತ್ತವೆ. ಜೀವನದಲ್ಲಿ ಸೋತು ಹತಾಶೆಗೊಂಡವರ ಬದುಕಿಗೊಂದು ಆಶಾಕಿರಣ ನೀಡುವಲ್ಲಿ ಪ್ರಮುಖ ಪಾತ್ರಗಳನ್ನು ವಹಿಸುತ್ತವೆ. ಹಾಗಾಗಿ ಪ್ರಾಚೀನ ಕಾಲದಿಂದಲೂ ಸಾಹಿತ್ಯ ಪರಂಪರೆಯಲ್ಲಿ ಈ ಮಾದರಿಯ ಬರವಣಿಗೆಗಳನ್ನು ನೋಡಲು ನಮಗೆ ಸಿಗುತ್ತದೆ. ಆರಂಭದಲ್ಲಿ ಧಾರ್ಮಿಕ ಪುರುಷರ, ಸಾಧು ಸಂತರ, ಸಮಾಜ ಸುಧಾರಕರ, ರಾಜ ಮಹಾರಾಜರ ಜೀವನ ಚರಿತ್ರೆಗಳು ಬಂದವು. ನಂತರ ಅವುಗಳ ವಿಷಯವೈವಿಧ್ಯ ವಿಸ್ತಾರಗೊಂಡಂತೆ ರಾಜಕಾರಣಿಗಳ, ವಿಜ್ಞಾನಿಗಳ, ಕವಿಗಳ ಜೀವನ ಚರಿತ್ರೆಗಳು ಪ್ರಕಟಗೊಳ್ಳಲಾರಂಭಿಸಿದವು. ಸಾಹಿತ್ಯದ ವಿವಿಧ ರಂಗಗಳಲ್ಲಿ ಕೆಲಸ ಮಾಡಿದ ಮಹನೀಯರುಗಳು ಈ ಪ್ರಕಾರದಲ್ಲಿ ಬರೆಯತೊಡಗಿದ್ದರಿಂದ ಜೀವನ ಚರಿತ್ರೆ ಎಂಬುದು ಲಕ್ಷಣಬದ್ಧವಾದ ಒಂದು ಸಾಹಿತ್ಯ ಪ್ರಕಾರವಾಗಿ ಪರಿಣಮಿಸಿತು. ಒಬ್ಬ ವ್ಯಕ್ತಿಯ ಸಾಧನೆಯ ಗೌರವಾರ್ಥವಾಗಿ ಪ್ರಕಟಗೊಳ್ಳುವ ಅಭಿನಂದನಾ ಗ್ರಂಥಗಳು ಜೀವನ ಚರಿತ್ರೆ ಬರೆಯ ಬಯಸುವ ಮನಸ್ಸುಗಳಿಗೆ ಉತ್ತಮ ಆಕರ ಕೃತಿಗಳೆನಿಸುತ್ತವೆ. ಈ ಎರಡೂ ಪ್ರಕಾರಗಳು ಒಂದೇ ಮಾದರಿಯ ಗುಂಪಿಗೆ ಬರುತ್ತವಾದರೂ

ಭಿನ್ನ ಭಿನ್ನ ನೆಲೆಯಲ್ಲಿ, ಅಭಿವ್ಯಕ್ತಿಗೊಂಡು ಬರೆಯಿಸಿಕೊಳ್ಳುವುದರಿಂದ ಒಂದಕ್ಕಿಂತ ಇನ್ನೊಂದು ಭಿನ್ನವಾಗಿ ಸಾಹಿತ್ಯ ಕ್ಷೇತ್ರದಲ್ಲಿ ಗುರುತಿಸಿಕೊಂಡಿವೆ.

ವ್ಯಕ್ತಿ ತನ್ನ ಕುರಿತು ತಾನೇ ಬರೆದುಕೊಳ್ಳುವುದು ಆತ್ಮಚರಿತ್ರೆ. ಅದನ್ನು ಇತರರು ಬರೆಯುವುದು ಜೀವನ ಚರಿತ್ರೆ. ಆತ್ಮಕಥೆ, ಜೀವನ ಚರಿತ್ರೆಯ ಒಂದು ಭಾಗವಷ್ಟೆ. ಜೀವನ ಚರಿತ್ರೆಗಳು ವ್ಯಕ್ತಿಯೊಬ್ಬನ ಚರಿತ್ರೆಯಾಗಿರುವಂತೆ ಆತನ ಪರಿಸರದ ಚರಿತ್ರೆಯೂ ಆಗಿರುತ್ತದೆ. ಹಾಗಾಗಿ ಬಹಳಷ್ಟು ಜೀವನ ಚರಿತ್ರೆಗಳು ಇತಿಹಾಸಕಾರರಿಗೆ ಮಹದುಪಕಾರವನ್ನು ಮಾಡುತ್ತವೆ. ಇತಿಹಾಸದಲ್ಲಿ ಬರುವ ಬಖೈರುಗಳು ಕೂಡ ಇದೆ ಮಾದರಿಯವು. ಪ್ರತಿಯೊಂದಕ್ಕೂ ಅದರದೆಯಾದ ಮಾನ್ಯತೆ, ಪ್ರಾಮುಖ್ಯತೆ ಇದ್ದೇ ಇರುತ್ತದೆ. ಕೀರಂ ನಾಗರಾಜ್ ಅವರ 'ದೊಡ್ಡವರ ಹಾಗೇ ಸಣ್ಣವರಿಗೂ ಈ ಜಗತ್ತಿನಲ್ಲಿ ಒಂದು ಸ್ಥಾನವಿರುತ್ತದೆ' ಮತ್ತು ವೈದೇಹಿ ಅವರ 'ಪ್ರತಿಯೊಬ್ಬರ ಜೀವನವೂ ಗಾಥೆಗಳೇ' ಎಂಬ ಮಾತುಗಳು ಸತ್ಯವೆನಿಸುತ್ತವೆ. ಹಾಗೆ ನೋಡಿದರೆ ಜೀವನ ಚರಿತ್ರೆಗಳು ಐತಿಹಾಸಿಕ ಪ್ರಜ್ಞೆಯಿಂದ ಹುಟ್ಟಿದವುಗಳಲ್ಲ; ಆರಾಧನಾ ದೃಷ್ಟಿಯಿಂದ ಬಂದವುಗಳು. ಹಾಗಾಗಿಯೇ ಅವುಗಳಿಗೆ ಒಬ್ಬ ವ್ಯಕ್ತಿಯ ಜೀವನವನ್ನು ಯಥಾವತ್ತಾಗಿ ಚಿತ್ರಿಸುವ ಕೃತಿಗಳು ಎನ್ನುವುದು. ವಸ್ತುನಿಷ್ಟ ಸತ್ಯಾಂಶ, ಸಮಗ್ರತೆ, ಪರಿಣಾಮ, ಪ್ರಯೋಜನ ನೆಲೆಯಲ್ಲಿ ಅದು ಬಂದಾಗ ಮಾತ್ರ ಅದಕ್ಕೊಂದಿಷ್ಟು ಪ್ರಾಮುಖ್ಯತೆ ಇದೆ. ಇಲ್ಲಿ ಕಲ್ಪನಾಂಶಕ್ಕೆ ಕಿಂಚಿತ್ತೂ ಎಡೆಯಿಲ್ಲ.

ಈ ಹಿನ್ನೆಲೆಯಲ್ಲಿ ಅತ್ಯಂತ ಜಾಗರೂಕತೆಯಿಂದಲೇ ಶಿವಸ್ವಾಮಿ ಚೀನಕೇರಿಯವರ ಜೀವನ ಘಟನೆಗಳನ್ನು ಪುಸ್ತಕ ರೂಪಕ್ಕೆ ತರಲಾಗಿದೆ. ವೀಕ್ಷಕ ಸ್ಥಾನದಲ್ಲಿ ನಿಂತು ನಿರ್ಲಿಪ್ತನಾಗಿ ಅವರ ಬದುಕು ಬವಣೆಯನ್ನು ಬರಹಕ್ಕಿಳಿಸುವ ಪ್ರಯತ್ನ ಮಾಡಿರುವೆ. ಯಾವ ವಿವರಣೆಯೂ ಕೃತಿಯ ಬಹುಭಾಗವನ್ನು ಆಕ್ರಮಿಸಿಕೊಳ್ಳದ ಜಾಗರೂಕತೆಯನ್ನು ವಹಿಸಲಾಗಿದೆ. ಅವರ ದಿನಚರಿ, ಪತ್ರವ್ಯವಹಾರ, ಆಪ್ತೇಷ್ಟರ ಬರಹಗಳು, ಹೇಳಿಕೆಗಳನ್ನು, ಅವರ ಪುಸ್ತಕಗಳಿಗೆ ವಿವಿಧ ಗಣ್ಯರು ಬರೆದ ಮುನ್ನುಡಿ-ಬೆನ್ನುಡಿಗಳನ್ನು,

ಪ್ರಶಸ್ತಿ ಪತ್ರಗಳನ್ನು ಇದಕ್ಕೆ ಆಕರಗಳಾಗಿ, ಸಾಕ್ಷಿಗಳಾಗಿ ಬಳಸಿಕೊಳ್ಳಲಾಗಿದೆ. ಬಡಕುಟುಂಬವೊಂದರಲ್ಲಿ ಜನಿಸಿದರೂ ಗುರಿಯೊಂದಿದ್ದರೆ ಸಕಲ ಬವಣೆಗಳನ್ನೆದುರಿಸಿ ಕೊನೆಗೆ ಗಮ್ಯಸ್ಥಾನವನ್ನು ಮುಟ್ಟುವುದೆನ್ನುವುದಕ್ಕೆ ಅವರ ಜೀವನವೆ ನಿದರ್ಶನವಾಗಿದೆ. ಅದಕ್ಕೆ ಪೂರಕವಾದ ಬರಹವನ್ನು ಕಟ್ಟಲು ಪ್ರಯತ್ನಿಸಲಾಗಿದೆ. ಹಸನಾದ ಬಾಳಿಗೆ ಸತ್ಯ ಪ್ರಮಾಣಿಕತೆಗಳೇ ಊರೆಯಾಗುತ್ತವೆಂಬುದನ್ನು ಹೆಜ್ಜೆಹೆಜ್ಜೆಗೂ ಶಿವಸ್ವಾಮಿಯವರ ಬದುಕನ್ನು ಪುಸ್ತಕ ಪ್ರಮಾಣೀಕರಿಸುತ್ತದೆ.

ಕಟ್ಟುಗೆ ಕಟ್ಟದಿರ್ಕೆ ಕಡಲಂ ಕಪಿಸಂತತಿ ವಾಮನಕ್ರಮಂ।
ಮುಟ್ಟುಗೆ ಮುಟ್ಟದಿರ್ಕೆ ಮುಗಿಲಂ ಹರನಂ ನರನೊತ್ತಿ ಗಂಟಲಂ।
ಮೆಟ್ಟುಗೆ ಮೆಟ್ಟದಿರ್ಕೆ ಕವಿಗಳ್ ಕೃತಿಬಂಧದೊಳಲ್ತೆ ಕಟ್ಟಿದರ್।
ಮುಟ್ಟಿದರೊತ್ತಿ ಮೆಟ್ಟಿದರದೇನಳವಗ್ಗಳಮೋಕವೀಂದ್ರರಾ॥

ಎಂಬ ಕವಿ ನೇಮಿಚಂದ್ರನ ಸಾಲುಗಳನ್ನೊಮ್ಮೆ ನೆನೆಯಿರಿ. ವಾನರ ಸೈನ್ಯವು ಸಮುದ್ರಕ್ಕೆ ಸೇತುವೆಯನ್ನು ಕಟ್ಟಲಿ ಕಟ್ಟದಿರಲಿ. ವಾಮನಾವತಾರದಲ್ಲಿ ವಾಮನನು ಆಕಾಶವನ್ನು ತನ್ನ ಕಾಲಿನಿಂದ ಮುಟ್ಟಲಿ, ಮುಟ್ಟದಿರಲಿ. ಅರ್ಜುನನು ಶಿವನ ಗಂಟಲನು ಒತ್ತಿ ಮೆಟ್ಟಲಿ, ಮೆಟ್ಟದಿರಲಿ. ಆದರೆ ಕವಿಗಳು ತಮ್ಮ ಕೃತಿಗಳಲ್ಲಿ ವಾನರ ಸೈನ್ಯದಿಂದ ಸಮುದ್ರಕ್ಕೆ ಸೇತುವೆಯನ್ನು ಕಟ್ಟಿದರು; ವಾಮನನ ಕಾಲಿನಿಂದ ಆಕಾಶವನ್ನು ಮುಟ್ಟಿದರು; ಅರ್ಜುನನ ಕಾಲಿನಿಂದ ಶಿವನ ಗಂಟಲನ್ನು ಒತ್ತಿ ಮೆಟ್ಟಿದರು; ಇದು ಕವಿಗಳ ಹೆಗ್ಗಳಿಕೆ. ಇಂತಹ ಕವಿಗಳನ್ನು ಪರಿಚಯಿಸುವುದು ಎಂದರೆ ಕನ್ನಡ ಸಾಹಿತ್ಯ ಪರಿಷತ್ತಿಗೆ ತನ್ನನ್ನೇ ತಾನು ಪರಿಚಯಿಸಿಕೊಂಡಂತೆ. ಇದಕ್ಕಿಂತ ಮಿಗಿಲಾದ ಕೆಲಸವಿದೆಯೇ ಅಧ್ಯಕ್ಷರಿಗೆ. ಹಾಗಾಗಿ ಈ ಮಾದರಿಯ ಯೋಜನೆಯನ್ನು ಕೈಗೆತ್ತಿಕೊಂಡು ಜಿಲ್ಲೆಯ ವಿವಿಧ ಗಣ್ಯರ ಜೀವನ ಚರಿತೆಗಳನ್ನು–ಗ್ರಾಮ ಚರಿತ್ರೆಗಳನ್ನು ಪ್ರಕಟಿಸುವ ಮೂಲಕ ಸಾಧಕರಿಗೆ ಹಾಗೂ ಜೊತೆಜೊತೆಯಲ್ಲಿ ಸಾಧನೆಯ ಹಾದಿ ತುಳಿಯಬಯಸುವ ಮನಸ್ಸುಗಳಿಗೆ ಜಿಲ್ಲಾ ಕನ್ನಡ

ಸಾಹಿತ್ಯ ಪರಿಷತ್ತು ಮಹದುಪಕಾರವನ್ನು ಮಾಡಿದೆ. ತಮ್ಮ ಬಗ್ಗೆ ಬರೆಯಲು ನನಗೆ ಅನುಮತಿಸಿ, ಅವರ ಜೀವನದ ಸಮಗ್ರ ಮಾಹಿತಿಗಳನ್ನು ಕಾಲಕಾಲಕ್ಕೆ ಒದಗಿಸಿದ ಶ್ರೀ ಶಿವಸ್ವಾಮಿ ಚೀನಕೇರಿಯವರಿಗೆ ಹಾಗೂ ಅವರ ಕುಟುಂಬಕ್ಕೆ ನನ್ನ ಮೊದಲ ನಮನಗಳನ್ನು ಸಲ್ಲಿಸುತ್ತಿದ್ದೇನೆ.

ಈ ಮಾದರಿಯ ವಿಶಿಷ್ಟ ಯೋಜನೆಯೊಂದನ್ನು ರೂಪಿಸುವ ಮೂಲಕ ಕನ್ನಡ ಸಾಹಿತ್ಯ ಪರಂಪರೆಗೆ ಅನನ್ಯ ಪ್ರಕಾರದ ವ್ಯಕ್ತಿಗಳನ್ನು, ವ್ಯಕ್ತಿತ್ವಗಳನ್ನು ಪರಿಚಯಿಸಿದ ಜಿಲ್ಲಾ ಕಸಾಪದ ಅಧ್ಯಕ್ಷರಾದ ಶ್ರೀ ಸುರೇಶ ಚೆನ್ನಶೆಟ್ಟಿಯವರಿಗೆ, ಗೌರವ ಕಾರ್ಯದರ್ಶಿಗಳಾದ ಡಾ. ಬಸವರಾಜ ಬಲ್ಲೂರು ಅವರಿಗೆ ಶಿವಸ್ವಾಮಿಯವರ ಬಗೆಗೆ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡ ಎಲ್ಲ ಪ್ರಾತಃಸ್ಮರಣೀಯರಿಗೆ ಮನಃಪೂರ್ವಕ ಗೌರವಗಳನ್ನು ಸಲ್ಲಿಸುತ್ತಿದ್ದೇನೆ. ಈ ಕೃತಿ ರಚನೆಗೆ ಬೆಂಬಲವಾಗಿ ಕಾರ್ಯನಿರ್ವಹಿಸಿದ ಎಲ್ಲರಿಗೂ ನನ್ನ ಶರಣು ಶರಣಾರ್ಥಿಗಳು.

– ಡಾ. ವೀರಶೆಟ್ಟಿ ಗಾರಂಪಳ್ಳಿ,
ಬೆಂಗಳೂರು.

ಹಾವಸೆಗಲ್ಲಿನ ಪಥ

ಪೀಠಿಕೆ.

ಹೊಕ್ಕಲ್ಲಿ ಹೊಕ್ಕು ನಿಮ್ಮೊಕ್ಕುದನುಂಬವನ
ಕುಲವೇನೋ। ದೇವಾ ನೀನೊಲಿದವನ,
ಸ್ವಾಮೀ ನೀ ಹಿಡಿದವನ ಕುಲವೇನೋ।
ಕುಲಕ್ಕೆ ತಿಲಕ ನಮ್ಮ ಮಾದಾರ ಚೆನ್ನಯ್ಯ,
ನಿಮ್ಮಿಂದಧಿಕ ಕೂಡಲಸಂಗಮದೇವ.

ಒಳ್ಳೆಯ ಕವಿ, ಕತೆಗಾರ, ಕಾದಂಬರಿಕಾರ, ವಿಮರ್ಶಕ, ಪ್ರವಚನಕಾರರಾಗಿ ಶಿವಸ್ವಾಮಿಯವರು ಜಿಲ್ಲೆಯ ಜನರಿಗೆ ಚಿರಪರಿಚಿತರು. ಅಲ್ಪಾವಧಿಯಲ್ಲಿಯೇ ಬೇರೆ ಬೇರೆ ಸಾಹಿತ್ಯ ಪ್ರಕಾರಗಳಲ್ಲಿ ತಮ್ಮನ್ನು ತಾವು ದುಡಿಸಿಕೊಂಡಿದ್ದಾರೆ. ಜಿಲ್ಲೆಯ ಸಾರಸ್ವತ ಪ್ರಪಂಚಕ್ಕೆ ಅವರ ಹೆಸರು ಹೊಸದೇನಲ್ಲ. ಆಧುನಿಕ ಕನ್ನಡ ಸಾಹಿತ್ಯ ಮತ್ತು ವಚನ ಸಾಹಿತ್ಯ ರಚನೆಯಲ್ಲಿ ಶಿವಸ್ವಾಮಿಯವರ ಹೆಸರು ಜಿಲ್ಲೆಯಲ್ಲಿ ಪ್ರಮುಖವಾಗಿ ಕಂಡು ಬರುತ್ತದೆ. ಜಿಲ್ಲೆಯ ಹೊಸ ತಲೆಮಾರಿನ ಸಂವೇದನಾಶೀಲ ಬರಹಗಾರರ ಗುಂಪಿನಿಂದ ಅವರ ಹೆಸರನ್ನು ಬಿಡುವಂತಿಲ್ಲ ಎಂಬಂತೆ ತಮ್ಮ ಛಾಪನ್ನು ಜಿಲ್ಲೆಯಲ್ಲಿ ಅವರು ನಯವಾಗಿಯೇ ಮೂಡಿಸಿದವರು. ಸರಳ ಜೀವನ ಮತ್ತು ನಯನಾಜೂಕಿನಿಂದಲೇ ತಮ್ಮನ್ನು ತಾವು ಗುರುತಿಸಿಕೊಂಡಿದ್ದಾರೆ. ಹೈದ್ರಾಬಾದ್ ಕರ್ನಾಟಕ ಭಾಗದಲ್ಲಿ ಬಸವವಾದಿ ದೃಷ್ಟಿಕೋನದ ಮೂಲಕ ಸಾಮಾಜಿಕ ಸಂವೇದನೆಯ ಕುರಿತು ಕೃತಿ, ಕಾವ್ಯ, ವಿಮರ್ಶೆಯನ್ನು ಮಂಡಿಸುತ್ತಿರುವವರಲ್ಲಿ ಶಿವಸ್ವಾಮಿಯವರು

ಪ್ರಮುಖರು. ಶಿವಸ್ವಾಮಿಯವರು ವೈಯಕ್ತಿಕವಾಗಿ ನನಗೆ ಹಲವು ವರ್ಷಗಳಿಂದ ಪರಿಚಿತರು. ಅವರನ್ನು ಮತ್ತು ಅವರ ಸಾಹಿತ್ಯವನ್ನು ತುಂಬಾ ಹತ್ತಿರದಿಂದ ಗಮನಿಸಿದ್ದೇನೆ, ಓದಿದ್ದೇನೆ. "ಸಾಹಿತ್ಯಿಕವಾಗಿ ಅವರು ಬರೆದಿದ್ದನ್ನು ವೈಯಕ್ತಿಕವಾಗಿ ಬದುಕುತ್ತಿದ್ದಾರೆ; ವೈಯಕ್ತಿಕವಾಗಿ ಬದುಕಿದ್ದನ್ನು ಸಾಮಾಜಿಕವಾಗಿ ಜಾರಿಗೆ ತರುವ ಪ್ರಯತ್ನಶಾಲಿಗಳಾಗಿದ್ದಾರೆ". ನಾವು ಯಾವ ರೀತಿ ಬದುಕುವುದಿಲ್ಲವೋ ಆ ರೀತಿ ಬೇರೆಯವರು ಬದುಕಲಿ ಎಂದು ಹೇಳುವ ಅಧಿಕಾರ ನಮಗ್ಯಾರಿಗೂ ಇಲ್ಲ. ಹಾಗಾಗಿ ಅವರು ಸಾಹಿತ್ಯವನ್ನು, ಸಾಹಿತ್ಯಕ್ಕಾಗಿ ಬರೆದವರಲ್ಲ. ಅದನ್ನು ಸಾಮಾಜಿಕ ಕಳಕಳಿಗಾಗಿ ಬರೆದವರು. ಸಾಹಿತ್ಯವನ್ನು ಚಳುವಳಿಯ ಅಸ್ತ್ರವಾಗಿ, ಭಾಗವಾಗಿ ಗುರುತಿಸಿದವರು. ಬರವಣಿಗೆಯನ್ನು ಸಮಾಜ ತಿದ್ದುವ ಗುರಾಣಿಯಾಗಿ ಬಳಸುತ್ತಿರುವವರು. ತನ್ನ ಬದುಕು ಮತ್ತು ಸಾಹಿತ್ಯವನ್ನು ಊರಿನ ನವಪೀಳಿಗೆಗೆ ಮಾದರಿಯಾಗುವ ರೀತಿಯಲ್ಲಿ ರೂಪಿಸಿಕೊಂಡವರು. ಕತೆ, ಕಾವ್ಯ, ವಿಮರ್ಶೆ, ಕಾದಂಬರಿ, ನಾಟಕ, ಆಧುನಿಕ ವಚನಗಳ ರಚನೆಯಲ್ಲಿ ಅವರು ತೊಡಗಿಕೊಂಡಿದ್ದಾರೆ. ಜೊತೆಗೆ ತೀಕ್ಷ್ಣವಾದ ಭಾಷಣಗಳಿಂದ ಹಾಗೂ ಪ್ರವಚನಗಳಿಂದ ತಮ್ಮನ್ನು ನಾಡಿನುದ್ದಕ್ಕೂ ಪರಿಚಯಿಸಿಕೊಂಡಿದ್ದಾರೆ. ಅವರದು ಪ್ರಯೋಗಶೀಲ ಬರವಣಿಗೆ. ಇದು ಅವರಿಗೆ ಆರಂಭದಿಂದಲೂ ದಕ್ಕಿದ ಕಲೆ.

ಸಾಧಕರೆಂದರೆ ವೀಕೆಂಡ್ ವಿಥ್ ರಮೇಶ ಅವರ ಕಾರ್ಯಕ್ರಮದ ಹಾಟ್ ಸೀಟ್‌ನಲ್ಲಿ ಕುಳಿತವರು ಮಾತ್ರ ಎಂಬ ಭಾವನೆ ನಮ್ಮಲ್ಲಿ ಬಹಳ ಜನರಿಗಿದೆ. ಆದರೆ ಸಾಧಕರೆಂದರೆ ಇಷ್ಟೇ ಎನ್ನುವ ವ್ಯಾಖ್ಯೆಗೆ ನಿಲುಕದ್ದು. ಸಾಧಕರನ್ನು ಹುಡುಕಿಕೊಂಡು ನಾವು ಎಲ್ಲಿಗೂ ಹೋಗಬೇಕಾದ ಅವಶ್ಯಕತೆಯಿಲ್ಲ. ಅವರು ನಮ್ಮ ನಡುವೆಯೇ ಇದ್ದಾರೆ ಎಂಬ ಮಾತುಗಳಂತೆ ಕಸಾಪ ಬೀದರ ಘಟಕ ಮಹತ್ವದ ಯೋಜನೆಯನ್ನು ಹಾಕಿಕೊಂಡಿದೆ. ಶಿವಸ್ವಾಮಿಯವರೆಂದೂ ಮಾಡುವ ಕೆಲಸದಲ್ಲಿನ ಭಕ್ತಿಯನ್ನು, ಶ್ರದ್ಧೆಯನ್ನು ಕಳೆದುಕೊಂಡವರಲ್ಲ. ಮೂಲತಃ ಮೃದು

ಸ್ವಭಾವದವರು, ಮಿತಭಾಷಿಗಳು. ಸಮಾಜದ ಆರೋಗ್ಯವನ್ನು, ಸಿರಿವಂತಿಕೆಯುನ್ನು ಹೆಚ್ಚಿಸುವ ಕಾರ್ಯದಲ್ಲಿ ಎಡಬಿಡದೆ ತೊಡಗಿಸಿಕೊಂಡಿದ್ದಾರೆ. ಆಡಿದ್ದು ಮಾಡುವ, ಪಾಲಿಸುವ ಸ್ವಭಾವದವರು. ರಾಜ್ಯದ ಹತ್ತಾರು ಊರುಗಳನ್ನು ಸುತ್ತಿದ್ದಾರೆ. ಹೋದಕಡೆಗಳೆಲ್ಲ ಒಳ್ಳೆಯ ಅನುಭವಗಳೇ ಆಗಿವೆ ಎಂದೇನಿಲ್ಲ. ಆದರೂ ಬತ್ತದ ಉತ್ಸಾಹ. ಇಂದಲ್ಲ ನಾಳೆ ಪ್ರಯತ್ನಕ್ಕೆ ಫಲ ಸಿಕ್ಕೀತು ಎಂಬ ಆಸೆಗಣ್ಣಿನಲ್ಲಿಯೇ ತಮ್ಮ ಪಾಡಿಗೆ ತಮ್ಮ ಕೆಲಸಗಳನ್ನು ಮಾಡಿಕೊಂಡು ಹೊರಟಿದ್ದಾರೆ. ಈಗಿರುವ ಅವರ ಆರ್ಥಿಕ ಪರಿಸ್ಥಿತಿಯಲ್ಲಿ ಊರ ಉಸಾಬರಿ ನನಗೇಕೆ ಎಂದು ಅವರು ಸುಮ್ಮನಾಗಬಹುದು. ಆದರೆ ಶಿವಸ್ವಾಮಿಯವರ ವ್ಯಕ್ತಿತ್ವಕ್ಕೆ ಅದು ಸಲ್ಲದ ಮಾತು. ಅದಕ್ಕಾಗಿಯೇ ನಾನವರ ಜೀವನ ಚರಿತ್ರೆಗೆ **'ಹಾವಸೆಗಲ್ಲಿನ ಪಥಿಕ'** ಎಂದು ಕರೆದಿದ್ದು. ಇಡೀ ಅವರ ಜೀವನವೇ ಸಂಘರ್ಷಾತ್ಮಕ ನೆಲೆಯಲ್ಲಿ ರೂಪುಗೊಂಡಿದ್ದು. ಸುತ್ತಲಿನ ಜನರ ಬದುಕು ಬವಣೆ ಅನುದಿನವೂ ಅವರನ್ನು ಹೊಸ ಕಾರ್ಯಕ್ಕೆ ಅಣಿಗೊಳಿಸುತ್ತದೆ. ಜನರಿಗಾಗಿ, ಅವರ ಉತ್ತಮ ಬದುಕಿಗಾಗಿ ತುಡಿಯುವ ಇವರು ಉಳಿದವರ ಮಧ್ಯೆ ಅಪರೂಪವಾಗಿ ಕಾಣುತ್ತಾರೆ. ಇದರಲ್ಲಿ ಎಲ್ಲವೂ ಬರೆದಿದ್ದೇನೆ ಎಂದಲ್ಲ, ಆದರೆ ಬರೆದಿದ್ದಷ್ಟೂ ನಿಜವೇ.

'ಸಾಮಾಜಿಕ ಸಂವೇದನೆ' ಅವರ ಸಾಹಿತ್ಯದ ಮೂಲಬೇರು. ಬಸವವಾದಿ ವಿಚಾರ ಲಹರಿಗಳ ಮೂಲಕ ಸೃಜನಶೀಲ ಪರಂಪರೆಯನ್ನು ವಿಸ್ತರಿಸುವಲ್ಲಿ ಅವರ ಕೊಡುಗೆ ಅನನ್ಯ. ಅವರ ಇಡಿ ಜೀವನ ಚರಿತ್ರೆಯೇ ಅಂತರಂಗ–ಬಹಿರಂಗಗಳ ಸಂಘರ್ಷಾತ್ಮಕ ಸಂಗತಿಗಳ ಅಕ್ಷರರೂಪ ಎನ್ನಬಹುದು. ಬಸವವಾದಿ ಶರಣರ ಅರಿವು ವಿಸ್ತಾರದ ಮೇಲೆ ಆರೋಗ್ಯಕರ ಸಮಾಜ ಕಟ್ಟಬಯಸುವ ತುಡಿತ ಅವರ ಬರಹಗಳಲ್ಲಿ ಕಾಣಬಹುದು. ಹಾಗಾಗಿ ಅವರ ಮಾತು ಮತ್ತು ಕೃತಿಗಳು ಒಟ್ಟಾರೆಯಾಗಿ ತಳಸಮುದಾಯಗಳ ಅಸ್ಮಿತೆಯ ಬಗೆಗೆ ಮಾತನಾಡುತ್ತವೆ; ಧ್ವನಿ ಎತ್ತುತ್ತವೆ. ಪ್ರಸ್ತುತ ಕೃತಿಯು ಅವರ ಜೀವನ ಕಥನದೊಂದಿಗೆ ಅವರ ಸಾಮಾಜಿಕ

ಕಳಕಳಿ, ಹೋರಾಟ, ಸಂಘರ್ಷ ಮತ್ತು ಅವರ ಸಾಹಿತ್ಯಿಕ ವಿಶ್ಲೇಷಣೆಯ ವಿಮರ್ಶಾ ದೃಷ್ಟಿಕೋನವನ್ನು ಕಟ್ಟಿಕೊಡುತ್ತದೆ. ಯಾವುದೇ ಸದ್ದುಗದ್ದಲವಿಲ್ಲದೆ ತಮ್ಮ ವೃತ್ತಿ ಮತ್ತು ಪ್ರವೃತ್ತಿ (ಸಾಹಿತ್ಯ ಕೃಷಿ)ಯಲ್ಲಿ ಶಿವಸ್ವಾಮಿಯವರು ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ಬಸವಾದಿ ಶರಣರ ಆಶಯದಂತೆ ತಮ್ಮ ಇಡೀ ಜೀವನವನ್ನು ವ್ಯಷ್ಠಿ ಮತ್ತು ಸಮಷ್ಠಿಗಳೆರಡರ ಹಿತಕ್ಕಾಗಿಯೇ ಸದಾ ಕಾರ್ಯೋನ್ಮುಖವಾಗಿಸಿ ಕೊಂಡಿದ್ದಾರೆ.

ಸಮಾಜ ನನಗಿಂತಲೂ ದೊಡ್ಡದು ಎಂಬ ಪ್ರಜ್ಞೆ ಅವರಲ್ಲಿ ಸದಾ ಜಾಗೃತಗೊಂಡಂತೆ ಇದೆ. ಅದನ್ನವರ ಕಾವ್ಯದಲ್ಲೂ ನಾವು ಕಾಣಬಹುದು. 'ಎತ್ತಾಗಿ ತೊತ್ತಾಗಿ ಹಿತ್ತಲದ ಮರವಾಗಿ ಮತ್ತೆ ಪಾದದ ಕೆರಹಾಗಿ ಗುರುವಿನ ಹತ್ತಲಿರೆಂದ ಸರ್ವಜ್ಞ' ಎಂಬ ಕವಿ ಸರ್ವಜ್ಞನ ಮಾತು ಅವರಿಗೆ, ಅವರ ವ್ಯಕ್ತಿತ್ವಕ್ಕೆ ಹಿಡಿದ ಕೈಗನ್ನಡಿಯಾಗಿದೆ. ವಿನಯತೆ ಎಂಬುದು ವ್ಯಕ್ತಿಯ ವ್ಯಕ್ತಿತ್ವ ಪರಿಪಕ್ವಗೊಂಡ ನಂತರವೇ ಅವನಲ್ಲಿ ಸ್ಥಿರವಾಗಿ ನೆಲೆಸಲು ಸಾಧ್ಯ ಎಂಬುದನ್ನು ಇಂದಿನ ಪೀಳಿಗೆ ಅವರನ್ನು ನೋಡಿ ಕಲಿಯಬೇಕಿದೆ. 'ಮೇಲಾಗಲೊಲ್ಲೆನು ಕೀಳಾಗಲೊಲ್ಲದೆ' ಎಂಬ ಶರಣರ ಪ್ರಜ್ಞೆ ಅವರಲ್ಲೆಂದೂ ಜಾಗೃತವಿದೆ. ಈ ನಿರಂಹಕಾರ ಎಂಬುದು ಸುಲಭ ಸಾಧ್ಯವಲ್ಲ. ಅದನ್ನು ಜೀವನದ ಕಠಿಣ ಸಂದರ್ಭಗಳಿಂದ ದಕ್ಕಿಸಿಕೊಳ್ಳಬೇಕಾಗುತ್ತದೆ ಮತ್ತು ಅದನ್ನು ಪ್ರತಿಕ್ಷಣದಲ್ಲೂ ಎಚ್ಚರಿಕೆಯಿಂದ ಯಾರಿಗೂ ನೋವಾಗದಂತೆ ಕಾಪಾಡಿಕೊಂಡಿದ್ದಾರೆ. ಅರಿವು ಮತ್ತು ಆಚಾರಗಳನ್ನು ಎಡಬಿಡದೆ ಪಾಲಿಸುತ್ತಾರೆ. ಅದು ಸಾಹಿತ್ಯಿಕವಾಗಿಯೂ ಸರಿ; ವೈಯಕ್ತಿಕವಾಗಿಯೂ ಸರಿ.

ಬಾಲ್ಯ

ಶಿವಸ್ವಾಮಿ ಚೀನಕೇರಿ ಎಂಬ ಹೆಸರಿನಲ್ಲಿ ಚಿರಪರಿಚಿತರಾಗಿರುವ ಇವರು ೨೨ರ ಮೇ ೧೯೬೭ರಂದು ಗೊಂಡ ಸಮುದಾಯದಲ್ಲಿ ಶರಣೆ ರೇವಮ್ಮ ಮತ್ತು ಶರಣ ಲಿಂಗಪ್ಪ ಇವರ ಮಗನಾಗಿ ಜನಿಸಿದರು. ಚೀನಕೇರಾ ಇವರ ಹುಟ್ಟೂರು. ಇದು ಬೀದರ ಜಿಲ್ಲೆಯ ಹುಮನಾಬಾದ್ ತಾಲೂಕಿನಲ್ಲಿ ಬರುವ ಒಂದು ಕುಗ್ರಾಮ. ಇನ್ನೂರು–ಮುನ್ನೂರು ಮನೆಗಳಿರುವ ಸಣ್ಣ ಹಳ್ಳಿಯದು. ಅಭಿವೃದ್ಧಿಗೆ ವ್ಯತಿರಿಕ್ತವೆಂಬಂತೆ ಹಳೆ ತಲೆಮಾರಿನಲ್ಲಿ ಒಳ್ಳೆಯ ಸಾಕ್ಷರರಿದ್ದ ಗ್ರಾಮ, ಆಧುನಿಕತೆ ಬೆಳೆದಂತೆ ಶಾಲೆಬಿಟ್ಟ ಮಕ್ಕಳಿಂದ ತುಂಬಿಕೊಂಡ ಗ್ರಾಮವಾಗುತ್ತ ಹೊರಟಿದೆ. ಇವರ ತಾತನಿಗೆ ಒಟ್ಟು ಐದು ಜನ ಮಕ್ಕಳು. ಅವರಲ್ಲಿ ಇವರ ತಂದೆ ಹಿರಿಯವರು.

ಇವರ ತಂದೆಯವರು ಮೂಲತಃ ಸೌಮ್ಯ ಸ್ವಭಾವದವರು; ಮಿತಭಾಷಿ. ಕಾಯಕಜೀವಿ. ಸದಾ ಒಂದಿಲ್ಲೊಂದು ಕೆಲಸದಲ್ಲಿ ತನ್ನನ್ನು ತಾನು ತೊಡಗಿಸಿಕೊಂಡಿರುತ್ತಾರೆ. ಊರಲ್ಲೂ ಅವರಿವರೊಂದಿಗೆ ಕುಳಿತು ಕಾಲಹರಣ ಮಾಡಿದ್ದನ್ನು ನಾನು ಗಮನಿಸಿಲ್ಲ. ನಾನು ವಯಸ್ಸಿನಲ್ಲಿ ಅವರ ಮೊಮ್ಮಗನ ವಯಸ್ಸಿನವನು. ಆದರೆ ಅವರ ಮನೆಗೆ ಹೋದಾಗಲೆಲ್ಲಾ ತುಂಬ ಗೌರವದಿಂದ ನಮಗೆ ಮಾತನಾಡಿಸುತ್ತಾರೆ; ಉಪಚರಿಸುತ್ತಾರೆ. ತನ್ನ ಉದಾರ ಮನಸ್ಸು ಮತ್ತು ಪ್ರಾಮಾಣಿಕತೆಯಿಂದ ಊರಲ್ಲಿ ಎಲ್ಲರ ಗೌರವಕ್ಕೆ ಪಾತ್ರರಾಗಿದ್ದಾರೆ. ಗುರು ಬಸವಣ್ಣನವರು ಹೇಳಿದಂತೆ ಶುದ್ಧ ಕೃಷಿಕೃತ್ಯ ಕಾಯಕ ಮಾಡುವ ಸಿದ್ಧಭಕ್ತನಾಗಿ ಯಾವ ಪ್ರತಿಫಲಾಪೇಕ್ಷಿಸದೆ ದುಡಿಯುವುದೊಂದೆ ಅವರಿಗೆ ಅಭ್ಯಾಸವಾಗಿದೆ. ಆ ದುಡಿಮೆಯ ಪ್ರತಿಫಲ ಯಾರಿಗಾದರೇನು ಚಿಂತಿಸಿದವರಲ್ಲ. ಅಂದಿನ ಸಂಪ್ರದಾಯದಂತೆ ಅವರು ಕೂಡ ದೇವರು ಧರ್ಮಗಳ ಬಗ್ಗೆ ಸಹಜವಾಗಿ ನಂಬಿಕೆ, ಶ್ರದ್ಧೆವುಳ್ಳವರಾಗಿದ್ದರು. ಅವರಪ್ಪ ಅವರಿಗೆ ಲಿಂಗಪ್ಪ ಎಂದು ಹೆಸರಿಟ್ಟಿದ್ದರು. ಅದು ಅವರ ಮುತ್ತಜ್ಜನ ಹೆಸರಾಗಿತ್ತು. ಕಲ್ಯಾಣದ ಪರಿಸರದಲ್ಲಿ 'ಲಿಂಗ' ಪದದ ಬಳಕೆಗೆ ಜಾತಿಯ ಹಮ್ಮುಬಿಮ್ಮುಗಳಿಲ್ಲ.

ಶಿವಸ್ವಾಮಿ ಅವರ ತಾಯಿಯ ಹೆಸರು ರೇವಮ್ಮ. ಇದು ನಾವದಗಿಯ ಶರಣ ಸಂತ ರೇವಪ್ಪಯ್ಯನವರ ಮೇಲಿನ ಭಕ್ತಿಗಾಗಿ ಅವರಿಗೆ ಆ ಹೆಸರು ನಾಮಕರಣ ಮಾಡಲಾಗಿತ್ತಂತೆ. ೧೨ನೇ ಶತಮಾನದ ಶರಣರು ಓಡಾಡಿದ ಈ ಪ್ರದೇಶದಲ್ಲಿ ಶರಣರ ಹೆಸರುಗಳು ಪರಂಪರಾಗತವಾಗಿ ಹೀಗೆ ಒಳಹರಿವಿನ ಮೂಲಕ ಜಾತಿ, ಕುಲ, ಗೋತ್ರಗಳನ್ನು ದಾಟಿ ಹರಿದು ಮುಂದುವರೆದುಕೊಂಡು ಬಂದಿರುವುದನ್ನು ನಾವಿಲ್ಲಿ ಗಮನಿಸಬಹುದು. ರೇವಮ್ಮ ಮತ್ತು ಲಿಂಗಪ್ಪ ಎಂಬ ಎರಡೂ ಹೆಸರುಗಳು ಬಸವಾದಿ ಶರಣರ ಸಮಕಾಲೀನರಲ್ಲಿ ಇರುವ ಬಗ್ಗೆ ನಮಗೆ ಉಲ್ಲೇಖಗಳು ಕೂಡ ಸಿಗುತ್ತವೆ. ಒಟ್ಟಿನಲ್ಲಿ ಶರಣ ಸಂಸ್ಕೃತಿಯ ಪರಂಪರೆಯಿಂದ ಬಂದಿರುವ ಮನೆಯಲ್ಲದಿದ್ದರೂ ಹೆಸರುಗಳು ಮಾತ್ರ ಶರಣರನ್ನು ನೆನಪಿಸುವಂತಿವೆ. ಅದು ಇವರಿಗೆ ಆಶ್ಚರ್ಯವೂ ಅನಿಶ್ಚಿತವೂ ಅನಿಸುತ್ತದೆ. ಮುಂದೆ ಅವರಿಬ್ಬರಿಗೆ ಹುಟ್ಟಲಿರುವ ಮಗ ತನ್ನ ಪೂರ್ವಾಶ್ರಯವನ್ನು ತೊರೆದು ಇಷ್ಟಲಿಂಗಧಾರಣೆ ಮೂಲಕ ಲಿಂಗಾಯತನಾಗುವ ಸೂಕ್ಷ್ಮ ಬಗೆಯನ್ನು ಇಲ್ಲಿ ಕಾಣಬೇಕೆ ಎಂಬುದು ಪ್ರಶ್ನೆಯಾಗಿ ಉಳಿಯುತ್ತದೆ.

ಆ ಕಾಲಕ್ಕೆ ಬಡತನವನ್ನೇ ಹಾಸಿ ಹೊದ್ದಿಕೊಂಡ ಕುಟುಂಬ. ಒಮ್ಮೆ ಇವರ ಅಜ್ಜ ಕುಟುಂಬ ನಿರ್ವಹಣೆಯ ಅಗತ್ಯಕ್ಕಾಗಿ ಹುಮಾನಾಬಾದಿನ ಉದಗಿರೆ ವ್ಯಾಪಾರಿಯ ಹತ್ತಿರ ೨೪ ಗ್ರಾಂ ಚಿನ್ನ ಒತ್ತೆಯಿಟ್ಟು ಎರಡು ತಿಂಗಳುಗಳ ಸಲುವಾಗಿ ೫೦ ರೂಪಾಯಿಗಳನ್ನು ತಂದಿದ್ದರಂತೆ. ಯಾವುದೇ ಕಾರಣಕ್ಕೆ ಗಡುವು ಮೀರಿದರೆ ಬಂಗಾರ ಹಿಂತಿರುಗಿ ಬರುತ್ತಿರಲಿಲ್ಲ. ಈ ಭಯ ಅವರಜ್ಜನಿಗೆ ತುಂಬಾ ಕಾಡುತ್ತಿತ್ತು. ಇನ್ನೊಂದು ಬಾರಿ ತಂದ ಹಣ ವಾಪಾಸು ಕೊಡಲು ೨ ವಾರಗಳು ಮಾತ್ರ ಉಳಿದಿದ್ದವು. ಆಗ ಇವರ ತಂದೆಗೆ ಹನ್ನೆರಡು ವರ್ಷ ವಯಸ್ಸು. ಅಜ್ಜನಿಗೆ ಇವರೇ ಹಿರಿಯ ಮಗ. ಅವರನ್ನು ಧುಮ್ಮನಸೂರಿನ ಸಿದ್ರಾಮ್ಮಪ್ಪಾ ಚೀನಕೇರಿ ಎಂಬುವರ ತೋಟದಲ್ಲಿ ಒಂದು ವರ್ಷಕ್ಕೆ ೧೨೫ ರೂಪಾಯಿಗಳಂತೆ ದುಡಿಯಲು ಇಟ್ಟು, ತಂದ ಸಾಲವನ್ನು ತೀರಿಸಿದರಂತೆ.

ಇದಕ್ಕೂ ಮೊದಲು ನಾಲ್ಕು ವರ್ಷ ದನ ಕಾಯುವ ಕೆಲಸವನ್ನು ಅವರು ನಿರ್ವಹಿಸಿದ್ದರು. ಮನೆಯಲ್ಲಿ ಕಿತ್ತು ತಿನ್ನುವ ಬಡತನವಿದ್ದಿದ್ದರಿಂದ ಎಂಟು ವರ್ಷದ ಪ್ರಾಯದಿಂದಲೇ ಇವರಪ್ಪ ದುಡಿಮೆಗೆ ನಿಲ್ಲಬೇಕಾಗಿತ್ತು. ದೇಶವೇ ಆರ್ಥಿಕವಾಗಿ ಹಿಂದಿದ್ದ ಕಾಲವದು. ಹಾಗಾಗಿ ಪ್ರತಿಯೊಬ್ಬರೂ ದುಡಿಯಲೇಬೇಕಾದ ಅನಿವಾರ್ಯತೆಯನ್ನು ಎದುರಿಸುತ್ತಿದ್ದರು. ಇಲ್ಲವಾದಲ್ಲಿ ಜೀವನ ನಿರ್ವಹಣೆ ಕಷ್ಟದ ಕೆಲಸವಾಗಿತ್ತು.

'ಈ ಹೊತ್ತಿಗೆ ನಾವೆಲ್ಲ ಇಷ್ಟೊಂದು ಕಲಿತು, ಬೆಳೆದು ನಿಂತಿರುವಾಗ, ನಮ್ಮಪ್ಪ ಮೂಲಾಕ್ಷರಗಳ ಮುಖವು ನೋಡಲಾಗದೆ ಅವಕಾಶ ವಂಚಿತರಾಗಿ ಬೆಳೆದುಬಂದ ವ್ಯವಸ್ಥೆಯನ್ನು ಗಮನಿಸಿದರೆ ಕರಳು ಹಿಂಡಿದಂತಾಗುತ್ತದೆ' ಎಂಬ ಶಿವಸ್ವಾಮಿಯವರ ಮಾತಿನಲ್ಲಿ ಅಪ್ಪನ ಬಗೆಗಿನ ಕಾಳಜಿ, ಅವರು ನಮ್ಮಿಂದಾಗಿ ಮನೆಯ ಕುಟುಂಬದ ಬಡತನದಿಂದಾಗಿ ಅಕ್ಷರ ಕಲಿಕೆಯಿಂದ ವಂಚಿತರಾದರು ಎಂಬ ಪ್ರಜ್ಞೆ ಕಾಣುತ್ತದೆ. ವಿದ್ಯೆಗೆ ವಿಮುಖವಾಗಿ ಅಪ್ಪನ ಕಷ್ಟಕರ ಬದುಕು ನೆನಸಿಕೊಂಡರೆ ತೀರಾ ದುಃಖವಾಗುತ್ತದೆ ಎಂದು ಹಲವು ಬಾರಿ ಅವರದನ್ನು ನೆನೆಯುತ್ತಲೇ ಇರುತ್ತಾರೆ. ಹಾಗಂತ ಇದು ಇವರೊಬ್ಬರ ನೋವೇನು ಅಲ್ಲ. ಆ ಕಾಲದ ಎಲ್ಲರ ಬದುಕು ಕೂಡ ಹೀಗೆಯೇ. ಎಷ್ಟೋ ಜನ ಉಳ್ಳವರ ಮಕ್ಕಳು ಎಲ್ಲಾ ಅನುಕೂಲತೆಗಳು ಇದ್ದಾಗಲೂ ಸಹ ಸರಿಯಾಗಿ ಓದು ಬರಹ ಕಲಿಯದೇ ಸೋಮಾರಿಗಳಾಗಿ ವಿದ್ಯೆಯಿಂದ ವಂಚಿತರಾದವರು ನಮ್ಮ ನಡುವೆ ಇದ್ದಾರೆ. ಆದರೆ ಕಲಿಯಬೇಕೆಂಬ ಹಂಬಲವಿದ್ದವರಿಗೆ ಬಡತನ, ಅಜ್ಞಾನ, ಮೌಢ್ಯತೆಗಳು ಅಡ್ಡಿಯಾಗಿ ಅನೇಕರನ್ನು ಅವಿದ್ಯಾವಂತರನ್ನಾಗಿ ಮಾಡಿರುವ ಘಟನೆಗಳು ಇತಿಹಾಸದುದ್ದಕ್ಕೂ ನಮಗೆ ಓದಲು ಸಿಗುತ್ತವೆ.

ಶಿವಸ್ವಾಮಿಯವರ ತಂದೆಯವರಿಗೆ ಒಟ್ಟು ೪ ಜನ ಸಹೋದರರಿದ್ದರು. ಅವರಲ್ಲಿ ಎರಡನೇ ಮತ್ತು ನಾಲ್ಕನೇಯವರಿಬ್ಬರೂ ಶಿವಸ್ವಾಮಿಯವರ ಬಹಳಷ್ಟು ವಿಚಾರಗಳನ್ನು, ನಡವಳಿಕೆಗಳನ್ನು ಕುಟುಂಬ ಮಟ್ಟದಲ್ಲಿ ಹಾಗೂ ಸಾಮಾಜಿಕವಾಗಿ ತಿರಸ್ಕರಿಸುತ್ತಾ ಬಂದವರು.

ಪ್ರಾರಂಭದಲ್ಲಿ ೧೦-೧೫ ವರ್ಷಗಳ ಕಾಲ ನಾಲ್ಕನೇಯ ಚಿಕ್ಕಪ್ಪ ಇವರ ನಡೆಯನ್ನು, ವಿಚಾರಗಳನ್ನು ಪರೋಕ್ಷವಾಗಿ ಸಹಕರಿಸಿದ್ದು ಇದೆ. ಆದರೆ ಕಾಲಾನಂತರ ಕ್ರಮೇಣವಾಗಿ ಅವರ ಮನಸ್ಸು ಕೂಡ ಶಿವಸ್ವಾಮಿಯವರ ನಡೆಗಳನ್ನು ವಿಚಾರಗಳನ್ನು ಖಂಡಿಸಲು ಅನಿವಾರ್ಯವಾಗುವಂತಹ ವಾತಾವರಣ ಉಂಟಾಯಿತು. ಅದು ಅಷ್ಟಕ್ಕೆ ನಿಲ್ಲದೆ ಇವರ ವಿರುದ್ಧ ತಿರುಗಿಬಿದ್ದರಲ್ಲದೆ, ಮನೆಯವರನ್ನೆಲ್ಲಾ ಒಟ್ಟುಗೂಡಿಸಿ ಶಿವಸ್ವಾಮಿಯವರ ಬಗ್ಗೆ ಅಪನಂಬಿಕೆ ಹುಟ್ಟುವಂತೆ ಮಾಡಿದರು. ಅವರ ಬಗ್ಗೆ ಇಲ್ಲಸಲ್ಲದ ಆರೋಪಗಳನ್ನು, ಮಾತುಗಳನ್ನು ಆಡತೊಡಗಿದರು. 'ಅವರ ಈ ಮಾದರಿಯ ನಡೆ ಅಥವಾ ಒತ್ತಾಯದ ಕ್ರಮ ಊರಿನ ಅದೆಷ್ಟು ಜನರಿಗೆ ಒಪ್ಪಿಗೆಯಾಯಿತೋ ಇಲ್ಲವೋ ಗೊತ್ತಿಲ್ಲಾ. ಅದನ್ನು ನಾನು ಕೂಡ ತಿಳಿದುಕೊಳ್ಳಲು ಹೋಗಲಿಲ್ಲ' ಎಂದು ಶಿವಸ್ವಾಮಿಯವರು ಅಂದಿನ ಕಷ್ಟದ ದಿನಗಳನ್ನು ನೆನೆಯುತ್ತಾರೆ. ಓರ್ವ ವ್ಯಕ್ತಿ ನಮ್ಮಲ್ಲೇ ನಡೆದ ಐತಿಹಾಸಿಕ ಕ್ರಾಂತಿಯ ವಿಚಾರಗಳಿಗೆ ಒಪ್ಪಿಕೊಳ್ಳಲು ಇಷ್ಟೆಲ್ಲಾ ವಿರೋಧಗಳನ್ನು ಎದುರಿಸಬೇಕೆ ಎಂಬುದು ಅವರ ಪ್ರಶ್ನೆಯಾಗಿದೆ. ಅವರು ಬಸವಾದಿ ಶರಣರ ವಿಚಾರಗಳನ್ನು ಒಪ್ಪಿಕೊಂಡು ಸುಮ್ಮನಾಗಿದ್ದರೆ ಬಹುಶಃ ಈ ವಿರೋಧ ಬರುತ್ತಿರಲಿಲ್ಲ. ಅದನ್ನವರು ಜೀವನದಲ್ಲಿ ಅಳವಡಿಸಿಕೊಳ್ಳುವ ಮೂಲಕ ಇತರರಿಗೆ ಮಾದರಿ ನಡೆಯನ್ನು, ಪಂಕ್ತಿಯನ್ನು ಹಾಕಲು ಪ್ರಯತ್ನಿಸಿದ್ದು ಊರ ಮತ್ತು ಕುಟುಂಬದ ಮೂಲಭೂತವಾದಿಗಳಿಗೆ ಹಿಡಿಸಲಿಲ್ಲ. ಭಾರತೀಯ ವಿಭೂತಿ ಪುರುಷರ ಚರಿತ್ರೆಯೂ ಅಷ್ಟೆ. ಅವರು ಅವರವರ ಕಾಲದ ಕಂದಾಚಾರಗಳನ್ನು, ಮೌಢ್ಯಗಳನ್ನು ಕೇವಲ ವಿರೋಧಿಸಿಕೊಂಡಿದ್ದರೆ ಮೂಲಭೂತವಾದಿಗಳ ಕೆಂಗಣ್ಣಿಗೆ ಗುರಿಯಾಗುತ್ತಿರಲಿಲ್ಲ. ಅದಕ್ಕೆ ಪರ್ಯಾಯವೊಂದನ್ನು ಸೃಷ್ಟಿಸಲು ಪ್ರಯತ್ನಿಸಿದ್ದು ಆ ಮೂಲಕ ಜನಸಾಮಾನ್ಯರನ್ನು ಅವರಿಂದ ದೂರ ಮಾಡಿದ್ದು ಅವರ ಕೋಪಕ್ಕೆ ಮತ್ತು ಪ್ರತಿಕಾರಕ್ಕೆ ಕಾರಣವಾಯಿತು. ಆದರೆ ಶಿವಸ್ವಾಮಿಯವರ ಕುಟುಂಬವನ್ನು ಬಂಧುಬಳಗದಿಂದ ನೆಂಟರಿಸ್ಟರಿಂದ

ದೂರ ಮಾಡುವಲ್ಲಿ ಇವರ ಚಿಕ್ಕಪ್ಪ ತಕ್ಕ ಮಟ್ಟಿಗೆ ಯಶಸ್ವಿಯಾದರೆಂದೇ ಹೇಳಬಹುದು.

೧೯೭೨ರ ಆ ಸಂದರ್ಭ ಬಡಜನರ ಪಾಲಿಗೆ ದಿನ ಕಳೆದಂತೆಲ್ಲಾ ಮೃತ್ಯುವಿನ ನೆರಳಾಗಿ ಭೀತಿ ಹೆಚ್ಚಿಸುತ್ತಿತ್ತು. ಜೋಳದ ರೊಟ್ಟಿ, ಭತ್ತದ ಅನ್ನ, ಗೋಧಿ ಚಪಾತಿ ಇವೆಲ್ಲವುಗಳು ಅಂದು ಕೇವಲ ಶ್ರೀಮಂತರ ಸೊತ್ತಾಗಿದ್ದವು. ನವಣೆ ರೊಟ್ಟಿ, ಸ್ನಾವಿ ಅನ್ನ ಮೊದಲಾದವುಗಳು ಸಿಗಬೇಕಾದರೂ ಕಷ್ಟವಿತ್ತು. ಜನ ಹೈಬ್ರೀಡ್ ಜೋಳದ ನುಚ್ಚು ತಯಾರಿಸಿ ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದರಂತೆ. ತಿನ್ನುವ ಅನ್ನಕ್ಕೂ ಗತಿ ಇಲ್ಲದೆ ಊರಲ್ಲಿನ ಅನೇಕರು ಹಸಿವು ತಾಳದೇ ಜಗಲಿ ಮೇಲಿನ ದೇವರುಗಳನ್ನೇ ಮಾರಿಕೊಂಡು ದಿನ ಕಳೆದದ್ದುಂಟು. ಇದು ಸಾಲದಿದ್ದಾಗ ಇರುವ ಅಂಗೈಯಗಲ ಹೊಲಮನೆ, ದನ-ಕರುಗಳನ್ನು ಮಾರಾಟ ಮಾಡಿಕೊಂಡು ಊರುಬಿಟ್ಟು ದೊಡ್ಡ ದೊಡ್ಡ ನಗರಗಳಿಗೆ ವಲಸೆ ಹೋದವರುಂಟು. ಇಂತಹ ಹಲವಾರು ಸಂಕಷ್ಟಗಳನ್ನೆದುರಿಸಿ ನಮ್ಮ ಹಿರಿಕರು ಬಡತನದಲ್ಲಿಯೇ ತಮ್ಮ ಜೀವನೋಪಾಯಕ್ಕಾಗಿ ಎಂತಹ ಕಠಿಣ ಕೆಲಸಗಳನ್ನಾದರೂ ಮಾಡಿ ಆಪತ್ತು ಕಾಲಗಳಿಂದ ಪಾರಾಗಿ ಬಂದಿರುವುದು ಈಗ ದಂತಕಥೆಗಳಾಗಿ ಉಳಿದುಕೊಂಡಿವೆ.

ಕುಲಕರ್ಣಿ ಕುಟುಂಬ ಮತ್ತು ಶಿವಸ್ವಾಮಿ.

ಅದಾವ ಋಣಾನುಬಂಧವೋ ಏನೂ ೬ನೇ ವಯಸ್ಸಿನಿಂದಲೇ ಪ್ರಾರಂಭವಾದ ಬ್ರಾಹ್ಮಣರ ನಂಟು ಶಿವಸ್ವಾಮಿಯವರಿಗೆ ಕಡೆಯವರೆಗೂ ಉಳಿದುಕೊಂಡು ಬಂದಿದೆ. ಧುಮ್ಮನಸೂರಿನಲ್ಲಿ ಸಹೋದರ ರಾಜಶೇಖರನ ಸಹಪಾಠಿ ಆಗಿದ್ದ ಮುರಳೀಧರ ಕುಲಕರ್ಣಿ ಹಾಗೂ ಅವರಣ್ಣ ಮೋಹನ ಮತ್ತು ಪ್ರದೀಪ ಇವರೆಲ್ಲರೊಂದಿಗೆ ಸಲುಗೆಯಿಂದ ಆಟ ಆಡಿದ್ದು, ಚೀನಕೇರಿಯಲ್ಲಿ ಕೇಶವರಾವ್ ಕುಲಕರ್ಣಿಯವರ ಮನೆಯಂತೂ ಇವರಿಗೆ ಸ್ವಂತ ಮನೆಗೆ ಸಮಾನವಾಗಿತ್ತಂತೆ. ಅಲ್ಲಿ ಇವರ ಸಹಪಾಠಿ ಆಗಿದ್ದ

ಸೋಮು ಕುಲಕರ್ಣಿ ಹಾಗೂ ಅವರಕ್ಕ ವಿದ್ಯಾ ಅಲ್ಲದೆ ಸೋಮುವಿನ ಸೋದರ ಮಾವನ ಮಕ್ಕಳಾದ ಅಂಬಿಕಾ ಹಾಗೂ ಗಿರಿಜಾರವರೊಂದಿಗೆ ಕಳೆದ ದಿನಗಳನ್ನು ಮರೆಯಲಾಗದ ನೆನಪುಗಳಾಗಿವೆ ಎನ್ನುತ್ತಾರೆ. ಮುಂದೆ ಹುಮಾನಾಬಾದಿನಲ್ಲಿ ಇವರ ಸಂಗೀತ ಗುರುಗಳಾದ ಎಸ್.ಎ.ಎಸ್ ವಠಾರ ಅವರ ಮನೆಯಲ್ಲಿ ಬಾಡಿಗೆಗಿದ್ದ ನಿರ್ಮಲಾ ಕುಲಕರ್ಣಿ ಅಕ್ಕನವರ ಪರಿಚಯವಾಯಿತು. ಅವರು ಉರ್ದು ಖಾಸಗಿ ಶಾಲೆಯೊಂದರಲ್ಲಿ ಶಿಕ್ಷಕರಾಗಿ ಕೆಲಸ ನಿರ್ವಹಿಸುತ್ತಿದ್ದರು. ಮೂಲತಃ ವಿಜಯಪುರ ಜಿಲ್ಲೆಯವರಾದ ಅವರು ತಮ್ಮ ತಾಯಿಯವರ ನೌಕರಿ ಕಲ್ಲೂರಿಗೆ ವರ್ಗವಾಗಿದ್ದರಿಂದ ಇಲ್ಲಿಗೆ ಬಂದಿದ್ದರು. ತಾಯಿ ಲೀಲಾವತಿ ಜೋರಾಪುರ ಅವರು ಕಲ್ಲೂರಿನಲ್ಲಿಯೇ ವಾಸವಾಗಿದ್ದರು. ಅವರು ತುಂಬಾ ವಿಶಾಲ ಹೃದಯಿಗಳು. ಅವರಲ್ಲಿನ ಮಾತೃ ವಾತ್ಸಲ್ಯವನ್ನು ಕಂಡು ಶಿವಸ್ವಾಮಿವರು ಬೆರಗುಗೊಂಡಿದ್ದರು. ಇವರನ್ನು ಆಗಾಗ ಕಲ್ಲೂರಿಗೆ ಕರೆಸಿಕೊಂಡು ತಿಂಗಳುಗಟ್ಟಲೇ ಇರಿಸಿಕೊಳ್ಳುತ್ತಿದ್ದರು. ಅವರ ಸ್ವಂತ ಮಗನಂತೆ ಇವರನ್ನು ಕಾಣುತ್ತಿದ್ದರು. ಕಳೆದ ೨ ವರ್ಷಗಳ ಹಿಂದೆ ಅವರು ಕಾಲವಾಗಿದ್ದಾರೆ. ಒಟ್ಟಾರೆಯಾಗಿ ಶಿವಸ್ವಾಮಿಯವರಿಗೆ, ಕುಲಕರ್ಣಿ ಪರಿವಾರಗಳಿಂದ ಅಹಿಂಸವಾದದ ಪರಿಚಯವಾಯಿತು ಎಂದು ನೆನಪಿಸಿಕೊಳ್ಳುತ್ತಾರೆ.

ಪುಣ್ಯಾತ್ಮೆ ಮಾಣೆಮ್ಮ.

ಶಿವಸ್ವಾಮಿ ಅವರಿಗೆ ಎರಡು ವರ್ಷ ಮೂರು ತಿಂಗಳು ವಯಸ್ಸು. ತಂದೆಯವರು ಪಕ್ಕದ ಧುಮ್ಮನಸೂರಿನ ಮಲಶೆಟ್ಟಪ್ಪನವರ ತೋಟದಲ್ಲಿ ಬಸಪ್ಪನವರೊಂದಿಗೆ ದುಡಿಯುಲು ಹೋಗುತ್ತಿದ್ದರು. ಬಸಪ್ಪನವರು ಕೂಡ ಚೀನಕೇರಾ ಗ್ರಾಮದವರೇ. ಇದು ಚೀನಕೇರಾದಿಂದ ಆರು ಕಿ.ಮೀ ದೂರವಿರುವ ಗ್ರಾಮ. ತಂದೆಯವರು ದುಡಿಯಲು ಹೋದ ಮೇಲೆ ಇವರ ಅಮ್ಮನವರು ಮನೆಕೆಲಸವೆಲ್ಲ ಮುಗಿಸಿ, ತಂದೆಯವರಿಗೆ ಬುತ್ತಿ ತೆಗೆದುಕೊಂಡು ಪಕ್ಕದ ಮನೆಯವರಾದ ಮಾಣೆಮ್ಮನವರೊಂದಿಗೆ ಅಲ್ಲಿಗೆ

ಕೂಲಿ ಕೆಲಸಕ್ಕಾಗಿ ಹೋಗುತ್ತಿದ್ದರು. ದಿನವಿಡಿ ಅಲ್ಲಿಯೇ ಕೆಲಸ ಮಾಡಿ ಸಾಯಂಕಾಲ ಜೊತೆಯಾಗಿ ಮನೆಗೆ ವಾಪಸ್ಸಾಗುತ್ತಿದ್ದರು. ಅಂದೆಲ್ಲ ಹೆಣ್ಣುಮಕ್ಕಳಿಗೆ ದಿನಕ್ಕೆ ೨೫ ಪೈಸೆ ಕೂಲಿ ಕೊಡುತ್ತಿದ್ದರಂತೆ. ಒಮ್ಮೆ ಅಲ್ಲಿ ಹೀಗೆ ಇವರು ಕೂಲಿ ಮಾಡಲು ಹೋಗಿದ್ದ ಸಂದರ್ಭದಲ್ಲಿ ಶಿವಸ್ವಾಮಿಯವರೊಂದಿಗೆ ನಡೆದ ಘಟನೆ ಆಶ್ಚರ್ಯಕರವಾಗಿದೆ. ತೋಟದಲ್ಲಿ ಕಬ್ಬು ನಾಟಿ ಮಾಡುವ ಕೆಲಸ ನಡೆಯುತ್ತಿತ್ತು. ಮಾಣೆಮ್ಮ ಮತ್ತು ಇವರ ತಾಯಿಯವರು ಮರದ ನೆರಳಿನಲ್ಲಿ ಕುಳಿತುಕೊಂಡು ಮೈಮರೆತು ಕಬ್ಬನ್ನು ನಾಟಿ ಮಾಡಲು ಕಬ್ಬಿನ ಬೀಜ ಸುಲಿಯುತ್ತಿದ್ದರು. ಹೀಗೆ ಕೆಲಸ ಮಾಡುತ್ತಿರಬೇಕಾದರೆ ಎಲ್ಲರ ಆಚಾತುರ್ಯದಿಂದ ಒಂದು ಘಟನೆ ನಡೆದು ಹೋಯಿತು. ಬಸಪ್ಪ ಮತ್ತು ಶಿವಸ್ವಾಮಿ ಅವರ ತಂದೆಯವರು ಗೊಬ್ಬರ ತುಂಬಿದ ಬಂಡಿ ಹೊಡೆದುಕೊಂಡು ಹೊಲದಕಡೆ ಬರುತ್ತಿದ್ದರು. ಹೆಣ್ಣುಮಕ್ಕಳು ಕುಳಿತಿದ್ದ ಜಾಗದ ಪಕ್ಕದಿಂದಲೇ ಆ ಬಂಡಿಗೆ ಹಾದು ಹೋಗಲು ದಾರಿ ಇದ್ದುದರಿಂದ ಬಂಡಿ ಇವರಿಗೆ ಗೊತ್ತಾಗದಂತೆ ಸಮೀಪಿಸಿ ಬಿಟ್ಟಿತ್ತು. ಮರದ ನೆರಳಿಗೆ ಮಗ ನಿದ್ದೆ ಮಾಡಲೆಂದು ಅವರ ತಾಯಿ ಶಿವಸ್ವಾಮಿಯವರನ್ನು ಅಲ್ಲಿಯೇ ಮಲಗಿಸಿದ್ದರು. ಬಂಡಿ ಹೊಡೆದುಕೊಂಡು ಬರುವವರಿಗೆ ಮಗು ಅಲ್ಲಿ ಮಲಗಿದೆ ಎಂದು ತಿಳಿದಿಲ್ಲ. ಮಗುವನ್ನು ಮಲಗಿಸಿದವರಿಗೆ ಬಂಡಿ ಈ ಕಡೆಗೆ ಬರುತ್ತಿದೆ ಎಂಬ ಪ್ರಜ್ಞೆಯಿಲ್ಲ. ಏಕೆಂದರೆ ಅವರು ತಮ್ಮ ಕೆಲಸದಲ್ಲಿ ತಾವು ಮೈಮರೆತಿದ್ದಾರೆ. ಅದ್ಹೇಗೋ ಅವರ ತಾಯಿಯವರು ಮಗು ಮಲಗಿರುವ ಕಡೆಗೆ ಬಂಡಿ ಬರುವುದನ್ನು ಗಮನಿಸಿ ಗಾಬರಿಯಿಂದ ಹೌಹಾರಿ ಏನು ತೋಚದೆ ಕೂಗತೊಡಗಿದರಂತೆ. ಮಾಣೆಮ್ಮನವರು ಮಲಗಿರುವ ಮಗುವಿಗೆ ಹತ್ತಿರದಲ್ಲಿಯೇ ಕುಳಿತು ಕೆಲಸ ಮಾಡುತ್ತಿದ್ದರಿಂದ ಬುದ್ಧಿವಂತಿಕೆಯಿಂದ ತಮ್ಮ ಉದ್ದನೆಯ ಕೈಗಳಿಂದ ಮಗು ಶಿವಸ್ವಾಮಿ ಅವರನ್ನು ಹಿಡಿದು ಅವಸರವಸರವಾಗಿ ಅವರೆಡೆಗೆ ಸೆಳೆದುಕೊಂಡರಂತೆ. ಅದಾಗ್ಯೂ ಬಂಡಿಯ ಚಕ್ರ ಅವರ ಕಾಲಿಗೆ ಸ್ವಲ್ಪ ತಾಗಿಕೊಂಡು ಹೋಗಿದ್ದರ ಪರಿಣಾಮವಾಗಿ

ತೊಡೆಯ ಮೇಲೆ ಒಂದಿಷ್ಟು ಗಾಯವಾಯಿತು. ಶಿವಸ್ವಾಮಿಯವರ ತಾಯಿಯ ಕೂಗಾಟ, ಚೀರಾಟ ಕೇಳಿ ಹೊಲದಲ್ಲಿಯೇ ಇದ್ದ ತೋಟದ ಮಾಲೀಕ ಮಲಶೆಟ್ಟಪ್ಪನವರ ಮಗ ಪರಮೇಶ್ವರ ಅವರು ಕೂಡಲೇ ಸ್ಥಳಕ್ಕೆ ಬಂದು ಶಿವಸ್ವಾಮಿಯವರನ್ನು ಹುಮಾನಾಬಾದಿನಲ್ಲಿ ವೈದ್ಯರಾಗಿದ್ದ ಶ್ರೀ ಮಾಣಿಕರಾವ್ ಅವರ ಬಳಿಗೆ ಕರೆದೊಯ್ದು ಚಿಕಿತ್ಸೆ ಕೊಡಿಸಿದರಂತೆ. ಬಸಪ್ಪನವರ ಪತ್ನಿ ಮಾಣೆಮ್ಮನವರು ಆ ಕ್ಷಣ ಬುದ್ಧಿವಂತಿಕೆ ತೋರಿಸದಿದ್ದರೆ ಬಂಡಿ ಇವರ ಕಾಲುಗಳ ಮೇಲಿಂದ ಹಾದು ಹೋಗುತ್ತಿತ್ತು. ಅದೃಷ್ಟವೆಂಬಂತೆ ಆ ದಿನ ಅವರು ಬದುಕಿದ್ದು ಈಗ ಅವಿಸ್ಮರಣೀಯ ಘಟನೆಯಾಗಿ ಉಳಿದುಕೊಂಡಿದೆ. ಅವರ ಎಡತೊಡೆಯ ಮೇಲೆ ಈಗಲೂ ಸಹ ಆ ದೊಡ್ಡಗಾಯವಿದೆ. ಅವರನ್ನು ಉಳಿಸಿದ ಆ ಪುಣ್ಯಾತ್ಮೆಯ ಋಣ ಯಾವ ಜನ್ಮಕ್ಕೂ ಮರೆಯಲಾಗದಂಥದ್ದು ಎಂದು ಶಿವಸ್ವಾಮಿಯವರು ಇಂದಿಗೂ ಅದನ್ನು ಕೃತಜ್ಞತೆಯಿಂದ ನೆನೆಯುತ್ತಾರೆ.

ಶಿಕ್ಷಣ.

ಶಿವಸ್ವಾಮಿ ಅವರ ತಾಯಿಯ ತವರು ಮನೆ ಧುಮ್ಮನಸೂರು. ಇದು ಹುಮನಾಬಾದ್ ತಾಲೂಕು ಕೇಂದ್ರದಿಂದ ಕೂಗಳತೆ ದೂರದಲ್ಲಿ ನೆಲೆಗೊಂಡ ಗ್ರಾಮ. ಹಾಗೆ ನೋಡಿದರೆ ಚೀನಕೇರಾ ಗ್ರಾಮಕ್ಕಿಂತಲೂ ಇದು ಆಧುನಿಕವಾಗಿ-ಆರ್ಥಿಕವಾಗಿ ಬೆಳೆದ ಗ್ರಾಮ ಎನಿಸಿಕೊಂಡಿದೆ. ಶಿವಸ್ವಾಮಿಯವರು ತಮ್ಮ ಪ್ರಾಥಮಿಕ ಶಿಕ್ಷಣವನ್ನು ಸ್ವಗ್ರಾಮ ಚೀನಕೇರಾ ಹಾಗೂ ತಾಯಿಯ ತವರು ಮನೆಯಾದ ಧುಮ್ಮನಸೂರಿನಲ್ಲಿ ಸರ್ಕಾರಿ ಕನ್ನಡ ಮಾಧ್ಯಮ ಶಾಲೆಗಳಲ್ಲಿ ಪೂರೈಸಿದ್ದಾರೆ. ಈ ಹೊತ್ತಿಗೆ ಕನ್ನಡ ಮಾಧ್ಯಮ ಶಾಲೆಗಳಲ್ಲಿ ಓದುವುದು ಎಂದರೆ ಮಕ್ಕಳನ್ನು ಅಜ್ಞಾನಕ್ಕೆ ದೂಡಿದಂತೆ ಎಂಬ ವಾತಾವರಣ ಸೃಷ್ಟಿಯಾಗಿರುವ ಸಂದರ್ಭದಲ್ಲಿ ಮತ್ತೆ ಮತ್ತೆ ನಮ್ಮ ಹಿರಿಕರ ಶಿಕ್ಷಣ ಕ್ರಮದತ್ತ ನಾವು ಹೊರಳಿ ನೋಡಬೇಕಾಗಿದೆ. ಸ್ವಾತಂತ್ರ್ಯ ಮತ್ತು ಏಕೀಕರಣ ಹೋರಾಟಗಾರರೂ

ಸಂಸ್ಕೃತಿ ಚಿಂತಕರೂ ಆದ ಕೋ.ಚೆ ಅವರು ಹೈಸ್ಕೂಲ್ ತರಗತಿಯ ಪ್ರವೇಶಕ್ಕೆ ಹೋದಾಗ ವೇದಾಂತಂ ಶಿಕ್ಷಕರು ಇಂಗ್ಲಿಷನಲ್ಲಿ ಪ್ರಶ್ನೆ ಕೇಳಿದಾಗ ಉತ್ತರಿಸಲಾಗದೆ, ಅದೇ ಪ್ರಶ್ನೆಯನ್ನು ಕನ್ನಡದಲ್ಲಿ ಕೇಳಲಾಗಿ ಬಹು ಸಲಿಸಾಗಿ ಉತ್ತರಿಸಿದ ಸಂದರ್ಭವನ್ನು ನಾನೊಮ್ಮೆ ಅವರನ್ನು ಭೇಟಿಯಾದಾಗ ಹೀಗೆ ಹೇಳಿದ್ದರು. 'ಇಂಗ್ಲಿಷ್ ಶಿಕ್ಷಣ ಮಾಧ್ಯಮ ಬೇಕೆಂದು ವಾದಿಸುವವರಿಗೆ ಹಳ್ಳಿಯಲ್ಲಿ ಹುಟ್ಟಿ ಬೆಳೆದ ನಮ್ಮಂಥ ಬಡಪಾಯಿಗಳ ಅರಿವೇಯಿಲ್ಲವೆಂದು ನನಗೆ ವ್ಯಸನವಾಗುತ್ತದೆ. ವೇದಾತಂ ಹೆಡ್ ಮಾಸ್ಟರ್ ಕನ್ನಡದಲ್ಲಿ ಹೇಳೆಂದು ನನಗೆ ಅವಕಾಶ ಕೊಡದಿದ್ದರೆ ನನಗೆ ವಿಷಯ ತಿಳಿದಿದೆ ಎಂಬುದು ಅವರಿಗೆ ತಿಳಿಯುತ್ತಲೇ ಇರಲಿಲ್ಲ' ಎಂದು ಆ ಸಂದರ್ಭವನ್ನು ಪ್ರಸ್ತಾಪಿಸಿದ್ದರು. ಕೋ.ಚೆ ಅವರ ಕಾಲಕ್ಕೆ ಇಂಗ್ಲಿಷ್ ಶಿಕ್ಷಣ ಮಾಧ್ಯಮವಾಗುತ್ತಿದ್ದ ಕಾಲವನ್ನು ನಾವಿಲ್ಲಿ ಸೂಕ್ಷ್ಮವಾಗಿ ಗಮನಿಸಬಹುದು.

೧೯೭೨ರಲ್ಲಿ ಉಂಟಾದ ಭೀಕರ ಬರಗಾಲ ಹಳ್ಳಿ ಹಳ್ಳಿಗೂ ಗಂಡಾಂತರಗಳನ್ನು ತಂದೊಡ್ಡಿತು. ನಮ್ಮ ಕಡೆಗೆ ಇದು 'ಬಾಹತ್ತರ ಬರಗಾಲ' ಎಂದೇ ಚಿರಪರಿಚಿತ. ಬರಗಾಲದ ಹೊಡೆತಕ್ಕೆ ಸಿಕ್ಕ ಇವರ ಕುಟುಂಬವು ಕೂಡ ಸಾಕಷ್ಟು ಆರ್ಥಿಕ ಸಂಕಷ್ಟಗಳನ್ನು ಆ ಸಂದರ್ಭಗಳಲ್ಲಿ ಎದುರಿಸಬೇಕಾಗಿ ಬಂತು. ಅವರ ಅಪ್ಪ ಅಮ್ಮನಿಗೆ ಊರಲ್ಲಿ ಕೆಲಸವಿಲ್ಲದೆ ಜೀವನ ನಿರ್ವಹಣೆಯೇ ಒಂದು ಸವಾಲಾಗಿ ಪರಿಣಮಿಸಿತು. ಕೆಲಸವಿಲ್ಲದ ಕಾರಣ ಜೀವನೋಪಾಯಕ್ಕೆ ಏನು ಆಧಾರವಿಲ್ಲದಂತಾಗಿ ದಿಕ್ಕೇ ತೋಚದಂತಾಯಿತು. ನಿರುಪಾಯರಾದ ಇವರ ತಾಯಿಯವರು ಗಂಡನನ್ನು ಒಂದೆರಡು ವರ್ಷಗಳ ಮಟ್ಟಿಗೆ ತನ್ನ ತವರುಮನೆ ಧುಮ್ಮನಸೂರಿಗೆ ಕರೆದುಕೊಂಡು ಹೋದರು. ಹಾಗಾಗಿ ಅಲ್ಲಿಯೇ ಶಿವಸ್ವಾಮಿಯವರ ಪ್ರಾಥಮಿಕ ಶಿಕ್ಷಣ ಆರಂಭವಾಯಿತು. ಇವರ ಕಾಲಿನ ಗಾಯ ಗುಣಪಡಿಸಲು ಚಿಕಿತ್ಸೆ ಕೊಡಿಸಿದ ಹೊಲದ ಮಾಲಿಕರಾದ ಶ್ರೀ ಪರಮೇಶ್ವರ ಅವರೇ ಮುಂದೆ ಇವರಿಗೆ ಪ್ರಾಥಮಿಕ ಶಾಲೆಯ ಶಿಕ್ಷಕರಾಗಿ

ಬಂದರು. ಅವರೊಂದಿಗೆ ಐದಾರು ಜನ ಶಿಕ್ಷಕರು ಅಲ್ಲಿ ಸೇವೆ ನಿರ್ವಹಿಸುತ್ತಿದ್ದರು. ಆ ಶಾಲೆಗೆ ಅದಾಗಲೇ ಸರ್ಕಾರದಿಂದ ಮೂರು ಕೋಣೆಗಳು ಮಂಜೂರಾಗಿದ್ದವು. ಅವುಗಳನ್ನು ಹೊರತುಪಡಿಸಿದರೆ ತರಗತಿವಾರು ಬೇಕಾದ ವರ್ಗ ಕೋಣೆಗಳು ಅಲ್ಲಿ ಇರಲಿಲ್ಲ. ಹೀಗಾಗಿ ಗ್ರಾಮದ ಮಹಾದೇವ ಮಂದಿರ, ಲಕ್ಷ್ಮೀ ಮಂದಿರ, ಗ್ರಾಮ ಪಂಚಾಯತ್ ಕಟ್ಟಡಗಳಲ್ಲಿ ಬೇರೆ ಬೇರೆ ತರಗತಿಗಳು ನಡೆಯುತ್ತಿದ್ದುವು. ಶಾಣಪ್ಪ ಎಲಿಗಾರ, ಚಂದ್ರಕಾಂತ ಕಲ್ಲೂರ, ವೀರಶೆಟ್ಟಿ ಲಕ್ಷ್ಮಣರಾವ್ ಹಂಡಗಿ, ಮಾಣಿಕರಾವ್ ಗಡವಂತಿ ಮುಂತಾದವರು ಅಲ್ಲಿ ಇವರಿಗೆ ಶಿಕ್ಷಕರಾಗಿದ್ದರು. ಈ ಎಲ್ಲ ಶಿಕ್ಷಕರು ಮಕ್ಕಳಿಗೆ ಅತ್ಯಂತ ಕರುಣೆಯಿಂದ ಪ್ರೀತಿ ವಾತ್ಸಲ್ಯದಿಂದ ಅಕ್ಷರಾಭ್ಯಾಸ ಮಾಡಿಸುತ್ತಿದ್ದರಂತೆ. ಅವರ ಹೆಸರುಗಳನ್ನು ನೆನಸಿಕೊಂಡಾಗಲೆಲ್ಲ ಸಂತೋಷದಿಂದ ಹೃದಯ ಉಕ್ಕಿ ಬರುತ್ತದೆ ಎಂದು ಶಿವಸ್ವಾಮಿಯವರು ಅವರನ್ನು ನೆನೆಯುತ್ತಾರೆ.

ಅಂದಿನ ಆ ಶಿಕ್ಷಕರ ನಿರ್ಮಲ ಮನಸ್ಸು, ಮಕ್ಕಳಿಗೆ ಪಾಠ ಹೇಳಿಕೊಡುವ ಪದ್ಧತಿ ತುಂಬಾ ಕಾಳಜಿ ಪೂರ್ವಕವಾಗಿದ್ದವು. ಈಗಿನವರಲ್ಲಿ ಅದನ್ನು ಹುಡುಕುವುದು ದುರ್ಲಭ ಎನಿಸುತ್ತದೆ. ಅಂದಿನ ಮಕ್ಕಳು ಕೂಡ ಹಾಗೆಯೇ ಇದ್ದರು. ಗುರುಗಳು ಎಂದರೆ ಮುಗಿಯದ ಗೌರವ. ಅವರ ಮಾತುಗಳೇ ಅವರಿಗೆ ವೇದವಾಕ್ಯವಾಗಿದ್ದವು. ಅಂದಿನ ಮಕ್ಕಳು ತಂದೆ ತಾಯಿಗಳಿಗಿಂತಲೂ ಹೆಚ್ಚಾಗಿ ಗುರುಗಳನ್ನು ಜೀವನದಲ್ಲಿ ಅನುಸರಿಸುತ್ತಿದ್ದರು ಎಂದು ಶಿವಸ್ವಾಮಿಯವರು ಆಗಿನ ಶಾಲಾ ಪರಿಸರವನ್ನು ನೆನಪಿಸಿಕೊಳ್ಳುತ್ತಾರೆ. ಶಿಕ್ಷಕರು ಕೂಡ ವಿದ್ಯಾರ್ಥಿಗಳನ್ನು ತಮ್ಮ ಸ್ವಂತ ಮಕ್ಕಳಂತೆ ಗ್ರಹಿಸಿ ಕಾಳಜಿಪೂರ್ವಕವಾಗಿ ಓದಿಸುತ್ತಿದ್ದರು. ಇವರಿಗಿಂತಲೂ ಕೇವಲ ೨೦ ದಿನಗಳ ಹಿರಿಯನಾಗಿದ್ದ ಇವರ ದೊಡ್ಡಮ್ಮನ ಮಗ ರಾಜಶೇಖರ ಎಂಬುವವರು ಇವರಿಗಿಂತ ಒಂದು ತರಗತಿ ಮುಂದೆ ಇದ್ದರು. ಶಾಲಾ ದಿನಗಳಲ್ಲಿ ಅವರೇ ಇವರಿಗೆ ಅಚ್ಚುಮೆಚ್ಚಿನ ಸ್ನೇಹಿತನಾಗಿದ್ದರು. 'ಯಾರಲ್ಲೂ ಹೇಳಿಕೊಳ್ಳದ ಎಲ್ಲಾ ವಿಷಯಗಳನ್ನು

ಅವನಲ್ಲಿ ಹೇಳಿಕೊಳ್ಳುತ್ತಿದ್ದೆ. ನನ್ನ ಎಲ್ಲಾ ಸಮಸ್ಯೆಗಳಿಗೆ ಆತ ತನ್ನ ಚತುರ ಬುದ್ಧಿಯಿಂದ ಸಮರ್ಪಕವಾಗಿ ಪರಿಹಾರಗಳನ್ನು ಸೂಚಿಸುತ್ತಿದ್ದ' ಎಂದು ಅವರನ್ನು ನೆನೆಯುತ್ತಾರೆ. ಮುಂದೆ ಪ್ರೌಢಶಾಲೆಯ ಶಿಕ್ಷಣಕ್ಕಾಗಿ ಹುಮಾನಾಬಾದಿನ ಜೂನಿಯರ್ ಕಾಲೇಜಿನಲ್ಲಿ ಪ್ರವೇಶ ಪಡೆದು, ಅಲ್ಲಿಯೂ ಕೂಡ ಹತ್ತನೆ ತರಗತಿಯವರೆಗೆ ಜೊತೆಯಾಗಿಯೇ ಓದಿದರು.

ಮುಂದೆ ಪ್ರೌಢ ಶಿಕ್ಷಣವನ್ನು ಹುಮನಾಬಾದಿನ ಸರ್ಕಾರಿ ಜೂನಿಯರ್ ಕಾಲೇಜಿನಲ್ಲಿ ಓದುತ್ತಿರುವ ಸಂದರ್ಭದಲ್ಲಿಯೇ ಶಿವಸ್ವಾಮಿಯವರಲ್ಲಿ ಪುಸ್ತಕ ಓದಿನ ಅಭಿರುಚಿ ಬೆಳೆದಿದ್ದು. ಪ್ರೌಢ ಶಾಲೆಯಲ್ಲಿರುವಾಗಲೇ ಕಮಲಾ ಹಂಪನಾ ಅವರ 'ರೆಕ್ಕೆ ಮುರಿದಿತು', ಶಿವರಾಮ ಕಾರಂತರ 'ಮೂಕಜ್ಜಿಯ ಕನಸುಗಳು', ಮ್ಯಾಕ್ಸಿಂ ಗಾರ್ಕಿಯವರ 'ತಾಯಿ' ಕಾದಂಬರಿಯ ಕನ್ನಡನುವಾದ, ಅ.ರಾ. ಮಿತ್ರಾ ಅವರ 'ಸಂಕಲ್ಪಗಳು' ಹಾಗೂ 'ವಸ್ತು ಮತ್ತು ತಂತ್ರ' ಎಂಬ ವಿಮರ್ಶಾ ಕೃತಿಗಳನ್ನು ಓದಿದ್ದರು. ಜೊತೆಗೆ ವಿ.ಸೀತಾರಾಮಯ್ಯನವರ 'ಬಾಳಿನ ಬುತ್ತಿ', ಟಿ.ಪಿ. ಕೈಲಾಸಂ ಅವರ 'ಶೋಕ ಚಕ್ರ', ಉಷಾ ನವರತ್ನಾರಾಂ ಅವರ 'ನಾಳೆಯು ಬರಲಿ', ಎಸ್.ಎಲ್. ಭೈರಪ್ಪನವರ 'ಮತದಾನ', ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರ 'ಕರ್ವಾಲೋ', ನಾ. ಡಿಸೋಜಾ ಅವರ 'ಕಾಡಿನ ಬೆಂಕಿ' ಹಾಗೂ 'ಅಮೇರಿಕಾ ಗಾಂಧಿ' ಮುಂತಾದ ಕನ್ನಡ ಪುಸ್ತಕಗಳನ್ನು ಓದುತ್ತಾರೆ. ಪಠ್ಯಪುಸ್ತಕಗಳ ಜೊತೆಗೆ ಇತರೆ ಪುಸ್ತಕಗಳನ್ನು ಓದುವುದು ಎಂದರೆ ಅವರಿಗೆ ಎಲ್ಲಿಲ್ಲದ ಸಂತೋಷ. ಅದರಲ್ಲೂ ವಿಶೇಷವಾಗಿ ಕನ್ನಡ ಸಾಹಿತ್ಯದ ಪುಸ್ತಕಗಳನ್ನು, ವಿಮರ್ಶಾ ಕೃತಿಗಳನ್ನು ಓದಲು ಅವರು ಆರಂಭಿಸಿದ ಕಾಲಘಟ್ಟದಲ್ಲಿ ಬೇಕಾದಕಡೆ ಬೇಕಾದ ಸಂದರ್ಭಗಳಲ್ಲಿ ಪುಸ್ತಕಗಳು ಕೈಗೆಟಕುತ್ತಿರಲಿಲ್ಲ. ಆದರೂ ಓದಿನ ಹಸಿವು ಅವರಿಗೆ ಪುಸ್ತಕಗಳಿರುವ ಕಡೆಗೆ ಸೆಳೆಯುತ್ತಿತ್ತು. ತರುಣ ಮನಸ್ಸಿನ ಮೇಲೆ ಈ ಪುಸ್ತಕಗಳ ಓದು ಬೀರಿದ ಪರಿಣಾಮ ಅವರ ಬಾಳಿನ ಗತಿಯನ್ನೇ ಬದಲಿಸಿದವು. ನಂತರ ಗದುಗಿನ ಪಂಡಿತ ಪುಟ್ಟರಾಜ ಗವಾಯಿಗಳ

ಹತ್ತಿರ ಸಂಗೀತ ವಿದ್ವಾನ್ ಗ್ರೇಡ್ ಪಾಸಾದರು. ಈ ಮೂಲಕ ಸಂಗೀತದ ಕಡೆಗೆ ಅವರ ಮನಸ್ಸು ಹೊರಳಿತು. ನಂತರ ಇವರ ದೊಡ್ಡಮ್ಮನ ಮಗ ಪ್ರೌಢ ಶಿಕ್ಷಣ ಮುಗಿಸಿ ಕಾಲೇಜಿಗೆ ಪ್ರವೇಶ ಪಡೆದರು. ಆದರೆ ಶಿವಸ್ವಾಮಿಯುವರಿಗೆ ದೃಷ್ಟಿದೋಷ ಕಾಣಿಸಿಕೊಂಡ ಕಾರಣ ಅನುತ್ತೀರ್ಣರಾಗಿ ಹಿಂದುಳಿಯಬೇಕಾಯಿತು. ಇವರು ೫ ಮತ್ತು ೬ನೇ ತರಗತಿಯಲ್ಲಿ ಓದುತ್ತಿದ್ದಾಗ ಪಠ್ಯಪುಸ್ತಕದಲ್ಲಿದ್ದ ಮಹಾತ್ಮ ಬುದ್ಧ ಮತ್ತು ಮಹಾವೀರರ ತಪಸ್ಸು ಮಾಡಿದ ಶಿಲಾವಿಗ್ರಹದ ಭಾವಚಿತ್ರ ನೋಡಿ ಅದರಿಂದ ತುಂಬಾ ಪ್ರಭಾವಿತರಾಗಿದ್ದರಂತೆ. ಆ ಪಾಠಗಳು ಅವರಲ್ಲಿ ಸತ್ಯ ಅಹಿಂಸೆಗಳಂತಹ ಮೌಲ್ಯಗಳ ಬಗೆಗೆ ಹೆಚ್ಚಿನ ಒಲವನ್ನು ಹುಟ್ಟುಹಾಕಿದವು. ಅವರ ಪೂರ್ವಾಶ್ರಯ ಹಾಲಮತವಾಗಿದ್ದರೂ ಶಾಲೆಯಲ್ಲಿ ಅವರನ್ನು ಹೊರತುಪಡಿಸಿದರೆ ಉಳಿದವರಲ್ಲಿ ಬಹುತೇಕ ಜನ ಮಾಂಸಹಾರಿಗಳಾಗಿದ್ದರು. 'ನನ್ನ ಇಂದಿನ ಅಹಿಂಸಾ ಮನೋಧರ್ಮಕ್ಕೆ ಬುದ್ಧ ಮಹಾವೀರರ ಅಹಿಂಸಾ ವಾದವು ಪೂರಕವಾಗಿ ನಿಂತುಕೊಂಡಿದೆ ಎಂಬುದನ್ನು ನಾನು ನಿಷ್ಕಲ್ಮಶ ಮನಸ್ಸಿನಿಂದ ಈಗಲೂ ಒಪ್ಪಿಕೊಳ್ಳುತ್ತೇನೆ' ಎನ್ನುತ್ತಾರೆ ಶಿವಸ್ವಾಮಿಯವರು.

ಹೈಸ್ಕೂಲು ಓದುವಾಗ ಅವರಿಗೆ ಕ್ರಮೇಣ ದೃಷ್ಟಿದೋಷ ಪ್ರಾರಂಭವಾಗಿತ್ತು. ಅವರ ತಾಯಿ ಅವರಿಗೆ ಹುಟ್ಟಿನಿಂದಲೂ ಇರುಳುಗಣ್ಣಿನ ದೋಷವಿತ್ತೆಂದು ಹೇಳುತ್ತಾರೆ. ಆದರೆ ಅವರು ಸಾಮಾನ್ಯ ವಿದ್ಯಾರ್ಥಿಗಳಂತೆ ೧ನೇ ತರಗತಿಯಿಂದ ಏಳೆಂಟು ತರಗತಿಯವರೆಗೆ ಸೀಮೆ ಎಣ್ಣೆಯ ಬುಟ್ಟಿ ದೀಪದ ಬೆಳಕಿನಲ್ಲಿ ಓದುವುದು, ಬರೆಯುವುದನ್ನು ಮಾಡಿದ್ದಾರೆ. ಎಲ್ಲವೂ ಸಹಜವಾಗಿಯೇ ಇದ್ದ ಸಂದರ್ಭದಲ್ಲಿ ಇದ್ದಕ್ಕಿದ್ದಂತೆ ನರದೌರ್ಬಲ್ಯ ಉಂಟಾಗಿ ಕಣ್ಣುಗಳು ನಿಧಾನವಾಗಿ ತನ್ನ ದೃಷ್ಟಿಯನ್ನು ಕಳೆದುಕೊಳ್ಳಲಾರಂಭಿಸಿದವು. ಅವರಿಗೆ ೧೭-೧೮ ವಯಸ್ಸಾಗಿರಬೇಕು. ಆಗ ಸಂಪೂರ್ಣವಾಗಿ ಓದಲು ಬರೆಯಲು ಬಾರದಂತಾಯಿತು. ಇದ್ದೊಬ್ಬ ಮಗನ ಕಣ್ಣುಗಳಿಗಾದ ತೊಂದರೆಯ ಪರಿಹಾರಕ್ಕಾಗಿ ಅವರ ತಂದೆ

ತಾಯಿಗಳು ಪಡಬಾರದ ಕಷ್ಟಗಳನ್ನು ಪಟ್ಟರು. ಅದನ್ನು ಗುಣಪಡಿಸಲೆಂದು ನಾಲ್ಕೈದು ವರ್ಷಗಳವರೆಗೆ ಹತ್ತಾರು ದೊಡ್ಡ ದೊಡ್ಡ ಆಸ್ಪತ್ರೆಗಳಿಗೆ ಮಗನನ್ನು ಕರೆದುಕೊಂಡು ಬರಿಗಾಲ ಫಕೀರರಂತೆ ಓಡಾಡಿದರು. ಆದರೂ ಯಾವ ಪ್ರಯೋಜನವೂ ಆಗಲಿಲ್ಲ. ಜಗತ್ಪ್ರಸಿದ್ಧ ನೇತ್ರ ತಜ್ಞ ದಾವಣಗೆರೆಯ ಎಂ.ಸಿ ಮೋದಿಯವರ ಹತ್ತಿರವೂ ದೃಷ್ಟಿದೋಷ ಪರೀಕ್ಷೆ ಮಾಡಿಸಿದರು. ಆದರೆ ಫಲ ಮಾತ್ರ ನಿರೀಕ್ಷಿತ. ಇದು ನರದೌರ್ಬಲ್ಯ. ಇದಕ್ಕೆ ಇದುವರೆಗೂ ಯಾವ ಚಿಕಿತ್ಸೆಯು ವೈದ್ಯಲೋಕ ಕಂಡುಕೊಂಡಿಲ್ಲ. ಹಾಗಾಗಿ ನಿಮ್ಮ ಮಗನ ಕಣ್ಣುದೋಷಕ್ಕೆ ಏನೂ ಮಾಡಲಾಗುವುದಿಲ್ಲ ಎಂದು ವೈದ್ಯರು ತಿಳಿಸಿದ ದಿನ ಅವರಿಗೆ ತುಂಬಾ ನಿರಾಶೆಯಾಗಿತ್ತು. ಸಾಹಿತ್ಯ ಕ್ಷೇತ್ರದಲ್ಲಿ ದೊಡ್ಡದನ್ನು ಸಾಧಿಸಬೇಕೆಂಬ ಅವರ ಕನಸು ಮಾತ್ರ ಕನಸಾಗಿಯೇ ಉಳಿಯುತ್ತದೆ ಎಂಬ ದುಗುಡ ಕಾಡಿತು.

'ಆ ಸಂದರ್ಭದ ಕೆಲ ದಿನಗಳು ನಾನು ನನ್ನೊಳಗೆ ಕೊರಗಿ ಕೊರಗಿ ಸಾಕ್ಷಾತ್ ನರಕಯಾತನೆ ಅನುಭವಿಸಿದ್ದೇನೆ. ಸ್ವಲ್ಪವಾದರೂ ಸರಿ ದೃಷ್ಟಿ ಉಳಿದುಕೊಂಡರೆ ಓದಲು ಬರೆಯಲು ಅನುವಾದರೆ ಸಾಕೆಂದುಕೊಂಡಿದ್ದೆ. ಅದು ಕೂಡ ಕೈಗೂಡದೇ ಇದ್ದಾಗ ಮುಂದಿನ ಬದುಕು ತೀರಾ ದುಸ್ತರವಾದುದೆಂದು ನೆನೆಪಿಸಿಕೊಂಡು ದುಃಖಿಸುತ್ತಿದ್ದೆ. ಭವಿಷ್ಯದ ಬಗ್ಗೆ ಭಯಪಟ್ಟಿದ್ದೆ. ಆದರೆ ಹೃದಯಾಂತರಳದಲ್ಲಿದ್ದ ಯಾವುದೋ ಒಂದು ಆಶಾಕಿರಣ ನನ್ನನ್ನು ವಿಚಲಿತಗೊಳ್ಳದಂತೆ ತಡೆಯಿತು. ಅಷ್ಟು ಸುಲಭವಾಗಿ ಜೀವನದಲ್ಲಿ ಸೋಲೊಪ್ಪಿಕೊಳ್ಳದಂತೆ ಪ್ರಚೋದನೆ ನೀಡಿತು' ಎಂಬ ಅವರ ಮಾತುಗಳು ಇಂದಿನ ನಿರಾಶಾದಾಯಕ ಯುವ ಪೀಳಿಗೆಗೆ ಆಶಾದಾಯಕ ಕಿರಣಗಳಾಗಿ ಎದುರಾಗುತ್ತವೆ. ಆಧುನಿಕವಾಗಿ ಇಷ್ಟೆಲ್ಲಾ ಸೌಲತ್ತುಗಳು ಇರಲಾಗಿಯೂ ಕೂಡ ಸಣ್ಣಪುಟ್ಟ ಸಮಸ್ಯೆಗಳಿಗೆ, ಬೇಡಿಕೆಗಳಿಗೆ ಹತಾಶರಾಗಿ ಸಾಯುವ ನಿರ್ಧಾರ ಕೈಗೊಳ್ಳುವವರಿಗೆ ಶಿವಸ್ವಾಮಿಯವರ ಬದುಕು ಮತ್ತು ಹೋರಾಟದ ಹಾದಿ ಪ್ರೇರಣಾದಾಯಕ ಕತೆ ಎನಿಸುತ್ತದೆ.

ದೃಷ್ಟಿದೋಷದಿಂದಾಗಿ ಪೆನ್ನಿನಿಂದ ಬರೆದ ಅಕ್ಷರಗಳು ಕಾಣದಿದ್ದಾಗ ಸ್ಕೆಚ್ ಪೆನ್ನಿನಿಂದ ದಪ್ಪದಪ್ಪವಾಗಿ ಬರೆಯಲು ಪ್ರಾರಂಭಿಸಿದರು. ಆಗೆಲ್ಲ ಒಂದಿಷ್ಟು ಹೊಸ ಉತ್ಸಾಹ ಮನದ ಮೂಲೆಯಲ್ಲಿ ಇಣುಕುತ್ತಿತ್ತು. ಕೊನೆಗೆ ಕೆಲ ತಿಂಗಳ ಮಟ್ಟಿಗೆ ಈ ರೀತಿ ಬರೆದು ಸಮಾಧಾನಪಟ್ಟುಕೊಂಡರಂತೆ. ಅದಾದ ಕೆಲವು ತಿಂಗಳ ನಂತರ ಆ ದಪ್ಪ ಅಕ್ಷರಗಳು ಸಹ ಕಾಣದಾದವು. ದೃಷ್ಟಿ ಮುಂದೆ ಸಂಪೂರ್ಣವಾಗಿ ಕರಗುತ್ತಾ ಹೋಯಿತು. ಕಣ್ಣಮುಂದೆ ಕತ್ತಲೆಯೇ ಆವರಿಸಿದಾಗ ಜೀವನದಲ್ಲಿ ಕ್ರಮಿಸಬೇಕಾದ ಬಹುದೂರದ ದಾರಿ ನಡೆಯಲು ಅನಿವಾರ್ಯವಾಗಿ ಪರಾವಲಂಬನೆಗೆ ಒಳಗಾಗಬೇಕಾಯಿತು ಎನ್ನುತ್ತಾರೆ.

ಬಾಲ್ಯದಿಂದಲೂ ಇವರಲ್ಲಿ ಓದಿನ ಹಸಿವು ಹೆಚ್ಚಿದ್ದ ಕಾರಣ ದೃಷ್ಟಿ ಮಾಸುವ ಮೊದಲೇ ಹಲವಾರು ಪುಸ್ತಕಗಳನ್ನು ಓದಿದ್ದರು. ಮುಂದೆ ಹೀಗಾಗಬಹುದೇನೋ ಎಂಬ ಕಾಲಜ್ಞಾನ ತಿಳಿದವರಂತೆ. ಅವರ ಕಣ್ಣುಗಳು ಸ್ವಲ್ಪ ಸ್ವಲ್ಪ ಮಂಜಾಗುತ್ತಿರುವ ದಿನಗಳಲ್ಲಿ ಒಮ್ಮೆ ಧುಮ್ಮಸೂರಿನಲ್ಲಿರುವಾಗ ಒಂದು ದಿನ ರಾತ್ರಿ, ತರಗತಿಗೆ ಪೂರಕ ಪಠ್ಯಪುಸ್ತಕವಾಗಿದ್ದ 'ಸಾಧನೆಯ ಹಾದಿಯಲ್ಲಿ' ಎಂಬ ಪುಸ್ತಕವನ್ನು ಒಂದೇ ರಾತ್ರಿಯಲ್ಲಿ ಓದಿ ಮುಗಿಸಬೇಂಕೆಂಬ ಸಂಕಲ್ಪದಿಂದ ದೊಡ್ಡಮ್ಮನ ಮಗಳಿಗೆ ಮಲಗುವಾಗ ಹೊರಗೆ ಪಡಸಾಲೆಯಲ್ಲಿ ಒಂದು ತಂಬಿಗೆ ನೀರಿಡಲು ತಿಳಿಸಿದರಂತೆ. ಏಕೆಂದರೆ ನಡುರಾತ್ರಿ ನಿದ್ರೆ ಬಂದರೆ ಮುಖ ತೊಳೆದುಕೊಂಡು ಮತ್ತೆ ಓದಬೇಕೆಂಬ ಕಾರಣಕ್ಕಾಗಿ. ಅವಳು ದೊಡ್ಡಮ್ಮನ ಮಗಳೊಂದಿಗೆ, ಸೋದರ ಮಾವನ ಹೆಂಡತಿಯೂ ಹೌದು. ಎಲ್ಲರೂ ಮಲಗಿಕೊಂಡ ಮೇಲೆ ಇವರು ರಾತ್ರಿ ಹತ್ತುವರೆ ಸುಮಾರಿಗೆ ಓದಲು ಕುಳಿತುಕೊಂಡರಂತೆ. ನಿರಂತರವಾಗಿ ಮೂರು ತಾಸುಗಳ ಕಾಲ ಓದಿದ ನಂತರ ಕಣ್ಣುಗಳು ಬೇಸರಿಸತೊಡಗಿದವು. ಗೊತ್ತಿಲ್ಲದಂತೆ ದೇಹ ನಿದ್ರೆಗೆ ಜಾರಲು ಪ್ರಯತ್ನಿಸುತಿತ್ತು. ಎದ್ದು ಹೊರಗಡೆ ಬಂದು ಪಡಸಾಲೆಯಲ್ಲಿದ್ದ ತಂಬಿಗೆಯನ್ನೆತ್ತಿಕೊಂಡು ತುದಿಗಟ್ಟಿಗೆ ಬಂದು ಮುಖ ತೊಳೆದರಂತೆ.

ಎರಡು ಮೂರು ನಿಮಿಷಗಳ ಕಾಲ ಕಣ್ಣುಗಳನ್ನು ಉಜ್ಜಿಕೊಂಡಾಗ ತುಂಬಾ ವಿಚಿತ್ರವಾದ ಅನುಭವವನ್ನು ಅವರು ಅನುಭವಿಸಿದರು. 'ನಾನೆಂದು ಹಾಗೆ ಅನುಭವವನ್ನು ಅನುಭವಿಸಿದವನಲ್ಲ. ಓದಲು ಬಂದು ಕುಳಿತುಕೊಂಡಾಗ ಕೈ ಮುಖ ಎಲ್ಲವೂ ಬಿಗಿಬಿಗಿಯಾಗಿತ್ತು. ಸೊಳ್ಳೆಗಳು ಕಣ್ಣುಗಳ ಮುಂದೆ ಓಡಾಡಹತ್ತಿದವು. ಓದಲು ಮನಸ್ಸಾಗುತ್ತಿಲ್ಲ. ಏನಾಗುತ್ತಿದೆ ಎಂಬುದೇ ಅರ್ಥವಾಗಲಿಲ್ಲ. ಆ ದಿನ ಓದುವುದು ಬೇಡವೆಂದು ನಿರ್ಧರಿಸಿ ಟವೆಲ್‌ನಿಂದ ಮತ್ತೊಮ್ಮೆ ಕೈ ಮುಖವನ್ನೆಲ್ಲಾ ಒರೆಸಿಕೊಂಡು ಮಲಗಿದ್ದೆ' ಎಂದು ಆ ದಿನದ ಚಡಪಡಿಕೆಯನ್ನು ವಿವರಿಸುತ್ತಾರೆ. ಬೆಳಗ್ಗೆ ಅಕ್ಕ ಹಾಲಿನ ತಂಬಿಗೆ ಹುಡುಕತೊಡಗಿದಳು. ಪಡಸಾಲೆಯ ಕಟ್ಟೆಯ ಕೆಳಗೆ ಎಲ್ಲಾ ಹಾಲು ಚೆಲ್ಲಿ ಖಾಲಿಯಾಗಿತ್ತು. ಆಕೆ ಮಾಡಿದ ಒಂದು ತಪ್ಪು ಎಂದರೆ ಹಿಂದಿನ ದಿನದ ರಾತ್ರಿ ನನಗೆ ಅಂಥ ಇಡಲು ಹೇಳಿದ್ದ ನೀರಿನ ತಂಬಿಗೆ ಬದಲು ಹಾಲಿನ ತಂಬಿಗೆ ಇಟ್ಟಿದ್ದಳು. ಆ ಪ್ರಸಂಗ ಮನೆಮಂದಿಗೆಲ್ಲಾ ನಗು ತರಿಸಿತು. ಅದು ಹಾಲಿನ ಬಿಂದಿಗೆ ಎಂಬುದನ್ನು ಅವರು ಗಮನಿಸಿರಲಿಲ್ಲ. ಇವರಿಗದು ಹಾಲಿನ ಬಿಂದಿಗೆ ಎಂಬುದು ತಿಳಿಯಲಿಲ್ಲ. ಹಾಲ ಮೂಲಕ ಕಣ್ಣ ದೃಷ್ಟಿ ತೊಳೆದುಕೊಂಡರೇನೋ ಎಂಬಂತೆ ಅದು ಮುಂದಾಗಬಹುದಾದ ಅವರ ಜೀವನದ ಕತ್ತಲ ದಿನಗಳ ಸಂಕೇತವಾಗಿತ್ತೋ ಏನೋ ಯಾರಿಗೆ ಗೊತ್ತು.

೧೯೮೦-೯೦ರ ದಶಕದಲ್ಲಿ ನಮ್ಮ ಹಳ್ಳಿಗಾಡಿನ ಶಾಲೆಗಳೆಲ್ಲ ಏಕೋಪಾಧ್ಯಾಯರ ಶಾಲೆಗಳಾಗಿದ್ದವು. ಹಾಗೆಯೇ ಚೀನಕೇರಾ ಗ್ರಾಮದ ಶಾಲೆಯೂ ಕೂಡ ಶಿವಸ್ವಾಮಿಯವರು ಓದುತ್ತಿದ್ದ ಸಂದರ್ಭದಲ್ಲಿ ಏಕೋಪಾಧ್ಯಾಯ ಶಾಲೆಯಾಗಿತ್ತು. ಅವರಾಗ ನಾಲ್ಕನೇ ತರಗತಿಯಲ್ಲಿ ಓದುತ್ತಿದ್ದರು. ಶಾಲೆಯಲ್ಲಿ ಎಲ್ಲಕ್ಕಿಂತಲೂ ದೊಡ್ಡ ತರಗತಿ ಇವರದಾಗಿತ್ತು. ಶಾಲೆಯ ಯಾವುದೇ ಚಟುವಟಿಕೆಗಳಿರಲಿ ಕಾರ್ಯಕ್ರಮಗಳಿರಲೀ ರೇವಣ್ಣಸಿದ್ಧಪ್ಪ ಎಂಬ ಶಿಕ್ಷಕರು ಇವರನ್ನು ತೊಡಗಿಸಿಕೊಳ್ಳದೆ ಮುಂದುವರೆಯುತ್ತಿರಲಿಲ್ಲ. ಅಲ್ಲಿ ಇವರಿಗೊಂದು ಜವಾಬ್ದಾರಿ ತಪ್ಪದೇ

ವಹಿಸುತ್ತಿದ್ದರು. ಅಷ್ಟೇ ಅಲ್ಲದೇ ಸೋಮು ಮತ್ತು ರಮೇಶ ಎಂಬ ಸ್ನೇಹಿತರು ಪ್ರತಿದಿನ ಮಕ್ಕಳಿಗೆ ಉಪ್ಪಿಟ್ಟು ತಯಾರಿಸುವ ಕಾರ್ಯದಲ್ಲಿ ಇವರೊಂದಿಗೆ ಸಹಕರಿಸುತ್ತಿದ್ದರು. ಮನೆಯಲ್ಲಿ ಏನೂ ಅಡುಗೆ ಮಾಡಲು ಬಾರದಿದ್ದರೂ ಕೂಡ ಶಾಲೆಯಲ್ಲಿ ಮಾತ್ರ ಇವರುಗಳು ತಯಾರಿಸಿದ ಉಪ್ಪಿಟ್ಟು ಮಾತ್ರ ತುಂಬಾ ಹಿತವಾಗಿರುತ್ತಿತ್ತಂತೆ. ಏಕೋಪಾಧ್ಯಾಯ ಶಾಲೆಗಳ ಪರಿಸ್ಥಿತಿಯ ಬಗ್ಗೆ ಶಿವಸ್ವಾಮಿಯವರು ಹೀಗೆ ಹೇಳುತ್ತಾರೆ. 'ಆ ದಿನಗಳಲ್ಲಿ ಈ ಶಾಲೆಯ ಯಾವ ವಿದ್ಯಾರ್ಥಿಗೂ ರಾಷ್ಟ್ರಗೀತೆ ಹಾಡುವುದು ಗೊತ್ತಿರಲಿಲ್ಲ. ಏಕೆಂದರೆ ಹುಮಾನಾಬಾದಿನಿಂದ ಶಿಕ್ಷಕರು ಬಂದೊಡನೆ ತರಗತಿಗಳು ನೇರವಾಗಿ ಪ್ರಾರಂಭವಾಗುತ್ತಿದ್ದವು. ಧುಮ್ಮನಸೂರಿನಲ್ಲಿ ೩ನೇ ತರಗತಿಯವರೆಗೆ ನಾನು ಓದಿದ್ದೆ. ಅಲ್ಲಿ ಮಾತ್ರ ರಾಷ್ಟ್ರಗೀತೆಯನ್ನು ತಪ್ಪದೆ ಹಾಡಿಸುತ್ತಿದ್ದರು. ಒಂದೆರಡು ಸಲ ನಾನು ಎಲ್ಲಾ ವಿದ್ಯಾರ್ಥಿಗಳಿಗೆ ರಾಷ್ಟ್ರಗೀತೆ ಹಾಡಿಸುವಂತೆ ಶಿಕ್ಷಕರಲ್ಲಿ ಕೇಳಿಕೊಂಡಾಗ ಅದು ಸಮಯಕ್ಕೆ ಸರಿಯಾಗಿ ಹಾಡಿಸುವಂತಿತ್ತು. ನಾವು ತಡವಾಗಿ ಶಾಲೆಗೆ ಬರುವುದರಿಂದ ಅದು ಹಾಡಿಸಲಾಗುತ್ತಿಲ್ಲವೆಂದು ಶಿಕ್ಷಕರು ಹೇಳಿದ್ದರು'. ಹಾಗಾಗಿ ಅವರು ಹೈಸ್ಕೂಲ್ ಬಂದ ನಂತರವೇ ರಾಷ್ಟ್ರಗೀತೆಯ ಅರ್ಥ ಮತ್ತು ಮಹತ್ವ ಗೊತ್ತಾಗಿದ್ದು. ಅಂದಿನ ಶಿಕ್ಷಕರು ಹೇಳಿಕೊಡುವ ಬೋಧನಾ ಪದ್ಧತಿ ಮಾತ್ರ ಯಾವಾತ್ತಿಗೂ ಮರೆಯದ ಪರಿಣಾಮಕಾರಿ ಬೋಧನೆಯಾಗಿತ್ತು. ಅವರ ಪಾಠ ಪ್ರವಚನಗಳು ನಮ್ಮ ಮನದಲ್ಲಿ ಎಂದೆಂದಿಗೂ ಅಚ್ಚಳಿಯಂದಂತೆ ಉಳಿದಿವೆ ಎನ್ನುತ್ತಾರೆ ಅವರು.

ಈ ನಡುವೆ ದೃಷ್ಟಿದೋಷದ ಕಾರಣದಿಂದಾಗಿ ಓದು ಸಂಪೂರ್ಣವಾಗಿ ನಿಂತು ಹೋಗಿತ್ತು. ಮುಂದಿನ ಭವಿಷ್ಯದ ಬಗ್ಗೆ ಅವರಲ್ಲಾಗಲಿ, ಅವರ ಮನೆಯವರಲ್ಲಾಗಲಿ ಯಾವ ದಾರಿಗಳು ಉಳಿದಿರಲಿಲ್ಲ. ಸರಿಹೊತ್ತಿಗೆ ತಾಳಿಕೋಟೆಯಿಂದ ಹುಮನಾಬಾದ್ ನಗರಕ್ಕೆ ೧೯೮೨ರಲ್ಲಿ ಸಂಗೀತ ಶಿಕ್ಷಕರಾಗಿ ಶ್ರೀ ಎ.ಎಸ್. ವಠಾರ ಅವರು ವರ್ಗಾವಣೆಯಾಗಿ ಬಂದಿದ್ದರು. ಇವರ ಆಗಮನ ಶಿವಸ್ವಾಮಿಯವರ

ಜೀವನಕ್ಕೆ ಮತ್ತೊಂದು ತಿರುವು ತಂದುಕೊಟ್ಟಿತು. ಅವರ ಪರಿಚಯಕ್ಕೆ ಬಂದ ಇವರ ಓದು ಮತ್ತು ಅಭಿರುಚಿಗಳನ್ನು ಗಮನಿಸಿದ ವಠಾರ ಸರ್ ಅವರು ಇವರಿಗೆ ಸಂಗೀತ ಅಭ್ಯಾಸಕ್ಕಾಗಿ ಶ್ರೀ ಉಜಿನೆಪ್ಪಾ ಗವಾಯಿಗಳೊಂದಿಗೆ ಗದುಗಿನ ವೀರಶೈವ ಪುಣ್ಯಾಶ್ರಮಕ್ಕೆ ಕಳಿಸಿಕೊಟ್ಟರು. ಅಲ್ಲಿ ಇವರಿಗೆ ಸಂಗೀತ ಅಭ್ಯಾಸ ಪ್ರಾರಂಭವಾಯಿತು. ಆದರೆ ಅಲ್ಲಿಗೆ ತೆರಳಿದ ಮೇಲೆ ಇವರ ಆರೋಗ್ಯ ಕೈಕೊಡಲು ಆರಂಭಿಸಿತು. ಹಾಗಾಗಿ ಹೆಚ್ಚು ದಿನಗಳ ಕಾಲ ಅಲ್ಲಿ ಉಳಿದುಕೊಂಡು ಸಂಗೀತಾಭ್ಯಾಸ ಮಾಡಲಾಗಲಿಲ್ಲ. ಕೇವಲ ೨ ವರ್ಷಗಳ ಕಾಲ ಮಾತ್ರ ಅಲ್ಲಿದ್ದು, ಸಂಗೀತ ಶಿಕ್ಷಣ ಪಡೆದರು. ನಂತರ ಅನಾರೋಗ್ಯದ ಕಾರಣ ಮಧ್ಯೆದಲ್ಲಿಯೇ ಸ್ವಗ್ರಾಮಕ್ಕೆ ಬಂದು ಹುಮನಾಬಾದಿನಲ್ಲಿ ನೆಲೆಸಿದ್ದ ಶ್ರೀ ವಠಾರ ಸರ್ ಅವರ ಹತ್ತಿರವೇ ತಮ್ಮ ಮುಂದಿನ ಸಂಗೀತಾಭ್ಯಾಸವನ್ನು ಮುಂದುವರೆಸಿದರು. ಇವರ ಬಳಿಯೇ ಹಿಂದೂಸ್ಥಾನಿ ವಿದ್ವತ್ ಗ್ರೇಡ್ ಪಾಸಾಗುವವರೆಗೂ ಕಲಿತರು. ಈಗ ಅದುವೇ ಶಿವಸ್ವಾಮಿ ಅವರ ಜೀವನದ ಮೂಲಾಧಾರವಾಗಿ ಉಳಿದುಕೊಂಡು ಬಂದಿದೆ. ಕೊನೆಗೆ ಸಂಗೀತವೇ ಅವರ ಕೈ ಹಿಡಿಯಿತು. ಈಗ ಅವರು ಸರ್ಕಾರಿ ಪ್ರೌಢ ಶಾಲೆ ಮನ್ನಾಎಖೇಳಿಯಲ್ಲಿ ಸಂಗೀತ ಶಿಕ್ಷಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಅಂದಿನ ಇವರ ನೆಚ್ಚಿನ ಸ್ನೇಹಿತನೆಂದರೆ ಸೋಮು ಕುಲಕರ್ಣಿ. ರಜಾ ದಿನಗಳಲ್ಲಿ ಅವನೇ ಇವರ ಸಂಗಾತಿ. ಹಸಿವಾದಾಗ ಮಾತ್ರ ಊಟಕ್ಕೆ ಇವರು ತಮ್ಮ ಮನೆಗೆ ಬರುತ್ತಿದ್ದದ್ದನ್ನು ಬಿಟ್ಟರೆ ಉಳಿದೆಲ್ಲಾ ಹೊತ್ತು ಅವರ ಮನೆಯಲ್ಲಿ ಕಳೆಯುತ್ತಿದ್ದರಂತೆ. ವಯಸ್ಸಾದ ಅವರ ಅಜ್ಜಿಯೊಬ್ಬರು ಇವರಿಗೆ ರಾಮಾಯಣ, ಮಹಾಭಾರತ ಕಥೆಗಳನ್ನು ಹೇಳುತ್ತಿದ್ದರು. ಅವರ ಮನೆಯ ಎಲ್ಲಾ ಸದಸ್ಯರು ಇವರನ್ನು ತುಂಬಾ ಅಕ್ಕರೆಯಿಂದ ಕಾಣುತ್ತಿದ್ದರು. ಇವರಿಗೆ ಒಮ್ಮೊಮ್ಮೆ ಭಕ್ರಾ ತವಿ, ಅನ್ನ ಹುಳಿ ಊಟಕ್ಕೆ ಕೊಡುತ್ತಿದ್ದರು. ಆದರೆ ಅದೆಲ್ಲಾ ಮಾಡುವುದು ನಾವುಗಳು ಮಾತ್ರ, ಹಾಗಾಗಿ ಉಳಿದವರಿಗಿಂತ ಬ್ರಾಹ್ಮಣರು ಶ್ರೇಷ್ಠರೆಂಬ ಭಾವನೆ

ಇವರ ಮುಂದೆ ವ್ಯಕ್ತಗೊಳಿಸುತ್ತಿದ್ದರು. ಅವರ ಮಗನ ಸ್ನೇಹಿತನಾಗಿದ್ದರು ಕೂಡ ಇವರಿಗೆ ಅವರ ಮಗನೊಂದಿಗೆ ಊಟ ಕೊಡುತ್ತಿರಲಿಲ್ಲ. ಅಂದರೆ ಇವರಿಗೆ ಒಂದು ಕಡೆ ಕೂಡಿಸಿ ಊಟ ಬಡಿಸಿದರೆ, ಅವರ ಮಗನಿಗೆ ಒಂದು ಕಡೆ ಕೂಡಿಸಿ ಪ್ರತ್ಯೇಕವಾಗಿ ಊಟಕ್ಕೆ ಕೊಡುತ್ತಿದ್ದರು. ಊಟ ಮುಗಿದ ಬಳಿಕ ಉಂಡ ತಟ್ಟೆ ಲೋಟಗಳೆಲ್ಲಾ ತೊಳೆದು ಚೆಲ್ಲುವಂತೆ ಹೇಳುತ್ತಿದ್ದರು. ಆಗಾಗ ಅವರ ಮನೆಯಲ್ಲಿ ಊಟ ಮಾಡಿ ಇವರಿಗೆ ಅದು ಅಭ್ಯಾಸವಾಗಿ ಬಿಟ್ಟಿತ್ತು. ಆದರೆ ಅವರ ಮನೆಯಲ್ಲಿ ಒಂದು ತಿಳಿಯದ ಒಗಟಾಗಿ ಇವರಿಗೆ ಕಾಡಿದ್ದು ಮತ್ತು ಮನಸ್ಸಿಗೆ ನೋವುಂಟು ಮಾಡಿದ್ದು ಮಾತ್ರ ಬ್ರಾಹ್ಮಣರಲ್ಲಿ ಹೆಣ್ಣು ಮಕ್ಕಳಿಗೆ ಕೀಳಾಗಿ ಕಾಣುವ ಪರಿಪಾಠ. ಅವರನ್ನು ಎರಡನೆ ದರ್ಜೆಯ ಪ್ರಜೆಯಾಗಿ ನೋಡುತ್ತಿದ್ದರಂತೆ. ಈಗೆಲ್ಲ ಪರಿಸ್ಥಿತಿಗಳು ಒಂದಿಷ್ಟು ಸುಧಾರಿಸಿವೆ. ಮೊದಲೆಲ್ಲ ಬ್ರಾಹ್ಮಣರಷ್ಟೆ ಅಲ್ಲ ಹಳ್ಳಿಯ ಬಹುತೇಕ ಸಿರಿವಂತರ ಮನೆಯ ಹೆಣ್ಣುಮಕ್ಕಳು ಕೂಡ ಸ್ವತಂತ್ರವಾಗಿ ಬದುಕಿದ ಉದಾಹರಣೆಗಳು ಕಡಿಮೆಯೆ. ಹಾಗೆ ನೋಡಿದರೆ ಅಂದಿನ ಕೆಳವರ್ಗದ ಮಹಿಳೆಯರು ಮೇಲ್ವರ್ಗದ ಮಹಿಳೆಯರಿಗಿಂತ ಆರ್ಥಿಕವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಚಟುವಟಿಕೆಗಳಲ್ಲಿ ಹೆಚ್ಚೆಚ್ಚು ತೊಡಗಿಸಿಕೊಳ್ಳುತ್ತಿದ್ದರು. 'ಕೆಲವೊಮ್ಮೆ ಅಂಗಳದ ಕಟ್ಟೆಯ ಮೇಲೆ ಗೋಣಿಚೀಲವೊಂದನ್ನು ಹಾಕಿಕೊಂಡು ನಾಲ್ಕಾರು ದಿನ ಹೆಣ್ಣುಮಕ್ಕಳು ಉಳಿದವರಿಂದ ಪ್ರತ್ಯೇಕವಾಗಿರುತ್ತಿದ್ದರು. ಅವರ ಊಟೋಪಚಾರ ಮತ್ತು ಮಲಗುವುದೆಲ್ಲವೂ ಇತರರಿಂದ ಬೇರ್ಪಡಿಸಿದಂತೆ ಇರುತ್ತಿತ್ತು. ಇದು ಏನು? ಏಕೆ ಹೀಗೆ ಎಂಬ ಪ್ರಶ್ನೆ ನನಗೆ ಬಹಳ ದಿನ ಕಾಡಿದ್ದುಂಟು' ಎನ್ನುತ್ತಾರೆ ಶಿವಸ್ವಾಮಿಯವರು. ಈ ಮಾದರಿಯ ಸಾಮಾಜಿಕ ನಡತೆ ಈಗಲೂ ನಮ್ಮ ಮಧ್ಯೆ ಜೀವಂತವಿದೆ. ಆಧುನಿಕವಾಗಿ ನಾವಿಂದು ಎಷ್ಟೇ ಬೆಳೆದರು ಕೂಡ ನಮ್ಮ ಸಮುದಾಯಗಳು ಹಳೆಯ ಒಂದಿಷ್ಟು ನಂಬಿಕೆಗಳನ್ನು ಬದಲಾಯಿಸಿಕೊಳ್ಳುವಲ್ಲಿ ಹಿಂದೇಟು ಹಾಕುತ್ತಿರುವುದನ್ನು ನಾವು ಗಮನಿಸಬಹುದು. 'ಮಂಗಳ ಗ್ರಹಕ್ಕೆ ಕಾಲಿಟ್ಟರೂ ಅಂಗಳದ

ಯೌಢ್ಯಕ್ಕೆ ಕೊನೆಯಿಲ್ಲ' ಎಂಬಂತಾಗಿದೆ ಪರಿಸ್ಥಿತಿ. ಅದರಲ್ಲಿ ಪುರುಷರಿಗೆ ಯಾತ್ರ ಶೀಲ, ಮಡಿವಂತಿಕೆಗಳನ್ನೆಲ್ಲಾ ಗುತ್ತಿಗೆ ಕೊಟ್ಟಂತಿದೆ. ಪ್ರಾಯಶಃ ೯ ಜನಾಂಗದಲ್ಲಿ ಆ ಕಾಲದ ಹೆಣ್ಣುಮಕ್ಕಳಿಗೆ ಅದೊಂದು ಅಭಿಶಾಪವಾಗಿ ಾಡಿದಂತೆ ತೋರುತ್ತದೆ.

ಉದ್ಯೋಗ.

ಶಿವಸ್ವಾಮಿಯವರು ಮೂಲತಃ ಸಂಗೀತ ಶಿಕ್ಷಕರು. ಸರ್ಕಾರಿ ಉದ್ಯೋಗ ಸಿಗುವ ಪೂರ್ವದಲ್ಲಿ ಬೇರೆ ಬೇರೆ ಶಿಕ್ಷಣ ಸಂಸ್ಥೆಗಳಲ್ಲಿ ತಮ್ಮ ಅಮೂಲ್ಯವಾದ ಸೇವೆಯನ್ನು ಸಲ್ಲಿಸಿದ್ದಾರೆ. ೧೯೯೧ರಿಂದ ೧೯೯೫ರವರೆಗೆ ಚೀನಕೇರಾ ಗ್ರಾಮದ ಹತ್ತಿರವೇ ಬರುವ ಕನಕದಾಸ ಪ್ರೌಢ ಶಾಲೆ, ಸೆಡೋಳನಲ್ಲಿ, ೨೦೦೩ರಿಂದ ೨೦೦೫ರವರೆಗೆ ಬಸವತೀರ್ಥ ವಿದ್ಯಾಪೀಠ (ಬಿಟಿವಿಪಿ), ಹುಮನಾಬಾದನಲ್ಲಿ, ೨೦೦೫ರಿಂದ ೨೦೦೭ರವರೆಗೆ ನೆಹರೂ ಡಿಇಡಿ ಕಾಲೇಜು, ಚಿಟಗುಪ್ಪಾದಲ್ಲಿ, ೨೦೦೭ರಿಂದ ೨೦೧೦ರವರೆಗೆ ರಾಮ ಮತ್ತು ರಾಜ ಡಿಇಡಿ ಕಾಲೇಜು, ಹುಮನಾಬಾದನಲ್ಲಿ ಸಂಗೀತ ಶಿಕ್ಷಕರಾಗಿ ತಮ್ಮ ಅನುಪಮ ಸೇವೆಯನ್ನು ಸಲ್ಲಿಸಿದ್ದಾರೆ. ಮುಂದೆ ೨೦೧೦ರ ಜುಲೈ ೧೫ರಂದು ಮನ್ನಾಎಖೇಳಿಯ ಸರ್ಕಾರಿ ಪ್ರೌಢ ಶಾಲೆಯಲ್ಲಿ ಸಂಗೀತ ಶಿಕ್ಷಕರಾಗಿ ಸರ್ಕಾರಿ ಸೇವೆಗೆ ಸೇರುವ ಮೂಲಕ ಪ್ರಸ್ತುತ ಅಲ್ಲಿಯೇ ಕಾರ್ಯನಿರ್ವಹಿಸುತ್ತಿದ್ದಾರೆ. ಮನೆಯ ಕಷ್ಟದ ಪರಿಸ್ಥಿತಿಯನ್ನು ಶ್ರೀ ಬಸವರಾಜ ತಂಬಾಕೆಯವರಿಗೆ ತಿಳಿಸಿದಾಗ ತಮ್ಮ ಸಂಸ್ಥೆಯ ಪ್ರೌಢ ಶಾಲೆಯಲ್ಲಿ ಇವರಿಗೆ ಮಾಸಿಕ ೭೦೦ ರೂಪಾಯಿಯಂತೆ ಸಂಗೀತ ಶಿಕ್ಷಕ ವೃತ್ತಿ ಕೊಡಿಸಿದ್ದರು. ತಂಬಾಕೆಯವರು ಛಟ್ಟು ಹೋರಾಟಗಾರರು; ಮೇಲಾಗಿ ಬಸವ ತತ್ವನಿಷ್ಠರು.

ಊರಿನ ಸಾಂಸ್ಕೃತಿಕ ಪರಿಸರ.

ಚೀನಕೇರಾ ಗ್ರಾಮದಲ್ಲಿ ಪ್ರಾಚೀನ ಕಾಲದಿಂದಲೂ ಒಂದಿಷ್ಟು ಸ್ಥಳನಾಮಗಳು ಚರಿತ್ರೆಯ ವಿದ್ಯಾರ್ಥಿಯಾದ ನನಗೂ ಆಕರ್ಷಣೆಯ ಬಿಂದುಗಳಾಗಿದ್ದವು. ಅವುಗಳಲ್ಲಿ ಕೆಲವೊಂದು ಸ್ಥಳನಾಮಗಳ ಐತಿಹ್ಯಗಳನ್ನು ಇಲ್ಲಿ ಸಂಕ್ಷಿಪ್ತವಾಗಿ ವಿವರಿಸುವ ಪ್ರಯತ್ನ ಮಾಡಲಾಗಿದೆ. ಊರ ಸುತ್ತಮುತ್ತಲಿನ ಪರಿಸರದಲ್ಲಿ ಕುಂಬಾರ ಕುಂಟೆ, ಕೆರೆಮಳ, ದೊಡ್ಡಮಟ್ಟಿ, ಲಕ್ಕಮ್ಮನ ತಳಾರ, ಬಸವಣ್ಣನ ಗುತ್ತಿ (ಗುಡ್ಡ), ಗದ್ದಿ, ಭಾರಮ್ ಬಾವಿ, ಕಣಗಿಲು ಬಾವಿ, ಅಕ್ಕ-ತಂಗಿಯರ ಗುತ್ತಿ (ಗುಡ್ಡ), ಇನಾಮತಿ ಎಂಬ ಹೆಸರಿನ ಸ್ಥಳನಾಮಗಳು ಸಾಂಸ್ಕೃತಿಕವಾಗಿ ಮಹತ್ವದ್ದಾಗಿವೆ.

ಊರಿಗೆ ಹೊಂದಿಕೊಂಡಂತೆ ಕೆರೆಮಳ ಎಂಬ ಒಂದು ಸ್ಥಳವಿದೆ. ಸ್ಥಳೀಯ ಐತಿಹ್ಯದ ಪ್ರಕಾರ ಈ ಹಿಂದೆ ಅದೊಂದು ದೊಡ್ಡ ಕೆರೆಯಾಗಿತ್ತು. ಒಂದು ಅಂದಾಜಿನ ಪ್ರಕಾರ ನೂರು ಎಕರೆಯಷ್ಟು ವಿಶಾಲವಾದ ಪ್ರದೇಶದಲ್ಲಿ ಅದು ಹರಡಿಕೊಂಡಿರಬಹುದೆಂದು ಅನಿಸುತ್ತದೆ. ಅದಕ್ಕೆ ಪೂರ್ವಾಭಿಮುಖವಾಗಿ ಇಪ್ಪತ್ತೈದರಿಂದ ಮೂವತ್ತು ಅಡಿಯಷ್ಟು ಎತ್ತರ ಮತ್ತು ಒಂದು ಫರ್ಲಾಂಗಿಗಿಂತಲೂ ಉದ್ದವಾದ ಒಡ್ಡು ನಿರ್ಮಿಸಿರುವುದು ಈಗಲೂ ನೋಡಬಹುದು. ಆ ಕೆರೆ ನೀರಿನ ಸಾಮರ್ಥ್ಯಕ್ಕೆ ಅನುಗುಣವಾಗಿ ಒಡ್ಡು ನಿರ್ಮಿಸಿರುವುದು ತಿಳಿದು ಬರುತ್ತದೆ. ಯಾರೋ ಹಿಂದಿನವರು ಒಡ್ಡಿನ ಮಧ್ಯಭಾಗ ಸ್ವಲ್ಪ ಒಡೆದು ನೀರು ಹೋಗುವಂತೆ ಮಾಡಿದ್ದರಿಂದ ಕೆರೆಯ ನೀರು ಸಂಪೂರ್ಣವಾಗಿ ಖಾಲಿಯಾಗಿದೆ. ನಂತರ ಕಾಲ ಉರುಳಿದಂತೆ ಜನ ಅದನ್ನು ಕೃಷಿ ಭೂಮಿಯನ್ನಾಗಿ ಬಳಸಿಕೊಂಡಿದ್ದಾರೆ. ನಂತರ ಈಗಿನ ಅದರ ಮಾಲೀಕರು ಬೇರೆ ಊರಿನಿಂದ ಬಂದು ಅದನ್ನು ಖರೀದಿಸಿದರು ಎಂಬುದು ಪ್ರತೀತಿ. ಈಗ ಅದೆಲ್ಲವೂ ಹೊಲ-ಗದ್ದೆಯಾಗಿ ಮಾರ್ಪಟ್ಟಿದೆ. ಗ್ರಾಮಸ್ಥರೆಲ್ಲರೂ ಆ ಒಡ್ಡನ್ನು 'ತುಂಬು' ಎಂದು ಕರೆಯುತ್ತಾರೆ. ಒಡ್ಡಿನ ಪಕ್ಕದ ಸ್ಥಳವನ್ನು ಈಗ ಊರವರು ಕುಣಿಗೇರಿಯಾಗಿ ಬಳಸುತ್ತಾರೆ.

ಗ್ರಾಮದ ಉತ್ತರ ದಿಕ್ಕಿಗೆ 'ಭಾರವವ್ ಬಾಯಿ' ಎಂದು ಕರೆಯಿಸಿಕೊಳ್ಳುವ ಒಂದು ಪ್ರಾಚೀನ ಬಾವಿಯಿದೆ. 'ವಿ' ಎಂಬುದು ಆಡುಭಾಷೆಯಲ್ಲಿ 'ಯಿ' ಆಗಿ ಬಳಸಲ್ಪಡುತ್ತಿದೆ. ೭೦ ರಿಂದ ೮೦ ಅಡಿ ಸುತ್ತಳತೆಯ, ೪೦ ರಿಂದ ೫೦ ಅಡಿ ಆಳದ ಬಾವಿ ಎಂಬುದು ಗ್ರಾಮದ ಹಿರಿಯರ ಮಾತು. ಪ್ರಸ್ತುತವಾಗಿ ಆ ಪ್ರಮಾಣದಲ್ಲಿ ಅದು ಕಂಡು ಬರುವುದಿಲ್ಲ. ಮೊದಲೆಲ್ಲ ಅದು ಇಡಿ ಗ್ರಾಮಸ್ಥರಿಗೆ ಕುಡಿಯುವ ನೀರಿನ ಸಾಧನವಾಗಿ ಬಳಕೆಯಾಗುತ್ತಿತ್ತು. ಆಗೆಲ್ಲ ಮೇಲ್ವರ್ಗದವರು ಇದರಿಂದ ಕೊಡಪಾನಗಳಲ್ಲಿ ನೀರನ್ನು ಮೇಲೆ ತಂದು ದಲಿತರಿಗೆ ಬಳಸಲು ಕೊಡುತ್ತಿದ್ದರಂತೆ. ಅವರಾಗಿಯೇ ಬಾವಿಗಿಳಿದು ನೀರು ತರುವಂತಿರಲಿಲ್ಲ.

'ಚೀನಕೇರಾ' ಎಂಬುದು ಇತ್ತಿಚಿನ ಹೆಸರು. ಮೊದಲು ಇದಕ್ಕೆ 'ಒಡ್ಡರ ಹಟ್ಟಿ' ಎಂದು ಕರೆಯುತ್ತಿದ್ದರಂತೆ. ಚೀನಕೇರಾ, ಚಿನ್ನಪಟ್ಟಣ ಎಂಬುದು ಆನಂತರ ಬಂದ ಹೆಸರು. ಊರಲ್ಲಿ ವೃತ್ತಿಯಾಧಾರಿತ ಎಲ್ಲ ಕುಲಕಸುಬುಗಳ ಜನರಿದ್ದಾರೆ. ಒಮ್ಮೆ ಕಾಲರಾ ಬಂದು ಒಂದಿಷ್ಟು ಜನ ಉತ್ತರ ಪೂರ್ವಕ್ಕೆ ಹೋಗಿ ನೆಲೆಸಿದರಂತೆ. ಅದನ್ನೀಗ 'ವರವಟ್ಟಿ' ಗ್ರಾಮ ಎಂದು ಕರೆಯಲಾಗುತ್ತದೆ. ಒಂದಿಷ್ಟು ಜನ ಕಿ.ಮೀನಷ್ಟು ಹಿಂದಕ್ಕೆ ಬಂದು ನೆಲೆ ಕಂಡುಕೊಂಡರು. ಅದುವೇ ಮುಂದೆ ಚೀನಕೇರಾ ಎನಿಸಿಕೊಂಡಿತು. ಈ ಬಗ್ಗೆ ಚೀನಕೇರಾದ ಅನುಭಾವಿ ಕವಿಗಳಾಗಿದ್ದ ಶ್ರೀ ಮಾಣಿಕರಾವ್ ಕುಲಕರ್ಣಿಯವರು ಊರ ಬಗ್ಗೆ 'ಚೀನಕೇರಿ ಗುರುಸ್ಥಲ ಪುರದೋಳು ಐಶ್ವರ್ಯ ಕಂಡೇನು ಬಾಜರದಿ ಅದರಲಿ ನಲಿವೇನು ನಾ ಬಂದು ತೀರಿತು ಆಶಾ ಗುರುವೆ ಲಿಂಗೇಶ ಮುಖ್ಯ ಜಗದೀಶ' ಎಂದು ಬಣ್ಣಿಸುತ್ತಾರೆ.

ಸಾಹಿತ್ಯವನ್ನೋದಿ ಬರಹಗಾರನಾಗಬೇಕೆಂಬ ಶಿವಸ್ವಾಮಿ ಅವರ ಮಹದಾಸೆಗೆ ಕಣ್ಣಿನ ದೃಷ್ಟಿದೋಷ ದೊಡ್ಡ ತೊಡಕಾಯಿತು. ಹಾಗಾಗಿ ಓದು ಅರ್ಧಕ್ಕೆ ನಿಂತು ಹೋಯಿತು. ಹಾಗಂತ ಶಿವಸ್ವಾಮಿ ಅವರು ಹಣೆಬರಹಕ್ಕೆ ದೂಷಿಸಿಕೊಂಡು ಮನೆಯಲ್ಲಿ ಕುಳಿತುಕೊಂಡವರಲ್ಲ. ಇದ್ದ ಅವಕಾಶಗಳಲ್ಲಿಯೇ ಬೆಳೆದು ಬರಬೇಕೆಂಬ ಜೀವನೋತ್ಸಾಹವನ್ನು

ಹೊಂದಿದವರು. ಈ ಹೊತ್ತಲ್ಲಿ ಹುಮನಾಬಾದ್ ನಗರಕ್ಕೆ ಸಂಗೀತ ಶಿಕ್ಷಕರಾಗಿ ವಠಾರ ಸರ್ ಅವರ ಆಗಮನವಾಗುವುದು ದೈವೀಸಂಕಲ್ಪದಂತೆ ನಡೆಯುತ್ತದೆ. ಮುಂದೆ ಅವರ ಪರಿಚಯವಾಗುವುದು, ಅವರಿಂದಾಗಿ ಗದುಗಿನ ವೀರಶೈವ ಪುಣ್ಯಾಶ್ರಮಕ್ಕೆ ಸಂಗೀತ ಕಲಿಕೆಗಾಗಿ ತೆರಳುವುದು ಎಲ್ಲವೂ ಪೂರ್ವನಿರ್ಧಾರಿತ ಕ್ರಮಗಳಂತೆ ಘಟಿಸುತ್ತಾ ಹೋದವು. ಗದುಗಿನ ವಾತಾವರಣಕ್ಕೆ ಒಗ್ಗದ ಇವರ ದೇಹ ಅನಾರೋಗ್ಯಕ್ಕೀಡಾದಾಗ ಮರಳಿ ಊರಿಗೆ ಬಂದ ಸಂದರ್ಭದಲ್ಲಿ ಸಾಂಸ್ಕೃತಿಕವಾಗಿ ಹಳ್ಳಿ ಜನರೊಂದಿಗೆ ಮತ್ತಷ್ಟು ಬೆರೆಯುವ ಅವಕಾಶ ಇವರಿಗೆ ಲಭಿಸುತ್ತದೆ.

ಗದುಗಿನಿಂದ ಇವರು ಊರಿಗೆ ಬಂದಾಗ ಊರಲ್ಲಿ 'ಲವಕುಶ' ಎಂಬ ಪೌರಾಣಿಕ ಡಪ್ಪಿನಾಟದ ಅಭ್ಯಾಸ ನಡೆದಿತ್ತು. ಗ್ರಾಮದ ಪ್ರಮುಖರು ಆ ನಾಟಕದಲ್ಲಿ ಇವರಿಗೆ ಹಾರ್ಮೋನಿಯಂ ವಾದಕನಾಗಿ ಸಹಕಾರ ನೀಡಲು ಕೇಳಿಕೊಂಡರು. ಅದರಂತೆ ಸುಮಾರು ೨ ತಿಂಗಳುಗಳ ಕಾಲ ಅಭ್ಯಾಸ ನಡೆದು ಸಾರ್ವಜನಿಕವಾಗಿ ರಾತ್ರಿಯಿಡಿ ಅದನ್ನು ೨ ಬಾರಿ ಪ್ರದರ್ಶಿಸಲಾಯಿತು. ಇದು ಶಿವಸ್ವಾಮಿಯವರಿಗೆ ಊರಿನವರೊಂದಿಗೆ ಬೆರೆಯಲು ಹಾಗೂ ಡಪ್ಪಿನಾಟದ ತಾರಸಪ್ತಕದಲ್ಲಿ ಹಾಡುವ ಹಾಡುಗಳ ಪರಿಚಯ ಮಾಡಿತಲ್ಲದೆ, ಎಲ್ಲರಿಂದ ಮೆಚ್ಚುಗೆಗಳನ್ನು ಗೌರವಗಳನ್ನು ತಂದುಕೊಟ್ಟಿತು.

ಮುಂದೆ ಸ್ವತಃ ಶಿವಸ್ವಾಮಿಯವರೇ ನಾಟಕಗಳನ್ನು ಬರೆದು ಮಿತ್ರರೊಂದಿಗೆ ಸಾರ್ವಜನಿಕ ಪ್ರದರ್ಶನಗಳನ್ನು ನೀಡಲು ಇದು ಪ್ರೇರೇಪಿಸಿತು. ಹೀಗೆ ಅವರ ಕುಸುರಿಯಲ್ಲಿ 'ಮೋಳಿಗೆ ಮಾರಯ್ಯ' ಎಂಬ ನಾಟಕ ರಚನೆ ಕಂಡು, ಊರಲ್ಲಿ ಪ್ರದರ್ಶನಗೊಂಡ ಮೊದಲ ನಾಟಕವಾಗಿತ್ತು. ಮುಂದೆ ಒಬ್ಬ ಖಳನಾಯಕನ ಅವಾಂತರಗಳ ಕುರಿತಾದ ಒಂದು ನಾಟಕ, ಕಿನ್ನರಿ ಬೊಮ್ಮಯ್ಯ, ಅಕ್ಕ ಮಹಾದೇವಿ ಹಾಗೂ ಅಲ್ಲಮಪ್ರಭುಗಳ ಆಧ್ಯಾತ್ಮಿಕ ಔನಿತ್ಯವನ್ನೊಳಗೊಂಡ ಗಂಭೀರ ಸಂವಾದಗಳಿಂದ ಕೂಡಿದ ಕಿರು ನಾಟಕವೊಂದನ್ನು ಕೂಡ ರಚಿಸಿ ಊರಲ್ಲಿ

ಪ್ರದರ್ಶನ ಮಾಡಲಾಯಿತು. ಈ ಎಲ್ಲ ಪ್ರಯೋಗಗಳು ಜನಪ್ರಿಯವಾಗಿ ಯಶಸ್ವಿ ಪ್ರದರ್ಶನ ಕಂಡವು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೀದರ ವತಿಯಿಂದ ನಾಲ್ಕೈದು ಗ್ರಾಮಗಳಲ್ಲಿ ಇವರು ಕೀರ್ತನೆಗಳನ್ನು ಸಹ ನಡೆಸಿಕೊಟ್ಟಿದ್ದಾರೆ.

ಸುತ್ತಮುತ್ತಲಿನ ಗ್ರಾಮಗಳೊಂದಿಗೆ ಹೋಲಿಕೆ ಮಾಡಿ ನೋಡಿದಾಗ ಅವುಗಳಿಗಿಂತಲೂ ಚೀನಕೇರಾ ಸಾಂಸ್ಕೃತಿಕವಾಗಿ ಬಹಳಷ್ಟು ಬೆಳೆದಿತ್ತೆಂಬುದನ್ನು ವೈಯಕ್ತಿಕವಾಗಿ ನಾನು ಕೂಡ ಕೇಳಿದ್ದೇನೆ. ೧೯೬೯ರಲ್ಲಿ 'ಪ್ರಭಾವತಿ' ಎಂಬ ಸಾಮಾಜಿಕ ನಾಟಕ ಹಾಗೂ ೧೯೭೦ರಲ್ಲಿ 'ಭಕ್ತಿಭಂಡಾರಿ ಬಸವಣ್ಣ' ಎಂಬ ನಾಟಕಗಳು ೨-೩ ಬಾರಿ ಪ್ರದರ್ಶನಗೊಂಡಿದ್ದವು. ಇವು ಎಷ್ಟರಮಟ್ಟಿಗೆ ಯಶಸ್ವಿಯಾಗಿದ್ದವೆಂದರೆ ನೆರೆಹೊರೆಯ ಗ್ರಾಮದವರೆಲ್ಲಾ ಈ ನಾಟಕಗಳನ್ನು ನೋಡಲು ಬರುತ್ತಿದ್ದರಂತೆ.

೧೯೭೩ರಲ್ಲಿ 'ಐರಾವರ ಮೈರಾವಣ' ಎಂಬ ಪೌರಾಣಿಕ ದೊಡ್ಡಾಟ ಆಡಲಾಗಿತ್ತಂತೆ. ನಾನು ಚಿಕ್ಕವನಿರುವಾಗಲೂ ಈ ಆಟವನ್ನು ಊರಲ್ಲಿ ಆಡಿದ್ದ ನೆನಪು ನನಗಿದೆ. ೧೯೭೫-೭೬ರಲ್ಲಿ 'ರಾಮಲಕ್ಷ್ಮಣ' ಎಂಬ ಡಪ್ಪಿನಾಟ, ಮತ್ತೊಂದೆರಡು ವರ್ಷ ಕಳೆಯುವುದರಲ್ಲಿ 'ಸತ್ಯ ಹರಿಶ್ಚಂದ್ರ' ಎಂಬ ದೊಡ್ಡಾಟಗಳನ್ನು ಆಡಲಾಗಿತ್ತು. ಸ್ಥಳೀಯವಾಗಿ ಅಂದಿನ ಖ್ಯಾತ ಡಪ್ಪಿನಾಟ ನಿರ್ದೇಶಕರಾಗಿದ್ದ ವರವಟ್ಟಿ ಗ್ರಾಮದ ಶ್ರೀ ಮಹಾಲಿಂಗಪ್ಪ ಹೂಗಾರ ಹಾಗೂ ಶ್ರೀ ಶಿವಲಿಂಗಪ್ಪ ಹೂಗಾರ ಎಂಬುವವರ ನಿರ್ದೇಶನದಲ್ಲಿ ೪೦ ದಿನಗಳ ಅಭ್ಯಾಸ ಮಾಡಿದ ನಂತರ ಸಾರ್ವಜನಿಕವಾಗಿ ೨ ಸಲ ರಂಗಭೂಮಿಯಲ್ಲಿ ಅವುಗಳು ಪ್ರದರ್ಶನಗಳನ್ನು ಏರ್ಪಡಿಸಲಾಗಿತ್ತು. ಗ್ರಾಮದ ತರುಣರೆಲ್ಲಾ ಸೇರಿ ೧೯೭೯ರಲ್ಲಿ 'ಬಂಜೆಯ ತೊಟ್ಟಿಲು' ಎಂಬ ಸುಂದರ ಸಾಮಾಜಿಕ ನಾಟಕವನ್ನು ಆಡಿದ್ದರು. ಇದಾದ ನಂತರ ೧೯೮೭ರಲ್ಲಿ 'ಲವಕುಶ' ಎಂಬ ಡಪ್ಪಿನಾಟಕವೊಂದು ಪ್ರದರ್ಶನ ಮಾಡಲಾಗಿತ್ತು. 'ಈ ಮಾದರಿಯ

ರಂಗಭೂಮಿ ಚಟುವಟಿಕೆಗಳು ನನ್ನ ಎಳೆಮನಸ್ಸಿನ ಮೇಲೆ ಕಲಾಕ್ಷೇತ್ರದ ಗೌರವ ಹೆಚ್ಚಿಸಿಕೊಳ್ಳುವಂತೆ ಪ್ರಚೋದನೆ ನೀಡಿತ್ತು' ಎಂದು ಶಿವಸ್ವಾಮಿಯವರು ಅಂದಿನ ದಿನಗಳನ್ನು ನೆನೆಯುತ್ತಾರೆ.

ಬರೀ ನಾಟಕಗಳಷ್ಟೇ ಅಲ್ಲದೇ ವರ್ಷಕೊಮ್ಮೆ ಬಸವ ಜಯಂತಿ ಅಥವಾ ಯುಗಾದಿಯ ಸಂದರ್ಭದಲ್ಲಿ ರಾಮಾಯಣ ಮಹಾಭಾರತ ಕಥೆಗಳ ಕೆಲವು ಪ್ರಮುಖ ಭಾಗಗನ್ನೊಳಗೊಂಡ ಕೋಲಾಟ ಅದ್ದೂರಿಯಾಗಿ ಊರಲ್ಲಿ ಜರುಗುತ್ತಿತ್ತು. ಕೋಲಾಟವನ್ನು ಈಗಲೂ ಗ್ರಾಮದಲ್ಲಿ ಪ್ರತಿ ವರ್ಷ ಆಡಿಕೊಂಡು ಬರಲಾಗುತ್ತಿದೆ. ಗ್ರಾಮದಲ್ಲಿ ಎರಡೇ ಮುಸಲ್ಮಾನರ ಮನೆಗಳಿದ್ದರು ಕೂಡ ಕರ್ಬಲ ಯುದ್ಧದಲ್ಲಿ ಮಡಿದ ಮುಸ್ಲಿಂ ಧರ್ಮವೀರರ ನೆನಪಿನಲ್ಲಿ ಆಚರಿಸುವ ಮೊಹರಂ ಹಬ್ಬವು ಊರಿನಲ್ಲಿ ಅದ್ದೂರಿಯಾಗಿಯೇ ಜರುಗುತ್ತದೆ. ಪಕ್ಕದ ವರವಟ್ಟಿ ಗ್ರಾಮದ ಮುಸ್ಲಿಮ ಸಹೋದರರು ಇಲ್ಲಿಗೆ ಬಂದು ಊರಿನ ಅನ್ಯಧರ್ಮಿಯರ ಸಹಕಾರದೊಂದಿಗೆ ಮೊಹರಂ ಆಚರಣೆಯನ್ನು ನಡೆಸಿಕೊಡುತ್ತಾರೆ. ಈಗಲೂ ಸಹ ಅದೇ ಪರಂಪರೆ ಊರಲ್ಲಿ ಮುಂದುವರೆದು ಬರುತ್ತಿದೆ.

ಗ್ರಾಮದಲ್ಲಿ ಮಹಾರಾಷ್ಟ್ರ ಮೂಲದ ಮೀರಾಬಾಯಿ ತುಕಾರಾಮ ಆದಿಯಾಗಿ ಸಂತವೇರಣ್ಯರ ಪ್ರಭಾವ ಬೀರುವಂತೆ ಔಷಧಿ ಮಹಾರಾಜರು ಆಗಾಗ ಬಂದು ತಮ್ಮ ಕೀರ್ತನೆಯ ಮೂಲಕ ಜನರಲ್ಲಿ ದೈವಭಕ್ತಿ ಮಾಡುವಂತೆ ಮಾಡಿದ್ದರು. ಗ್ರಾಮದ ಹಲವು ಮನೆಗಳಲ್ಲಿ ವಾರಕರಿ ಸಂಪ್ರದಾಯವನ್ನಾಚರಿಸುವ ಭಕ್ತರಿದ್ದರು. ಹಣೆಯಲ್ಲಿ ಗಂಧದ ತಿಲಕ, ಕೊರಳಲ್ಲಿ ತುಳಸಿ ಮಾಲೆ ಧರಿಸಿ ಭಜನಾ ಕೀರ್ತನೆಗಳಲ್ಲಿ ಭಾಗವಹಿಸುವ ಕೆಲವು ಅಪ್ಪಟ ಭಕ್ತರು ಶುದ್ಧ ಶಾಖಾಹಾರಿ ಜೀವನ ನಡೆಸುತ್ತಿದ್ದರು. ಇದರಿಂದಾಗಿ ಗ್ರಾಮದಲ್ಲಿ ಯಾವುದೇ ದುರಾಚಾರಿಗಳು ಬೆಳೆಯಲು ಸಾಧ್ಯವಾಗುತ್ತಿರಲಿಲ್ಲ. ಗ್ರಾಮದ ಬಹುಸಂಖ್ಯಾತ ಜನ ಹರಿಭಕ್ತರಾಗಿ ತಮ್ಮ ತಮ್ಮ ತಿಳುವಳಿಕೆಗಳಿಗೆ ತಕ್ಕಮಟ್ಟಿಗೆ ಧರ್ಮಾಚರಣೆ ಅಳವಡಿಸಿಕೊಂಡಿದ್ದರು.

ಒಟ್ಟಾರೆಯಾಗಿ ಅಂದಿನ ಮಕ್ಕಳ ಬೆಳವಣಿಗೆಗೆ ಗ್ರಾಮದ ಪರಿಸರವು ಸಕಾರಾತ್ಮಕವಾಗಿ ವಾತಾವರಣವನ್ನು ಕಲ್ಪಿಸಿತ್ತು ಎಂದು ಹೇಳಬಹುದು.

ಊರಿಗೆ ಕಿ.ಮೀ ದೂರದಲ್ಲಿ ದಕ್ಷಿಣ ಮತ್ತು ಪಶ್ಚಿಮ ದಿಕ್ಕುಗಳಲ್ಲಿ ಕೃತಕ ಅರಣ್ಯ ಇರುವುದು ಅಭಿಮಾನದ ಸಂಗತಿ. ೧೯೭೨ರ ಬರಗಾಲದಲ್ಲಿ ಜನರಿಗೆ ಉದ್ಯೋಗ ಸೃಷ್ಟಿಸಿದ ಸರ್ಕಾರ ಕೃಷಿಗೆ ಉಪಯುಕ್ತವಲ್ಲದ ೩೦೦ ಎಕರೆಗಿಂತಲೂ ಹೆಚ್ಚಿನ ಪ್ರದೇಶದಲ್ಲಿ ನೀಲಗಿರಿ, ಹೊಂಗೆ, ಬೇವು, ಮಾವು ಹಾಗೂ ಐವತ್ತು ಎಕರೆಯಷ್ಟು ಮೀಸಲು ಪ್ರದೇಶದಲ್ಲಿ ಗೇರು ಗಿಡಗಳನ್ನು ಬೆಳಸಿದೆ. ಊರ ಸುತ್ತಲಿನ ಗುಡ್ಡಗಳ ಇಳಿಜಾರಿನಲ್ಲಿ ಗಿಡಮರಗಳನ್ನು ನೆಡಲಾಗಿದೆ. ೪೫ ವರ್ಷಗಳಿಂದಲೂ ಈ ಅರಣ್ಯ ಬೆಳೆದು ಬಂದಿದೆ. ಇದರಲ್ಲಿ ನವಿಲುಗಳು, ನರಿ, ಕಾಡುಹಂದಿ, ಮೊಲ, ಮಂಗ, ೧೪-೧೫ ಜಿಂಕೆಗಳ ಗುಂಪು ಸೇರಿದಂತೆ ಇನ್ನೂ ಅನೇಕ ಪ್ರಾಣಿ ಪಕ್ಷಿಗಳು ಆಶ್ರಯ ಪಡೆದುಕೊಂಡಿವೆ. ಸಿಪಿಟಿ ಯೋಜನೆಯಡಿ ಅರಣ್ಯದ ಸುತ್ತಮುತ್ತಲು ರಕ್ಷಾ ಕಾಲುವೆಯನ್ನು ನಿರ್ಮಿಸಲಾಗಿದೆಯಾದರೂ ಜನ ತಮ್ಮ ಉಪಯೋಗಕ್ಕೆಂದು ಅರಣ್ಯದಲ್ಲಿನ ಗಿಡಗಳನ್ನು ಕಡಿಯುವುದು ನಿಂತಿಲ್ಲ. ಅರಣ್ಯ ಇಲಾಖೆ ಈ ಬಗ್ಗೆ ಗಂಭೀರವಾಗಿ ಚಿಂತಿಸಬೇಕಾಗಿದೆ.

ಆಟವೆಂಬ ಕಲಿಕೆ.

ಗ್ರಾಮೀಣ ಪ್ರದೇಶದಲ್ಲಿ ಹುಟ್ಟಿ ಬೆಳೆದ ಶಿವಸ್ವಾಮಿಯವರ ಬಾಲ್ಯದ ನೆನಪಿನ ಸುರುಳಿ ಬಿಚ್ಚಿದಷ್ಟು ಬೆಳೆಯುತ್ತಾ ಹೋಗುತ್ತದೆ. ಕೆಲವೊಂದನ್ನು ಮಾತ್ರ ನಾವಿಲ್ಲಿ ದಾಖಲಿಸುತ್ತಿದ್ದೇವೆ. ಬದುಕಲ್ಲಿ ಬಾಲ್ಯ ಜೀವನವೆಂಬುದು ಸುವರ್ಣಕಾಲವೆಂದು ಎಲ್ಲರೂ ಹೇಳುತ್ತಾರೆ. ಆದರೆ ನಾವುಗಳು ಬಾಲ್ಯದಲ್ಲಿರುವಾಗ ಅದರ ಅನುಭವ ನಮಗಾಗುವುದಿಲ್ಲ. ಪ್ರಾಯಶಃ ಅದು ನಮ್ಮ ಅರಿವಿಗೆ ನಿಲುಕದ್ದಾಗಿರುತ್ತದೆ. ಬಾಲ್ಯ ಜೀವನ ಕಳೆದ ಎಷ್ಟೋ ವರ್ಷಗಳ ನಂತರ ಮಕ್ಕಳ ಆಟ ಪಾಠಗಳನ್ನು ನೋಡಿ, ಅವರು ಹಕ್ಕಿಗಳಂತೆ ಸ್ವತಂತ್ರವಾಗಿ ಮತ್ತು ಸ್ವಚ್ಛಂದವಾಗಿರುವುದನ್ನು ಗಮನಿಸಿದಾಗ

ನಾವು ಕ್ರಮಿಸಿ ಬಂದ ಸುಮಧುರ ನೆನಪುಗಳು ಕಣ್ಣೆದುರಿಗೆ ಬಂದು ಹೋಗುತ್ತವೆ. ಸಾಮಾನ್ಯವಾಗಿ ಬಾಲ್ಯದಲ್ಲಿ ಮಕ್ಕಳಿಗೆ ಎಲ್ಲಕ್ಕಿಂತಲೂ ಪ್ರಿಯವಾದುದೆಂದರೆ ಆಟ ಆಡುವುದು. ಅಂತೆಯೇ ಶಿವಸ್ವಾಮಿಯವರಿಗೂ ಆಟ ಆಡುವುದು ಎಂದರೆ ತುಂಬಾನೇ ಇಷ್ಟವಾಗಿತ್ತು. ವಿಪರ್ಯಾಸವೆಂದರೆ ಉಳಿದವರಂತೆ ಅವರು ಇಡೀ ಬಾಲ್ಯ ಜೀವನವನ್ನು ಸಾಮಾನ್ಯ ಮಕ್ಕಳಂತೆ ಆಟವಾಡಿ ಕಳೆಯಲಾಗಲಿಲ್ಲ. ಮಧ್ಯದಲ್ಲಿಯೆ ಅವರಿಗೆ ದೃಷ್ಟಿದೋಷ ಬಂದಿದ್ದರಿಂದ ಅವರ ಆಟಗಳಿಗೆ ಕಡಿವಾಣ ಬಿತ್ತು.

ಮನೆಯ ಮುಂದಿನ ಚಿಕ್ಕ ಬೀದಿಯಲ್ಲಿ ಪೆನ್ನುಗಳ ಆಟ, ಮಣ್ಣಿನಲ್ಲಿ ಬಳೆ ಚೂರು ಆಟ, ಒಣಗಿದ ಮಾವಿನ ವಾಟೆಗಳ ಆಟ, ಖಾಲಿಯಾದ ಸಿಗರೇಟ್ ಪೊಟ್ಟಣದ ಬಿರುಕು ಕಾಗದದಲ್ಲಿ ಮಾಡಿದ ಪತ್ತಗಳ ಆಟ (ಅವುಗಳಲ್ಲಿ ಒಂದು, ಎರಡು, ಐದು, ಹತ್ತು, ಐವತ್ತು, ನೂರು, ಐನೂರು ಸಂಖ್ಯೆಗಳವರೆಗೆ ಪತ್ತಾಗಳ ತಯಾರಿಸಿ ಚಿಲ್ಲರೆ ಕೊಂಡುಕೊಳ್ಳುವ ವಹಿವಾಟು ಕೂಡ ನಡೆಯುತ್ತಿತ್ತು)ಗಳನ್ನು ಆಡುತ್ತಿದ್ದರು. ಹೀಗೆ ಆಡುವ ತಂಡದಲ್ಲಿ ಹುಡುಗಿಯರ ಸಂಖ್ಯೆ ಹೆಚ್ಚಾದಾಗ ಕುಂಟೆಬಿಲ್ಲೆ, ಹಗ್ಗದಾಟ, ಅಡಕಿನ ಹಳ್ಳದಾಟ, ಚಿತ್ತುಪಟ್ಟು ಆಟ, ಕವಡೆಯಾಟ ಮುಂತಾದ ಆಟಗಳು ಆಡುತ್ತಿದ್ದರಂತೆ. ವರ್ಷಗಳು ಕಳೆದಂತೆಲ್ಲಾ ಮಕ್ಕಳ ಅಭಿರುಚಿಗೆ ತಕ್ಕಂತೆ ಆಟಗಳು ಸಹ ಭಿನ್ನ ಭಿನ್ನವಾಗಿರುತ್ತಿದ್ದವು. ಇಲ್ಲಿ ಅವುಗಳನ್ನು ಆದಷ್ಟು ಕ್ರಮಬದ್ಧವಾಗಿ ನೀಡಲಾಗಿದೆ.

ಹೊಲಗದ್ದೆಗಳಲ್ಲಿ ಮರಕೋತಿ ಆಟ, ಆಕಳ ಮನೆ ಆಟ, ಚೀರಗಾಲಿ ಆಟ, ನಿರುಪಯುಕ್ತವಾದ ಹೋಳಿಗೆ ಹಂಚನ್ನು ವೃತ್ತಾಕಾರದಲ್ಲಿ ಕತ್ತರಿಸಿ ಬಿರುಸಾದ ತಂತಿಯಿಂದ ನಿಯಂತ್ರಕ ಮಾಡಿ ಓಡಿಸುವುದು. ಒಣಗಿದ ಮಾವಿನ ಎಲೆಯಿಂದ ಚಿತ್ರ ತಯಾರಿಸಿ ಅದನ್ನು ಬಬಲಿ ಮುಳ್ಳಿಗೆ ಚುಚ್ಚಿ ಮುಳ್ಳಿನ ತುದಿಗೆ ಒಣಗಿದ ಕುರಿ ಹಿಕ್ಕೆಯನ್ನು ಚುಚ್ಚಿ ಎಲೆ ಹಾರಿಹೋಗದಂತೆ ಮಾಡಿ ಗಾಳಿಗೆ ಬೆನ್ನು ಮಾಡಿ ಓಡಿದರೆ ವಿದ್ಯುತ್ ಪಂಖದಂತೆ ಅದು ತಿರುಗುತ್ತಿತ್ತು. ಗಾಳಿ ಬೀಸುವಿಕೆಯ ಮೇಲೆ ಅದರ

ಗತಿ ಹೆಚ್ಚು ಕಡಿಮೆ ಆಗುತ್ತಿರುತ್ತದೆ. ಭತ್ತದ ಹುಲ್ಲಿನ ಬಣವೆ ಮೇಲೆ ನಿಂತು ಕೆಳಗೆ ಜಿಗಿಯುವುದು. ಮೋಜಿಗಾಗಿ ಉದ್ದನೆಯ ಕಟ್ಟಿಗೆಯ ತುದಿಗೆ ದಾರದ ಬಲೆ ಕಟ್ಟಿ ಮರದ ಟೊಂಗೆಗಳಿಗೆ ಅಂಟಿಕೊಂಡು ತೊಂಡೆಯ ಕುತ್ತಿಗೆಗೆ ನಿಧಾನವಾಗಿ ಸೇರಿಸಿ ಅದನ್ನು ಕೆಳಗಿಳಿಸಿ ನೀರಿನ ಪಕ್ಕದಲ್ಲಿ ಬಿಡುವುದು. ಅದು ಗಾಬರಿಯಿಂದ ಕಟ್ಟಿಗೆ ಸಹಿತ ಎಳೆದುಕೊಂಡು ಓಡಲು ಪ್ರಯತ್ನಿಸುತ್ತಿತ್ತು. ಆಟ ಸಾಕಾದ ನಂತರ ಜಾಗರೂಕತೆಯಿಂದ ಬಲೆ ಕತ್ತರಿಸಿ ಅದನ್ನು ಬಿಟ್ಟು ಬಿಡುವುದು. ತೊಂಡೆಯ ಜಾತಿಯ ಒತಿಕ್ಯಾತ ಸಿಂಹಘಡ ಕೋಟೆ ಹತ್ತಲು ತಾನಾಜಿಗೆ ಸಹಾಯವಾದ ಕಥೆ ಇತಿಹಾಸ ಪ್ರಸಿದ್ಧವೆಂಬುದು ಇಲ್ಲೆ ನೆನಪಿಸಿಕೊಳ್ಳಬಹುದು.

ಅಲ್ಲಲ್ಲಿ ಗುಂಡಿಗಳಲ್ಲಿ ನಿಂತ ನೀರಿಗೆ ಕಲ್ಲೆಸೆದು ಗೋಳಾಕಾರವಾಗಿ ಎದ್ದು ಮುಳುಗುವ ಅಲೆಗಳನ್ನು ಗಮನಿಸುವುದು. ಸೊಂಟದೆತ್ತರ ಎದೆಮಟ್ಟ ಬೆಳೆದು ನಿಂತ ಅಡವೇರಿ ಗಿಡಗಳ ಮೇಲೆ ಹಾರಿ ಆಚೆ ಹೋಗಲು ಪ್ರಯತ್ನಿಸುವುದು. ಹಾಗೆ ನೋಡಿದರೆ ಇವೆಲ್ಲಾ ನಿರ್ದಿಷ್ಟವಾದ ಯಾವ ಆಟದ ಗುಂಪಿಗೂ ಸೇರದವುಗಳು. ಅವರೆಲ್ಲ ಮನಬಂದಂತೆ ಅವರಿಗೆ ಮೋಜನಿಸಿದ ರೀತಿಯಲ್ಲಿ ಆಟವಾಡಿಕೊಳ್ಳುತ್ತಿದ್ದರೆಂಬುದಕ್ಕೆ ಇದೊಂದು ಉದಾಹರಣೆ ಅಷ್ಟೇ. 'ಆಗಿನ ನಮ್ಮ ಆಟಗಳು ಕಲಿಕೆಯ ಪ್ರಕ್ರಿಯೆಯೊಂದಿಗೆ ಪ್ರಾರಂಭವಾಗಿ, ದೈಹಿಕ ವ್ಯಾಯಾಮದೊಂದಿಗೆ ಕೊನೆಗೊಳ್ಳುತ್ತಿದ್ದವು' ಎಂಬ ಅವರ ಮಾತು ಸತ್ಯವೆನಿಸುತ್ತದೆ. ಇಗೇನಿದ್ದರೂ ಮೊಬೈಲು, ಟಿವಿ, ವಿಡಿಯೋ ಆಟಗಳಲ್ಲಿ ಕಳೆದುಹೋಗಿರುವ ಯುವ ಪೀಳಿಗೆಗೆ ಇದೆಲ್ಲ ಆಶ್ಚರ್ಯವಾದ ಆಟಗಳೆನಿಸುತ್ತವೆ. ಆಟಗಳು ಮಗುವಿನ ಮಾನಸಿಕ, ದೈಹಿಕ ಮತ್ತು ಬೌದ್ಧಿಕ ಸಾಮರ್ಥ್ಯಗಳನ್ನು ಒರೆಗೆ ಹಚ್ಚುವಂತಿರಬೇಕು. ಜೀವನದಲ್ಲಿ ಎದುರಾಗುವ ಒತ್ತಡಗಳನ್ನು ನಿಭಾಯಿಸುವ ಕಲಿಕೆ ನಮಗೆ ಅದೆಷ್ಟೋ ಹಳ್ಳಿ ಆಟಗಳಿಂದಲೇ ಲಭಿಸುತ್ತದೆ. ಅದು ಅವರ ಜೀವನದ ಕೊನೆಯವರೆಗೂ ಅವರನ್ನು ಜತನದಿಂದ ಕಾಪಾಡಿಕೊಂಡು ಬರುತ್ತದೆ. ಆರೋಗ್ಯ ದೃಷ್ಟಿಯಿಂದಲೂ ಈ ಆಟಗಳು ತುಂಬಾ ಉಪಕಾರಿಯಾಗಿದ್ದವು.

ಇವುಗಳಲ್ಲದೆ 'ಗಿಲ್ಲಿದಾಂಡು, ಒಲಿಚೆಂಡು, ಲಗೋರಿ, ಉಪ್ಪು ತರುವ ಆಟ, ಕಬ್ಬಡಿ ಹಾಗೂ ಕ್ರಿಕೆಟ್‌ಗಳೊಂದಿಗೆ ಮುಂದುವರೆದ ಆಟಗಳಾದ ವಾಲಿಬಾಲ್, ಚದುರಂಗ ಆಟಗಳು ಸಹ ಆಡಿಕೊಂಡಿದ್ದು ಈಗಲು ಸಹ ನನ್ನ ಕಣ್ಣಿಗೆ ಕಟ್ಟಿದಂತಿವೆ' ಎನ್ನುತ್ತಾರೆ ಶಿವಸ್ವಾಮಿಯವರು.

ಚೀನಕೇರಿಯಲ್ಲಿ ಆಗೊಂದು ಉತ್ತಮ ಕ್ರಿಕೆಟ್ ತಂಡವಿತ್ತು. ಅದೊಂದು ಕೇವಲ ಆಟದ ತಂಡವಾಗಿರದೆ ಸೃಜನಶೀಲ ತಂಡವಾಗಿತ್ತು. ಆ ತಂಡದ ವಿಶೇಷತೆ ಏನೆಂದರೆ ಭಾಗವಹಿಸುವ ಎಲ್ಲಾ ಕ್ರೀಡಾಪಟುಗಳಿಗೆ ಯಾವುದೇ ಕ್ರಿಕೆಟ್ ಆಟಗಾರರ ಹೆಸರಿಡದೆ, ಎಲ್ಲರೂ ಒಬ್ಬೊಬ್ಬ ವಿಜ್ಞಾನಿಯ ಹೆಸರುಗಳನ್ನಿಟ್ಟುಕೊಂಡಿದ್ದರು. ಅದರಲ್ಲಿ ಶಿವಸ್ವಾಮಿಯವರಿಗೆ ರೇಡಿಯೋ ಕಂಡು ಹಿಡಿದ ಸುಪ್ರಸಿದ್ಧ ವಿಜ್ಞಾನಿ 'ಮಾರ್ಕೋನಿ' ಎಂಬ ಹೆಸರಿಡಲಾಗಿತ್ತು. ತಂಡದ ನಾಯಕರಾಗಿದ್ದ ಉಮೇಶ್ ಅವರು 'ಲೂಯಿ ಪಾಶ್ಚರ್' ಎಂದು ಕರೆಸಿಕೊಳ್ಳುತ್ತಿದ್ದರು. ಸುತ್ತಮುತ್ತಲಿನ ಅನೇಕ ಗ್ರಾಮಗಳಿಗೆ ಹೋಗಿ ಹಲವು ಬಾರಿ ಕಪ್ಪು ಗೆದ್ದುಕೊಂಡು ಬಂದದ್ದುಂಟು. ಇವೆಲ್ಲವುಗಳು ಕೆಲವೇ ವರ್ಷಗಳ ನೆನಪು. ಅಂದರೆ ಇವರಿಗೆ ದೃಷ್ಟಿದೋಷ ಬರುವ ಮುಂಚೆಯೇ ನಡೆದು ಹೋದ ನೆನಪುಗಳು. ಶಿವಸ್ವಾಮಿಯವರಿಗೆ ನಾಲ್ಕನೇ ತರಗತಿಯಲ್ಲಿ ಓದುತ್ತಿರುವಾಗಲೇ ಚೆನ್ನಾಗಿ ಈಜಲು ಬರುತ್ತಿತ್ತು. ಅವರ ಸ್ನೇಹಿತರಾದ ಉಮೇಶ್, ಸತೀಶ್, ಜಗದೀಶ್ ಮೂರು ಜನ ಸಹೋದರರ ಒತ್ತಾಯದ ಮೇರೆಗೆ ಊರಂಚಿನಲ್ಲಿರುವ ಅವರ ಸ್ವಂತ ತೋಟ ಕೆರಿಮಳದಲ್ಲಿರುವ ಕಟ್ಟಿದ ಬಾವಿಯಲ್ಲಿ ಈಜು ಕಲಿತಿದ್ದು. ಎರಡು ಮೂರು ದಿನಕ್ಕೊಮ್ಮೆ ಬಾವಿಯಲ್ಲಿ ಅಳವಡಿಸಿದ ಕರಿಕಲ್ಲಿನ ನಟ್ಟನಡುವೆ ಇಳಿದು, ಸೊಂಟಕ್ಕೆ ಹಗ್ಗ ಕಟ್ಟಿಕೊಂಡು ಕೆಲವೇ ದಿನಗಳಲ್ಲಿ ಈಜುವುದನ್ನು ರೂಢಿಸಿಕೊಂಡರು.

ಬೆಳೆಯುವ ವಯಸ್ಸಿಗೆ ಬೆಂದಕಾಳಿನ ನಡೆ.

ಶಿವಸ್ವಾಮಿಯವರ ತಾಯಿಯ ತವರು ಮನೆ ಧುಮ್ಮನಸೂರು ಹಾಗೂ ಅವರ ಹುಟ್ಟೂರಾದ ಚೀನಕೇರಾ ಗ್ರಾಮಗಳ ಪರಿಸರವನ್ನು ನಾನು ಕೂಡ ಹತ್ತಿರದಿಂದಲೇ ಕಂಡಿದ್ದೇನೆ. ಅವು ಆ ಹೊತ್ತಿಗೆ ಕುಗ್ರಾಮಗಳಾಗಿದ್ದರು ಕೂಡ ಸಾಂಸ್ಕೃತಿಕವಾಗಿ ಚಟುವಟಿಕೆಗಳಿಂದ ಕೂಡಿದ ಗ್ರಾಮಗಳಾಗಿದ್ದವು. ಹಾಗಾಗಿ ಊರಿನ ಪರಿಸರ ಮೂಲತಃ ಶಿವಸ್ವಾಮಿಯವರ ಮೇಲೆ ದಟ್ಟವಾದ ಪ್ರಭಾವಗಳನ್ನು ಬೀರಿದೆ ಎಂದೇ ಹೇಳಬಹುದು. ಜೊತೆಗೆ ಪಠ್ಯಪುಸ್ತಕಗಳಲ್ಲಿದ್ದ ಮಹಾತ್ಮ ಬುದ್ಧ ಮತ್ತು ವರ್ಧಮಾನ ಮಹಾವೀರರ ಜೀವನ ಚರಿತ್ರೆಗಳು ಅವರ ಅಧ್ಯಾತ್ಮದ ಕಡೆಗೆ ಹೊರಳಲು ಪ್ರೇರೇಪಿಸಿದವು. ಮೂಲತಃ ಅಂದಿನ ಹಳ್ಳಿಗಳು ಎಂದರೆ 'ಅಧ್ಯಾತ್ಮ' ಎಂಬಂತ್ತಿದ್ದ ಪರಿಸರವದು. ಅದನ್ನು ಬೆಳೆಯುವ ಸಿರಿ ಮೊಳಕೆಯಲ್ಲಿ ಎಂಬಂತೆ ಮನಸ್ಸಿನಲ್ಲಿದ್ದ ಚಿಗುರಿಗೆ ನೀರೆರೆಯುವ ಕೆಲಸವಾಗಿ ಅಂದಿನ ಶಾಲಾ ಪಠ್ಯ ಮಾಡಿತು. ಮಕ್ಕಳಿಗೆ ಪಠ್ಯದ ಮೂಲಕ ಏನು ಕಲಿಸಬೇಕು? ಏನು ಕಲಿಸಬಾರದು ಎಂಬುದಕ್ಕೆ ಉದಾಹರಣೆಯಾಗಿ ಈ ಮಾತುಗಳು ನಮಗೆ ಎದುರು ನಿಲ್ಲುತ್ತವೆ. ಬುದ್ಧ ಮತ್ತು ಮಹಾವೀರರು ಶಿವಸ್ವಾಮಿ ಅವರ ಒಳಗಣ್ಣನ್ನು ಎಚ್ಚರಿಸುವ ಶಕ್ತಿಯಾಗಿ ಕೆಲಸ ಮಾಡಿದರು.

ಮುಂದೆ ಓದಿದ 'ಶಿವಲೀಲಾಮೃತ' ಕೃತಿಯು ಅವರಲ್ಲಿ ಶಿವನ ಬಗೆಗೆ ಅನನ್ಯ ಭಕ್ತಿಯನ್ನುಂಟು ಮಾಡಿತು. ಅದರಲ್ಲಿ ಬರುವ ಭಕ್ತ ಸಿರಿಯಾಳ, ಕೋಳೂರು ಕೊಡಗೂಸು, ರುದ್ರ ಪಶುಪತಿ, ಮಲ್ಲಿನಾಳ, ಬೇಡರ ಕಣ್ಣಪ್ಪ ಮುಂತಾದ ಭಕ್ತಿ ಪ್ರಧಾನ ಕತೆಗಳು ಸ್ಫೂರ್ತಿದಾಯಕವಾಗಿದ್ದವು ಎಂದು ಅವರು ನೆನಪಿಸಿಕೊಳ್ಳುತ್ತಾರೆ. ಆ ಬಗ್ಗೆ ಅವರ ಮಾತಿನಲ್ಲೇ ಹೇಳುವುದಾದರೆ "ಅವು ನನ್ನ ಎಳೆಯ ಮನಸ್ಸಿನ ಮೇಲೆ ಎಷ್ಟು ಪರಿಣಾಮ ಬೀರಿದವೆಂದರೆ ಅವುಗಳ ಪ್ರಭಾವದ ತೀವ್ರತೆಗೆ ನಾನು ಮೂರು ದಿನಗಳ ಕಾಲ ನಿರಂತರವಾಗಿ ಉಪವಾಸವಿದ್ದುಕೊಂಡು ಓಂ ನಮಃ ಶಿವಾಯ ಹಾಗೂ ಷಡಕ್ಷರಿ

ಮಂತ್ರಗಳನ್ನು ಯಾರಿಗೂ ತಿಳಿಯದಂತೆ ಜಪಿಸಿದೆ. ತೆನೆಹೊತ್ತು ನಿಂತ ಜೋಳದ ಬೆಳೆಯೊಳಗೆ ಯಾರಿಗೂ ಕಾಣದ ರೀತಿಯಲ್ಲಿ ನಿಂತುಕೊಂಡು ಒಂದೆರೆಡು ಘಂಟೆಗಳವರೆಗೆ ಏಕಾಗ್ರತೆಯಿಂದ ಧ್ಯಾನಗೈಯುವುದು ಹಾಗೂ ಪದ್ಮಾಸನದಲ್ಲಿ ಕುಳಿತುಕೊಳ್ಳುವುದನ್ನು ಮಾಡುತ್ತಿದ್ದೆ. ಈ ನಡವಳಿಕೆ ಎಲ್ಲಿಯವರೆಗೆ ಬಂತೆಂದರೆ ಮನೆಯಲ್ಲಿ ಯಾರಿಗೂ ಗೊತ್ತಾಗದಂತೆ ದೇವಗಿರಿ ವನಕ್ಕೆ ಹೋಗಿ ತಪಸ್ಸನ್ನಾಚರಿಸಬೇಕೆಂಬ ಉತ್ಕಟಕಾಂಕ್ಷೆ ಮನಕ್ಕೆ ಬಂದಿತು". ಈ ದೇವಗಿರಿ ಎಂಬ ಗ್ರಾಮ ಹುಮನಾಬಾದ್ ತಾಲೂಕಿನ ಇತಿಹಾಸ ಪ್ರಸಿದ್ದ ಚಾಂಗಲೇರ ಗ್ರಾಮದ ಹತ್ತಿರ ಬರುತ್ತದೆ. ಪ್ರತಿ ವರ್ಷವೂ ಅಲ್ಲಿ ದೇವಿಯ ಹೆಸರಿನಲ್ಲಿ ಕುರಿ ಕೋಣ ಎಮ್ಮೆಗಳ ಮಾರಣ ಹೋಮ ನಡೆಯುತ್ತದೆ. ಮೂಲತಃ ಇದು ಕೂಡ ಪುರಾತನ ಗ್ರಾಮವಾಗಿದ್ದು ಆ ಬಗ್ಗೆ ಸಾಕಷ್ಟು ಐತಿಹ್ಯಗಳಿವೆ. ಅದು ಇಲ್ಲಿ ಅಪ್ರಸ್ತುತ ಎಂಬ ಕಾರಣಕ್ಕೆ ಹೆಚ್ಚಿನ ವಿವರಣೆ ನೀಡುತ್ತಿಲ್ಲ.

ಈ ಮಾದರಿಯ ಓದು ಅವರಲ್ಲೊಬ್ಬ ಸಂತನಿರುವುದನ್ನು ಮೊದಲ ಬಾರಿಗೆ ತನ್ನ ಝಲಕ್ ಅನ್ನು ತೋರಿಸಿತು. ಸಾಹಿತ್ಯ ಸಹನೆಯನ್ನು ಪರೀಕ್ಷಿಸುತ್ತದೆ ಎಂಬುದು ಇದಕ್ಕೇ ಇರಬೇಕು. ವಿದ್ಯಾರ್ಥಿ ದಿಸೆಯಿಂದಲೇ ಶುರುವಾದ ಅವರ ಸಾಹಿತ್ಯದ ಓದು ಅವರಲ್ಲಿ ಸಹನೆ, ತಾಳ್ಮೆ, ಅಧ್ಯಾತ್ಮ, ಸಂತಗುಣಗಳನ್ನು ಬಿತ್ತಿತು. ಅದನ್ನವರು ಜತನದಿಂದ ಕಾಪಾಡಿಕೊಳ್ಳುವುದರ ಜೊತೆಗೆ ಕಾಲಕಾಲಕ್ಕೆ ತಮ್ಮ ಜೀವನದುದ್ದಕ್ಕೂ ಅದನ್ನು ಪ್ರಕಟಿಸುತ್ತಲೇ; ಮುಂದಿನ ಪೀಳಿಗೆಗೆ ಪಸರಿಸುತ್ತಲೇ ಹೊರಟಿದ್ದಾರೆ. ಅವರಿಂದ ಆ ಊರು ಹಾಗೂ ಆ ಊರಿನ ಮಕ್ಕಳು ಪಡೆಯಬಹುದಾದ ಬಳುವಳಿ ಎಂದರೆ ಇವುಗಳನ್ನೇ.

ಎಳೆ ವಯಸ್ಸಿನ ಇಬ್ಬನಿ.

ಆರಂಭದಿಂದಲೇ ಸಾಹಿತ್ಯ ಓದಿನ ಗೀಳಿದ್ದ ಶಿವಸ್ವಾಮಿಯವರು ಎಳೆವಯಸ್ಸಿನಲ್ಲಿರುವಾಗಲೇ ಸಾಕಷ್ಟು ಪುಸ್ತಕಗಳನ್ನು ಓದಿ ತಾನು ಕೂಡ ಸಾಹಿತಿಯಾಗಬೇಕೆಂಬ ಕನಸು ಕಂಡವರು. ಆವಾಗಲೇ ಅವರು ತಮ್ಮ ಸ್ವಂತ ಹಸ್ತಾಕ್ಷರಗಳಲ್ಲಿ ಬರೆದ ಸಾಹಿತ್ಯದ ಪಟ್ಟಿ ಹೀಗಿದೆ.

೧. ೫೦ಕ್ಕೂ ಹೆಚ್ಚು ಕವಿತೆಗಳು.

೨. ಕರಗದ ಕಂಬನಿ (೧೦೦ ಪುಟಗಳ ಕಾದಂಬರಿ).

೩. ನನ್ನ ಕರ್ತವ್ಯ (೧೫೦ ಪುಟಗಳ ಕಾದಂಬರಿ).

೪. ಸರೋವರದ ಹತ್ತಿರ (ಸಾಮಾಜಿಕ ನಾಟಕ).

೫. ಮೂರು ಸೂತ್ರಗಳು – ೧೯೮೩–೮೪ (ಬಾನುಲಿ ನಾಟಕ).

೬. ಮಳೆ ಹನಿಗಳು (ಕಿರು ಲೇಖನಗಳ ಸಂಗ್ರಹ).

ಇವುಗಳಲ್ಲಿ ಸಾಕಷ್ಟು ಕಾಲನ ಕೈಗೆ ಸಿಕ್ಕು ಹಾಳಾಗಿವೆ. ದೃಷ್ಟಿಯನ್ನೇ ಕಳೆದುಕೊಂಡ ನಾನು ಅವುಗಳನ್ನು ಅಷ್ಟಾಗಿ ಕಾಪಾಡಿಕೊಳ್ಳಲಿಲ್ಲ ಎಂಬಲ್ಲಿ ಅವರ ಮಾತುಗಳು ಭಾರವಾಗುತ್ತವೆ. ಹೇಗೋ ಉಳಿದುಕೊಂಡು ಬಂದ ಒಂದಿಷ್ಟು ಬರಹಗಳನ್ನು ಈ ಪುಸ್ತಕದ ಕೊನೆಗೆ ನೀಡಲಾಗಿದೆ.

ಶಿವಸ್ವಾಮಿಯವರು ೯ನೇ ತರಗತಿಯಲ್ಲಿ ಓದುವಾಗ ತಾಲ್ಲೂಕು ಮಟ್ಟದ ಪ್ರಬಂಧ ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರಥಮ ಸ್ಥಾನ ಪಡೆದಿದ್ದರು. ಇದು ಅವರ ಜೀವನದ ಮೊದಲ ಸಾರ್ವಜನಿಕ ಸ್ಪರ್ಧೆಯ ಗೆಲುವಾಗಿತ್ತು. ಅದಕ್ಕೆ ಸ್ಫೂರ್ತಿಯಾದವರು ಶ್ರೀ ರಾಚಯ್ಯ ಸ್ವಾಮಿ ಧನಾಶ್ರೀ ಅವರು ಹಾಗೂ ಅವರ ಪ್ರೌಢ ಶಾಲಾ ಶಿಕ್ಷಕರಾಗಿದ್ದ ಶ್ರೀ ಬಿ.ಎಸ್. ಖೂಬಾರವರು. ಮುಂದೆ ಇರ್ವರೂ ಜಿಲ್ಲೆಯ ಹಿರಿಯ ಸಾಹಿತಿಗಳಾಗಿ ಗುರುತಿಸಿಕೊಂಡವರು. ಸಾಹಿತ್ಯದ ಬಗೆಗೆ, ಸ್ಪರ್ಧೆಗಳಲ್ಲಿ ಭಾಗವಹಿಸುವ ಬಗೆಗೆ ನನ್ನಲ್ಲಿ ಕನಸುಗಳನ್ನು ಬಿತ್ತುವಲ್ಲಿ ಇವರು ಪ್ರಮುಖರಾಗಿದ್ದರೆ, ದೇಶದ ಬಗ್ಗೆ ಅಭಿಮಾನ, ಪ್ರೀತಿ, ಗೌರವಾದರಗಳು ಬೆಳೆಯುವಲ್ಲಿ ಪ್ರೇರೇಪಿಸಿದವರು ಸಮಾಜ ವಿಜ್ಞಾನ ಶಿಕ್ಷಕರಾದ ಶ್ರೀ ಟಿ. ಗುರಪ್ಪನವರು

ಎಂದು ಶಿವಸ್ವಾಮಿಯವರು ನೆನಪಿಸಿಕೊಳ್ಳುತ್ತಾರೆ. ಮೂಲತಃ ಚಿತ್ರಕಲಾ ಶಿಕ್ಷಕರಾಗಿದ್ದ ಹಾಗೂ ಅತ್ಯಂತ ರಸಪೂರ್ಣವಾಗಿ ಹಿಂದಿ ಪಾಠ ಬೋಧಿಸುತ್ತಿದ್ದ ಶ್ರೀ ಬಸವರಾಜ ಸ್ವಾಮಿ ಅವರು ಮಕ್ಕಳಲ್ಲಿ ಜೀವನೋತ್ಸಾಹವನ್ನು ತುಂಬುತ್ತಿದ್ದರಂತೆ. ಇವರು ಅಂದಿನ ಆರ್ಯ ಸಮಾಜದ ಸಕ್ರಿಯ ಕಾರ್ಯಕರ್ತರಾಗಿದ್ದವರು ಮತ್ತು ಸ್ವಾತಂತ್ರ್ಯ ಸೇನಾನಿಗಳಾಗಿದ್ದರು. ಅವರ ಬದುಕೇ ಮಕ್ಕಳಿಗೆಲ್ಲ ರಸಕಾವ್ಯವಾಗಿತ್ತು. ಶ್ರೀ ಅಣ್ಣಪ್ಪ ಬಿದ್ರಿ ಎಂಬುವವರು ಆಂಗ್ಲ ಭಾಷೆಯನ್ನು ಬೋಧಿಸುತ್ತಿದ್ದರಂತೆ. ಇವರೆಲ್ಲರ ಪ್ರಭಾವಳಿಯ ಒಟ್ಟು ಮೊತ್ತವೆ ನಾನೀಗ ಎಂಬುದನ್ನು ಹೇಳಲು ಶಿವಸ್ವಾಮಿಯವರು ಮರೆಯುವುದಿಲ್ಲ. ಈ ಹೊತ್ತಿಗೆ ತಂದೆ ತಾಯಿಗಳ ಬಗ್ಗೆ ಅವರಲ್ಲಿ ಅಪಾರ ಶ್ರದ್ಧೆ ಮತ್ತು ಭಕ್ತಿ ಗೌರವಾದರಗಳನ್ನು ಮೂಡಿಸಿದ್ದು ಶ್ರೀ ಸಿದ್ಧಯ್ಯ ಒಡೆಯರ್ ಎಂಬ ಶಿಕ್ಷಕರು. ಪ್ರೌಢಶಾಲಾ ಸಂದರ್ಭದಲ್ಲಿ ಪರೋಕ್ಷವಾಗಿ ಇವರೆಲ್ಲ ಶಿವಸ್ವಾಮಿಯವರ ಜೀವನದ ಮೇಲೆ ಗಾಢವಾದ ಪರಿಣಾಮಗಳನ್ನು ಬೀರಿದ್ದಾರೆ.

ತಾಲ್ಲೂಕು ಪ್ರಬಂಧ ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರಥಮ ಸ್ಥಾನ ಪಡೆದಿದ್ದು ಶಿವಸ್ವಾಮಿಯುವರ ಜೀವನದ ತಿರುವು ಎಂದೇ ಪರಿಗಣಿಸಬೇಕಾಗುತ್ತದೆ. ಆ ವಯಸ್ಸಿಗೆ ಹಳ್ಳಿಗಾಡಿನಿಂದ ಬಂದ ಹುಡುಗನೊಬ್ಬ ತಾಲ್ಲೂಕು ಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸುವುದೆ ವಿರಳವಾಗಿರುವಾಗ, ಇವರು ಭಾಗವಹಿಸಿ ಮೊದಲಿಗರಾಗಿ ಆಯ್ಕೆಯಾದ ಮೇಲೆ ಕುಟುಂಬದಲ್ಲಿ, ಊರಲ್ಲಿ ಹಾಗೂ ಸಹೃದಯರಲ್ಲಿ ಇವರನ್ನು ನೋಡುವ ದೃಷ್ಟಿಕೋನ ಬದಲಾದ ಬಗೆಯನ್ನು ಇವರು ಕಂಡುಕೊಳ್ಳುತ್ತಾರೆ. ಆಗ ಸಿಕ್ಕ ಪ್ರೀತಿ ಗೌರವಾದರಗಳು ಇವರಲ್ಲಿ ಹೊಸ ಹೊಳಹು, ಹುಮ್ಮಸ್ಸುಗಳನ್ನು ಹುಟ್ಟುಹಾಕುತ್ತದೆ. ಬದುಕಿನಲ್ಲಿ ಶಿವಸ್ವಾಮಿಯವರು ಈ ಮಾದರಿಯಲ್ಲಿ ಏನಾದರೂ ಸಾಧಿಸಲೇಬೇಕು ಎಂಬ ದೃಢಸಂಕಲ್ಪ ತೊಟ್ಟಿದ್ದು ಆಗಲೇ. ಅದನ್ನವರೀಗ ತುಂಬಾ ವಿನಮ್ರತೆಯಿಂದಲೇ ಹೇಳಿಕೊಳ್ಳುತ್ತಾರೆ.

ಹೊರಗಣ್ಣು ಹೋಯ್ತು ಒಳಗಣ್ಣು ತೆರಿತು.

ಬಾಲ್ಯದಿಂದಲೆ ಅಂಟಿಕೊಂಡಿದ್ದ ಓದಿನ ಹವ್ಯಾಸ ಅವರೊಂದಿಗೆ ಬೆಳೆಯಿತು. ಆ ದಿನಗಳಲ್ಲಿ ಸಾಹಿತ್ಯದ ಓದು ಅವರಿಗೆ ಪ್ರಿಯವಾದ ವಿಷಯವಾಗಿತ್ತು. ಸಂಪರ್ಕಕ್ಕೆ ಬಂದವರಿಂದೆಲ್ಲ ಸಾಹಿತ್ಯದ ಪುಸ್ತಕಗಳನ್ನು ಪಡೆದು ಓದುವುದು, ವಾರಗಿಯರ ಜೊತೆಗೆ ಆ ಬಗೆಗೆ ಚರ್ಚಿಸುವುದು ಸಾಮಾನ್ಯವಾದ ದಿನಚರಿಯಾಗಿತ್ತು. ಹೀಗೆ ಎಲ್ಲವು ಸರಾಗವಾಗಿ ನಡೆಯುತ್ತಿರುವಾಗಲೇ ಜೀವನಕ್ಕೆ ಆಘಾತವೊಂದು ಎದುರಾಯಿತು. ಸಾಕಷ್ಟು ಗ್ರಂಥಗಳನ್ನು ಓದಿ ಸಾಹಿತಿಯಾಗಬೇಕು ಎಂಬ ಹಂಬಲದಿಂದ ಹೊರಟ ಅವರಿಗೆ ಪ್ರೌಢ ಶಾಲೆಯಲ್ಲಿರುವಾಗಲೇ ದೃಷ್ಟಿದೋಷ ಆರಂಭವಾಯಿತು. ಸಣ್ಣದಾಗಿ ಆರಂಭವಾದ ಸಮಸ್ಯೆ ಬರುಬರುತ್ತಾ ಓದುವುದೇ ಕಷ್ಟ ಎಂಬಲ್ಲಿಗೆ ಬಂದು ನಿಂತಿತು. ಅಕ್ಷರಗಳು ಕಾಣದೇ ಇದ್ದಾಗ ಹೆಚ್ಚು ಬೆಳಕು ಕೊಡುವ ಬಲ್ಬ್‌ಗಳ ಕೆಳಗಡೆ ಕುಳಿತು ಒಂದಿಷ್ಟು ದಿನ ಓದಲು ಆರಂಭಿಸಿದರು. ಕೆಲ ತಿಂಗಳುಗಳ ಕಾಲ ಹೀಗೆಯೇ ನಡೆಯಿತು. ನಂತರ ಮುಂದೆ ಓದಲು ಸಾಧ್ಯವಾಗದ ಸ್ಥಿತಿ ತಲುಪಿದರು. ಆಗ ಓದು ನಿಲ್ಲಿಸಿ ಕಂಡಷ್ಟು ಏನಾದರೂ ಬರೆಯಲು ಆರಂಭಿಸಿದರು. ಪೆನ್ನಿನ ಅಕ್ಷರಗಳೂ ಕಾಣದಿದ್ದಾಗ ಸ್ಕೆಚ್ ಪೆನ್ನುಗಳಿಂದ ದಪ್ಪವಾಗಿ ಬರೆದು ಓದಲು ಪ್ರಯತ್ನಿಸುತ್ತಿದ್ದರು. ಕೊನೆಗೆ ಒಂದಿಷ್ಟು ದೃಷ್ಟಿ ಇದ್ದರೂ ಸಾಕು ಎಂಬಲ್ಲಿಗೆ ಬದುಕು ಬಂದು ನಿಂತಿತು. ಆದರೆ ಅಂದುಕೊಂಡಿದ್ದು ಯಾವುದೂ ಆಗುವುದಿಲ್ಲವಲ್ಲ. ಮುಂದೆ ಈ ಸಮಸ್ಯೆ ಆರಂಭವಾದ ಕೇವಲ ೩-೪ ವರ್ಷಗಳಲ್ಲಿ ಅವರ ದೃಷ್ಟಿ ಸಂಪೂರ್ಣವಾಗಿ ಕಳೆಗುಂದಿ ಮಂದವಾಗಿ ಹೋಯಿತು. ಮುಂದೆ ಕಣ್ಣುಗಳು ಕ್ರಮೇಣ ಓದು ಬರಹಕ್ಕೆ ಬಾರದಂತಾದವು. ಓದು-ಬರಹ ಅವರ ಬದುಕಿನ ಅನ್ನ. ಜೀವಿತದ ಹಿರಿಯಾಸೆ ಆಗಿತ್ತು. ಆದರೆ ವಿಧಿ ಅದಕ್ಕೆ ಅವಕಾಶ ಕೊಡಲಿಲ್ಲ. 'ಮನಷ್ಯ ಸಂಬಂಧಿತ ಸಮಸ್ಯೆಗಳನ್ನು ದಿಟ್ಟತನದಿಂದ ಎದುರಿಸಿ ಮೆಟ್ಟಿನಿಲ್ಲಬಲ್ಲ ಸಾಮರ್ಥ್ಯ ನನ್ನಲ್ಲಿತ್ತು. ಆದರೆ ದೈವ ಸಂಕಲ್ಪದೆದುರು ನಾನು ಸೋತು ಹತಾಶನಾದೆ' ಎಂಬ ಅವರ

ಮಾತು ಅವರ ಪರಿಸ್ಥಿತಿಗೆ ಹಿಡಿದ ಕೈಗನ್ನಡಿಯಾಗಿದೆ. ಆ ಹೊತ್ತಲ್ಲಿ ಅವರಿಗೆ ಮುಂದೆ ಏನು ಮಾಡುವುದು ಎಂಬುದೇ ತೋಚದಾಯಿತು.

ಓದಲು ಬರೆಯಲು ಕೂಡ ಪರಾವಲಂಬಿಯಾದ ಅವರು ಹೊಸ ಬಗೆಯ ಬದುಕನ್ನು ರೂಢಿಸಿಕೊಳ್ಳುವ ಅನಿವಾರ್ಯತೆಗೆ ಸಿಲುಕಿಕೊಂಡರು. ಈ ಸಂದರ್ಭದಲ್ಲಿ ಎದೆಗುಂದದೆ ಮುಂದಡಿ ಇಡಲೇಬೇಕಿತ್ತು. ಅದಕ್ಕವರು 'ನನ್ನ ನೋವಿಗೆ ಸ್ಪಂದಿಸಿದ ಧರ್ಮಗುರು ಬಸವಣ್ಣನವರೆ ನನ್ನ ಸ್ವಂತ ಕಣ್ಣುಗಳಾಗಿ ನನ್ನ ಬದುಕಿನಲ್ಲಿ ಪ್ರವೇಶಿಸಿದರು' ಎಂಬ ಮಾತು ಅವರಲ್ಲಿನ ಅಧ್ಯಾತ್ಮವನ್ನು ಹಾಗೂ ಮಾನಸಿಕ ಗಟ್ಟಿತನವನ್ನು ತೋರ್ಪಡಿಸುತ್ತದೆ. ಮುಂದೆ ಅವರ ಜೀವನವನ್ನು ಪ್ರವೇಶಿಸಿದ ಅವರ ಧರ್ಮಪತ್ನಿ ಶ್ರೀಮತಿ ಅರ್ಚನಾ ಅಕ್ಕನವರು ಸ್ವತಂತ್ರವಾಗಿ ಸಾಧಿಸುವಷ್ಟು ಅಲ್ಲದಿದ್ದರೂ, ಅವರ ಆಪೇಕ್ಷೆಗಳಿಗೆ ಪೂರಕವಾಗಿ, ಕನಸುಗಳಿಗೆ ನೀರೆರೆಯುವ ಶಕ್ತಿಯಾಗಿ ಅವರ ಬೆಂಬಲಕ್ಕೆ ನಿಂತರು. ಇದೆಲ್ಲಾ ಆ ಬಸವಾದಿ ಪ್ರಮಥರ ಕೃಪೆ ಎಂದು ಅವರಿಬ್ಬರು ಆ ದಿನಗಳನ್ನು ಸ್ಮರಿಸುತ್ತಾರೆ. ತಮ್ಮಲ್ಲಿಲ್ಲದ್ದನ್ನು ಇರುವಷ್ಟರಿಂದಲೇ ತುಂಬಿಕೊಂಡು ಬಾಳನ್ನು ಪೂರ್ಣಗೊಳಿಸಬೇಕಾಗುತ್ತದೆ. ಅದರಲ್ಲಿಯೂ ಮಾತೃಸ್ವರೂಪಿಯಾಗಿ ಜೊತೆ ಸಾಗುತ್ತಿರುವ ಮಡದಿಯ ವಾತ್ಸಲ್ಯ ಅಮೇಯವಾದದ್ದು. ಅದಕ್ಕೆ ಬೆಲೆಕಟ್ಟಲು ಸಾಧ್ಯವಿಲ್ಲ. ಅಂತಹ ಪ್ರೀತಿಗೆ ಪಾತ್ರವಾದ ಶಿವಸ್ವಾಮಿಯವರ ಭಾಗ್ಯಕ್ಕೆಣೆಯಿಲ್ಲ. ದೈವ ಸಹಾಯ ಯಾವ ಹೊತ್ತು ಹೇಗೆ ಬರುತ್ತದೆಂದು ಯಾರೂ ಹೇಳುವಂತಿಲ್ಲ. ಊರ ಗೆಳೆಯರು ಶಿವಸ್ವಾಮಿಯವರ ಆಸೆಗೆ, ಕಸುವಿಗೆ ಊರೆಯಾಗಿ ಒದಗಿದರು. ಶಿವಸ್ವಾಮಿಯವರ ಮುಂದಿನ ಬೆಳವಣಿಗೆಯ ಕುರುಹೆಲ್ಲ ಎಳೆತನದಲ್ಲಿಯೇ ಪ್ರಕಾಶನಕ್ಕೆ ಬಂದವು. ಓದಿನಲ್ಲಿ, ಪಠ್ಯೇತರ ಚಟುವಟಿಕೆಗಳಲ್ಲಿ ಅವರೆಂದೂ ಹಿಂದೆ ಬೀಳಲಿಲ್ಲ. ಸರಳ ಜೀವನವನ್ನು ಬಿಟ್ಟವರಲ್ಲ. ಗುರುಹಿರಿಯರಿಗೆ ತಿರುಮಂತ್ರವ ಕಲಿಸಿದವರಲ್ಲ.

ಸಾಹಿತ್ಯದ ಸೆಳೆತ.

ಸಾಹಿತ್ಯದ ಓದು ಒಂದೆಡೆ ಹಾಗೇ ಸಾಗುತ್ತಿತ್ತು. ಜೊತೆಗೆ ೯ನೇ ತರಗತಿಯಲ್ಲಿರುವಾಗ ಶಿವಸ್ವಾಮಿಯವರು ಸ್ವತಃ ತಾವೇ ಬರೆದ ಒಂದಿಷ್ಟು ಕವಿತೆಗಳನ್ನು ಪ್ರೊ. ಎಂ.ವಿ. ಸೀತಾರಾಮಯ್ಯನವರಿಗೆ ಕಳಿಸುತ್ತಾರೆ. ಅವರು ಕೂಡ ಅಷ್ಟೇ ತಾಳ್ಮೆಯಿಂದ ಅವುಗಳನ್ನು ಓದಿ ಮೆಚ್ಚಿ ಮಾರ್ಗದರ್ಶನ ಮಾಡಿ ಪತ್ರ ಬರೆದಿದ್ದರು. ಹಾಗೆಯೇ ೧೯೮೨ರಲ್ಲಿ ಖ್ಯಾತ ಕನ್ನಡ ನಾಟಕಕಾರರಾದ ಶ್ರೀ ಎಸ್.ವಿ. ಪಾಟೀಲರು ಕೂಡ ಇವರ ಸಾಹಿತ್ಯಾಸಕ್ತಿಗೆ ಪ್ರೇರಕವಾಗಿ ಇವರಿಗೆ ೨ ಪತ್ರಗಳನ್ನು ಬರೆದಿದ್ದರು. ಆ ಸಣ್ಣ ವಯಸ್ಸಿಗೆ ಸಾಹಿತ್ಯದ ಓದು, ಕವಿತೆಗಳನ್ನು ಬರೆಯುವುದು ಮತ್ತು ಅವುಗಳನ್ನು ಅಂದಿನ ಕಾಲಕ್ಕೆ ಪ್ರಸಿದ್ಧ ಸಾಹಿತಿಗಳಿಗೆ ಕಳಿಸಿ ಅಭಿಪ್ರಾಯಗಳನ್ನು ಕೇಳುವುದೆಲ್ಲಾ ಒಂದು ರೀತಿಯಲ್ಲಿ ಸಂದರ್ಭೋಚಿತವಾಗಿ ನಡೆದುಕೊಂಡು ಬಂದಿದೆ. ಸಂತಜೀವನಕ್ಕೆ ಈ ಕುತೂಹಲಕಾರಿ ನಡೆ ಆಶ್ಚರ್ಯವಾದುದ್ದೇನಲ್ಲ. ಆಂತರ್ಯ ಶಕ್ತಿಯೊಂದು ಅವರಲ್ಲಿ ಬಾಲ್ಯದಿಂದಲೇ ಹರಿಯುತ್ತಿತ್ತು. ಕಾಲಕಾಲಕ್ಕೆ ಸಂದರ್ಭೋಚಿತವಾಗಿ ಅದಕ್ಕೆ ನೀರೆರೆಯುವ ಕೆಲಸ ಸಮುದಾಯದಿಂದಾಗಬೇಕಿತ್ತಷ್ಟೇ. ಈ ಪರಿಯ ಅಮೃತವಾಹಿನಿಯೊಂದು ಹಳ್ಳಿಗಾಡಿನಲ್ಲಿ ಎದೆಯಿಂದ ಎದೆಗೆ ಹರಿದ ವಾರಸುದಾರಿಕೆಯ ಪಳಯುಳಿಕೆಯನ್ನು ನಾನು ಶಿವಸ್ವಾಮಿ ಚೀನಕೇರಿ ಅವರಲ್ಲಿ ಕಂಡಿದ್ದೇನೆ.

ಹಳ್ಳಿ ಬದುಕಿನ ಮಕ್ಕಳ ಜೀವನದಲ್ಲಿ ಅಜ್ಜಿ ಮನೆ ಎಂಬುದೊಂದು ಚರಿತ್ರಾರ್ಹ ಘಟ್ಟ. ಅದೊಂದು ಮಕ್ಕಳ ಗರಡಿ ಮನೆ ಇದ್ದಂತೆ. ಅಜ್ಜಿ ಮನೆಯಲ್ಲಿ ಬೆಳೆದ ಮಕ್ಕಳು ಆ ಸಂದರ್ಭಗಳನ್ನು ತಮ್ಮ ಜೀವನದುದ್ದಕ್ಕೂ ನೆನಪಿಸಿಕೊಳ್ಳುತ್ತಾರೆ. ಶಾಲೆಗಳು ಮುಗಿದ ಬಳಿಕ ಆಧುನಿಕವಾಗಿ ನಾವೀಗ 'ಸಮ್ಮರ್ ಕ್ಲಾಸ್'ಗಳು ಎಂದು ಕರೆಯುತ್ತಿರುವುದನ್ನು ನಮ್ಮ ಹಳ್ಳಿಯ ಜನ ಅಜ್ಜಿಯ ಮನೆಗಳನ್ನೇ 'ಸಮ್ಮರ್ ಕ್ಲಾಸ್'ಗಳಾಗಿ ಕಂಡುಕೊಂಡಿದ್ದರು ಎನಿಸುತ್ತದೆ. ಆಗೆಲ್ಲ ಶಾಲೆಗಳಿಗೆ ರಜೆ ಎಂದಾಕ್ಷಣ ಮಕ್ಕಳೆಲ್ಲ ತಮ್ಮ

ತಮ್ಮ ಅಜ್ಜಿಯ ಮನೆಗಳಿಗೆ ಹೋಗುವ ಧಾವಂತದಲ್ಲಿರುತ್ತಿದ್ದರು. ಅಂತೆಯೇ ಶಿವಸ್ವಾಮಿ ಅವರು ಕೂಡ ಧುಮ್ಮನಸೂರಿನಲ್ಲಿರುವ ತಮ್ಮ ತಾಯಿಯ ತವರು ಮನೆಗೆ ಹೀಗೆ ತೆರಳಿದ್ದುಂಟು.

೧೯೭೯-೮೦ರ ದಶಕದಲ್ಲಿ ಅವರು ಧುಮ್ಮನಸೂರಿನ ತಮ್ಮ ಅಜ್ಜಿಯ ಮನೆಗೆ ಹೋದಾಗಿನ ಸಂದರ್ಭ ಒಂದನ್ನು ಹೀಗೆ ನೆನಪಿಸಿಕೊಳ್ಳುತ್ತಾರೆ. 'ಅಜ್ಜಿಯ ಮನೆಯ ಪಕ್ಕದಲ್ಲಿದ್ದ ಶ್ರೀ ಮುರಳಿಧರ ಕುಲಕರ್ಣಿಯವರು ನಿಯಮಿತವಾಗಿ ತರಂಗ, ಸುಧಾ, ತುಷಾರ ಪತ್ರಿಕೆಗಳನ್ನು ಓದುತ್ತಿದ್ದರು. ಅವರು ಓದಿ ಮುಗಿಸಿದ ಬಳಿಕ ಅವುಗಳನ್ನು ಓದುವಂತೆ ನನಗೆ ಕೊಡುತ್ತಿದ್ದರು. ನನಗಿಂತ ಒಂದು ತರಗತಿ ಮುಂದೆ ಇದ್ದ ಅವರು ಆಗಲೇ ಸಣ್ಣ-ಪುಟ್ಟ ಕವನಗಳನ್ನು ಬರೆದು ಪತ್ರಿಕೆಗಳಿಗೆ ಕಳಿಸುತ್ತಿದ್ದರು. ಅದನ್ನು ನೋಡಿದ ನನಗೂ ಕವನಗಳನ್ನು ಬರೆಯುವ ಆಸೆ ಚಿಗುರೊಡೆಯಿತು'. ಈ ಸಂದರ್ಭದಲ್ಲಿ ರಷ್ಯಾ ಕ್ರಾಂತಿಗೆ ಸಂಬಂಧಿಸಿದ ಕನ್ನಡಸುವಾದ 'ತಾಯಿ' (ಮೂಲ-ಮ್ಯಾಕ್ಸಿಂ ಗಾರ್ಕಿ) ಕಾದಂಬರಿ ಓದಿದ ಮೇಲೆ ಶಿವಸ್ವಾಮಿ ಅವರಲ್ಲಿ ಹೋರಾಟದ ಮನೋಭಾವ ಬೆಳೆಯಿತು. ಮ್ಯಾಕ್ಸಿಂಗಾರ್ಕಿ ಅವರು ತಮ್ಮ ಕಾದಂಬರಿಯಲ್ಲಿ ಬಡತನ, ಹಸಿವು ಮತ್ತು ರೋಗ ಇವೇ ಈಗ ನಮ್ಮ ಜನರಿಗೆ ಸಿಗುತ್ತಿರುವ ಕೆಲಸಕ್ಕೆ ಪ್ರತಿಯಾದ ಪ್ರತಿಫಲ ಎಂಬುದನ್ನು ಅಂದೇ ಗ್ರಹಿಸಿದ್ದರು. ಜೀವಮಾನವೆಲ್ಲವೂ ಕಟ್ಟಿದ ನಾಯಿಯಂತೆ ಅಜ್ಞಾನದಲ್ಲಿ, ದುಡಿಮೆಯಲ್ಲಿ ಜನ ಜೀವನ ಸವೆಸುವುದರ ಬಗ್ಗೆ ಅವರು ಮಾಡಿದ ವಿಶ್ಲೇಷಣೆ ಶಿವಸ್ವಾಮಿ ಅವರ ಮೇಲೆ ಗಾಢವಾದ ಪರಿಣಾಮವನ್ನು ಬೀರಿತು. ಮುಂದೆ ಅದು ವಚನ ಸಾಹಿತ್ಯದ ಓದು ಮತ್ತು ಸಂಪರ್ಕದಿಂದಾಗಿ ಮತ್ತಷ್ಟು ಗಟ್ಟಿ ಹಾಗೂ ತೀವ್ರವಾಯಿತು. ಮುಂದೆ ೧೯೮೪-೮೫ರಲ್ಲಿ ಇವರಿಗೆ ಪ್ರಾಥಮಿಕ ಶಾಲಾ ಶಿಕ್ಷಕರಾಗಿದ್ದ ಶ್ರೀ ಕಲ್ಲಪ್ಪ ದೇವಣೆಯವರು ಧಾರವಾಡದಿಂದ ಪ್ರಕಟಗೊಳ್ಳುತ್ತಿದ್ದ 'ಶಿವಾನುಭಾವ' ಪತ್ರಿಕೆಯನ್ನು ಓದಲು ನೀಡಿದರು. ಅದು ಕೂಡ ಶಿವಸ್ವಾಮಿಯವರಲ್ಲಿ ಸಾಹಿತ್ಯದ ಬಗೆಗಿನ ಆಸಕ್ತಿಯನ್ನು

ಊರ್ಜಿತಗೊಳಿಸಿತು ಎನ್ನಬಹುದು. ಜೊತೆಗೆ ಅವರಲ್ಲೊಬ್ಬ ಸಂತನಿರುವ ಬಗೆಯನ್ನು ಇದು ಮೊದಲ ಬಾರಿಗೆ ಪ್ರಕಟಿಸಲು ಅನುವು ಮಾಡಿಕೊಟ್ಟಿತ್ತು.

ಬೇಂದ್ರೆ ಅಜ್ಜ ಹೇಳಿದಂತೆ 'ಹುಚ್ಚು ಕೋಡಿ ಮನಸ್ಸು, ಅದು ಹದಿನಾರರ ವಯಸ್ಸು' ಎಂಬಂತೆ ಇವರು ಮನಸ್ಸು ಕೂಡ ಒಂದೇ ವಿಷಯದಲ್ಲಿ, ಒಂದೇ ಗುರಿಯೆಡೆಗೆ ತುಡಿದಂತೆ ಆ ಕಾಲಕ್ಕೆ ಕಾಣುವುದಿಲ್ಲ. ಒಮ್ಮೆ ಸಾಹಿತ್ಯದ ವಿದ್ಯಾರ್ಥಿಯಾಗಬಯಸುವ ಮನಸ್ಸು, ಇನ್ನೊಮ್ಮೆ ಏಕಾಂತದಲ್ಲಿ ಧ್ಯಾನಿಸುವ ಮನಸ್ಥಿತಿಯಾಗಿ ಬದಲಾಗುತ್ತದೆ. ಬೆಳೆಯುವ ವಯಸ್ಸಿಗೆ ಬೆಂದಕಾಳಂತೆ ಧ್ಯಾನಿಸುವ ಜಗತ್ತನ್ನು ಪ್ರವೇಶಿಸುವ ಮನಸ್ಸಿನ ತೊಳಲಾಟವನ್ನು ನಾವಿಲ್ಲಿ ಗಮನಿಸಬಹುದು. ಮುಂದೆ ಒಮ್ಮೆ ಇವರು ಜಗತ್ತಿನ ಮೊದಲ ಶಿಖರಗಾಮಿ ತೇನ್‌ಸಿಂಗ್ ನೋರ್ಗೆಯವರ ಸಾಹಸಗಾಥೆಯನ್ನು ಕೇಳಿ ಅವರಂತೆ ಪರ್ವತಾರೋಹಿಯಾಗಬೇಕೆಂಬ ಅದಮ್ಯ ಬಯಕೆಯನ್ನು ಹುಟ್ಟಿಸಿಕೊಂಡರು. ಈತ ೨೦ನೇ ಶತಮಾನದ ಅತ್ಯಂತ ಪ್ರಭಾವಶಾಲಿ ವ್ಯಕ್ತಿ. ಎಡ್ಮಂಡ್ ಹಿಲರಿ ಹಾಗೂ ಗೌರಿಶಿಖರಗಳನ್ನು ಹತ್ತಿದ ಮೊದಲಿಗ. ಈ ನೇಪಾಳದ ಸಾಧಕ ಚೀನಕೇರಾದ ಪಾತಾಳ ಹುಡುಗನಿಗೆ ಪ್ರೇರಣೆ. ಆಸೆಗಣ್ಣಿಗೆ ದೃಷ್ಟಿ ಬೇಕಿಲ್ಲ; ಕನಸುಗಳು ಬೇಕಷ್ಟೆ. ಕಸುವು ತಾನಾಗಿಯೇ ಹುಟ್ಟಿಕೊಳ್ಳುತ್ತದೆ. ಅವರೇ ಹೇಳುವಂತೆ ೧೯೮೨-೮೩ರ ಸುಮಾರಿಗೆ ಆಗ ಅವರ ಮುಂದೆ ಎರಡು ಪ್ರಮುಖ ಗುರಿಗಳು ಗಟ್ಟಿಯಾಗಿ ಎದುರುಗೊಂಡಿದ್ದವಂತೆ. "ಒಂದು ಬುದ್ಧ, ಮಹಾವೀರರಂತೆ ಮಹಾ ತಪಸ್ವಿಯಾಗುವುದು, ಎರಡನೆಯದು ತೇನ್‌ಸಿಂಗರಂತೆ ಪರ್ವತಾರೋಹಿಯಾಗುವುದು".

ಧರ್ಮಸಂಕರ.

ಈ ಮೊದಲೇ ಸೂಚ್ಯವಾಗಿ ತಿಳಿಸಿದಂತೆ ಆರಂಭದಲ್ಲಿ ಅವರ ಮನಸ್ಸು ಒಂದೇ ವಿಷಯಕ್ಕೆ ನಿಲ್ಲದ ತೊಳಲಾಟದಲ್ಲಿರುವುದನ್ನು ಗಮನಿಸಿದ್ದೇವೆ. ಮೇಲಾಗಿ ಸಾಹಿತ್ಯಕ್ಕಿಂತ ಹೆಚ್ಚಾಗಿ ಅವರ ಮನಸ್ಸು ಅಧ್ಯಾತ್ಮದ ಕಡೆಗೆ ವಾಲಿತ್ತು. ಎಷ್ಟೆಂದರೆ ತಪಸ್ಸು ಮಾಡಲೇಬೇಕೆಂಬ ಉತ್ಕಟ ಆಕಾಂಕ್ಷೆಯಿಂದಾಗಿ ಕಂಡಕಂಡ ಸಾಧು-ಸಂತರನ್ನು ಭೇಟಿ ಮಾಡುವುದು, ಅವರೊಂದಿಗೆ ತಪಸ್ಸಿನ ಬಗ್ಗೆ, ಅಧ್ಯಾತ್ಮದ ಬಗ್ಗೆ ಚರ್ಚಿಸುವುದು ನಡೆಯಿತು. ಮಾತಿಗೆ ಸಿಕ್ಕ ಸಾಧು-ಸಂತರ ಜೀವನ ವಿಧಾನವನ್ನು ಅರಿಯುವ ಪ್ರಕ್ರಿಯೆ ಆರಂಭವಾಯಿತು. ಒಮ್ಮೆ 'ರಾಂಪುರ'ದಲ್ಲಿರುವ ದೇವಸ್ಥಾನಕ್ಕೆ ಹೋದಾಗ ಮಂದಿರದ ಎಡಭಾಗದಲ್ಲಿ ಒಂದು ಚಿಕ್ಕ ಗುಹೆ ಇರುವುದನ್ನು ಕಂಡರು. ಆ ಗುಹೆಯಲ್ಲಿ ಓರ್ವ ಸಂತ ಧ್ಯಾನಿಸುತ್ತಿರುವುದನ್ನು ಕಂಡು ಅವರ ಹತ್ತಿರ ಸುಮಾರು ಒಂದು ಗಂಟೆಗಳ ಕಾಲ ತಪಸ್ಸನ್ನಾಚರಿಸುವ ಬಗೆ ಹಾಗೂ ಅದರಿಂದಾಗಬಹುದಾದ ಎಡರು-ತೊಡರುಗಳ ಬಗ್ಗೆ ಚರ್ಚಿಸಿದರು.

ಮುಂದೆ ೧೯೮೪-೮೫ರಲ್ಲಿ ಶಿವಸ್ವಾಮಿ ಅವರಿಗೆ ಚೀನಕೇರಾದಲ್ಲಿರುವ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದ ಶ್ರೀ ಕಲ್ಲಪ್ಪ ದೇವಣಿ ಅವರ ಪರಿಚಯವಾಗುತ್ತದೆ. ಅವರು ಇವರಲ್ಲಿನ ಸಾಹಿತ್ಯದ ಓದಿನ ಆಸಕ್ತಿಯನ್ನು ಗಮನಿಸಿ ಧಾರವಾಡದಿಂದ ಪ್ರಕಟವಾಗುತ್ತಿದ್ದ 'ಶಿವಾನುಭವ' ಮಾಸಪತ್ರಿಕೆಯನ್ನು ಓದಲು ಕೊಟ್ಟರು. ಸುಮಾರು ತಿಂಗಳುಗಳ ಕಾಲ ಹೀಗೆಯೇ ನಡೆಯಿತು. ಶ್ರೀ ಕಲ್ಲಪ್ಪ ದೇವಣಿ ಅವರೊಂದಿಗಿನ ಮಾತುಕತೆ, ಚರ್ಚೆಗಳಲ್ಲಿ ಭಾಗವಹಿಸುವುದರ ಪ್ರತಿಫಲವಾಗಿ ಲಿಂಗಾಯತ ಧರ್ಮಗುರು ಬಸವಣ್ಣನವರ ಹಾಗೂ ಬಸವಾದಿ ಪ್ರಮಥರ ಪರಿಚಯ ಇವರಿಗಾಯಿತು. ದೇವಣಿಯವರ ಮಾತು, ಕೃತಿಯಿಂದಾಗಿ ಶಿವಸ್ವಾಮಿಯವರ ಮನಸ್ಸು ಸಂಪೂರ್ಣವಾಗಿ ೧೨ನೇ ಶತಮಾನದ ಶಿವಶರಣರ ತತ್ವ ಸಿದ್ಧಾಂತಗಳಿಗೆ ಮಾರು ಹೋಯಿತು.

ಮುಂದೆ ಶ್ರೀ ಕಲ್ಲಪ್ಪ ದೇವಣಿಯವರು ಚೀನಕೇರಾದಲ್ಲಿ ಸುಮಾರು ೩ ವರ್ಷಗಳ ಕಾಲ ಶ್ರಾವಣ ಮಾಸದಲ್ಲಿ ಪ್ರವಚನ ಮಾಡಿದರು. ಇದು ಶಿವಸ್ವಾಮಿಯವರ ಜೀವನದ ಎರಡನೇ ಘಟ್ಟ ಪ್ರಾರಂಭವಾದ ಕಾಲವಾಗಿತ್ತು. ಅವರ ಪ್ರವಚನಗಳು ಇವರ ಮನಸ್ಸಿನ ಮೇಲೆ ಎಲ್ಲಿಲ್ಲದ ಪ್ರಭಾವ ಬೀರಿ ಮನಸ್ಸೀಗ ಮೊದಲಿನ ತೊಳಲಾಟದಿಂದ ಬಿಡುಗಡೆ ಹೊಂದಿದ ಸ್ಥಿತಿಗೆ ಬಂದಿತು. ಜೊತೆಗೆ ಶಿವಸ್ವಾಮಿಯವರ ಇನ್ನು ಮುಂದಿನ ಜೀವನವೆಲ್ಲ ಶಿವಶರಣರ ಬಸವಾದಿ ಪ್ರಮಥರ ತತ್ವ ಸಿದ್ಧಾಂತಗಳ ಪಾಲನೆ–ಪ್ರಸರಣೆಗೆ ಮೀಸಲಾಯಿತು. ಶಿವಸ್ವಾಮಿಯವರು ಪೂರ್ವವನ್ನು ತೊರೆದು ಲಿಂಗಾಯತಕ್ಕೆ ಸಂಕರಗೊಂಡರು ಕೂಡ ಅನ್ಯಧರ್ಮಗಳನ್ನು, ನಂಬಿಕೆಗಳನ್ನು ಹಳಿದವರಲ್ಲ. ಜನರ ಮೌಢ್ಯಗಳನ್ನಷ್ಟೇ ಪ್ರಶ್ನಿಸಿದರು. ಲಿಂಗಾಯತವಾದ ಬಳಿಕವೂ ಸ್ವಜಾತಿ, ಧರ್ಮದವರಿಗಿಂತ ಅವರಿಗೆ ಅನ್ಯ ಧರ್ಮಗಳಿಂದ ದೊರೆತ ಪ್ರೀತ್ಯಾದರ ಕಡಿಮೆ ಏನಿಲ್ಲ. ನಾವು ಒಳ್ಳೆಯವರಾದರೆ ಲೋಕವೂ ಒಳ್ಳೆಯದಾಗಿರುತ್ತದೆ ಎಂಬುದು ಅವರ ಅನುಭವದ ಮಾತು. ಇದು ಶಿವಸ್ವಾಮಿಯವರ ಜೀವನದಲ್ಲಿ ನಿಜವಾಗಿದೆ.

೧೯೮೦ರಲ್ಲಿ ಶ್ರೀ ದೇವಣಿ ಕಲ್ಲಪ್ಪ ಗುರುಗಳಿಂದ ಶಿವಸ್ವಾಮಿಯವರು ಇಷ್ಟಲಿಂಗ ದೀಕ್ಷೆಯನ್ನು ಪಡೆದುಕೊಳ್ಳುವ ಮೂಲಕ ಬಸವಭಕ್ತರಾಗುತ್ತಾರೆ. ಮುಂದೆ ಗುರುಗಳಿಗೆ ಅತ್ಯಂತ ಪ್ರೀತಿಯ ಶಿಷ್ಯನಾಗಿ ಮಾರ್ಪಟ್ಟರು. ಅವರು ಊರೂರಿಗೆ ಹೋಗಿ ನೀಡುತ್ತಿದ್ದ ಪ್ರವಚನಗಳಿಗೆ ಜೊತೆಯಾಗಿ ಅವರೊಂದಿಗೆ ಓಡಾಡಲು ಆರಂಭಿಸಿದರು. ಗುರುಗಳೊಂದಿಗೆ ಸುತ್ತಲಿನ ಹಳ್ಳಿ ಹಳ್ಳಿಗಳಿಗೆ ಹೋಗಿ ಪ್ರವಚನಗಳನ್ನು ನೀಡಿದರು. ಮುಂದೆ ೧೯೮೦ರಲ್ಲಿ ಅಕ್ಟೋಬರ್ ೨ರಿಂದ ೨೨ರವರೆಗೆ ಕೂಡಲ ಸಂಗಮದಲ್ಲಿ ಶರಣೆ ಮಾತಾಜೀಯವರು ಸಂಘಟಿಸಿದ್ದ 'ಬಸವರಾಜದೇವರ ರಗಳೆ' ಎಂಬ ಪ್ರವಚನ ಮತ್ತು ಶರಣ ಸಿದ್ಧಾಂತಗಳ ಕುರಿತಾದ ೨೧ ದಿನಗಳ ಶಿಬಿರದಲ್ಲಿ ಪಾಲ್ಗೊಂಡು ಮತ್ತಷ್ಟು ಮೊಗದಷ್ಟು ಪರಿಪಕ್ವಗೊಂಡರು. ಇದೆಲ್ಲ ಅವರಲ್ಲಿ ಧಾರ್ಮಿಕ ಪರಿಪಕ್ವತೆಯನ್ನು ತಂದುಕೊಟ್ಟಿತು.

ಶಿವಸ್ವಾಮಿಯವರು ಬಾಲ್ಯಾವಸ್ಥೆ ಕಳೆದು ಪ್ರೌಢಾವಸ್ಥೆಗೆ ಕಾಲಿಡುವುದರ ಜೊತೆಗೆ ತಮ್ಮ ಪೂರ್ವಾಶ್ರಮವನ್ನು ತೊರೆದು, ಶ್ರೀ ಕಲ್ಲಪ್ಪ ದೇವಣೆ ಅವರಿಂದಾಗಿ ಬಸವಧರ್ಮ ಸ್ವೀಕರಿಸಿದರು. ಇವರ ಈ ನಡೆ ಗ್ರಾಮದ ಮೂಲಭೂತವಾದಿಗಳ ಹಾಗೂ ಮೇಲ್ವರ್ಗದವರ ಕಂಗಣ್ಣಿಗೆ ಗುರಿಯಾಯಿತು. ಜೊತೆಗೆ ಅವರ ಪೂರ್ವಾಶ್ರಮದ ಜಾತಿಯವರಿಗೂ ಇದು ಅಸಹನೆ ಉಂಟು ಮಾಡಿತು. ಪರಿಸ್ಥಿತಿ ಹೇಗಾಯಿತೆಂದರೆ "ಅವರದನ್ನು ಬಿಟ್ಟಿದ್ದಕ್ಕೆ ಅವರಿಗೆ ಕೋಪ, ಇವರದನ್ನು ಸ್ವೀಕರಿಸಿದಕ್ಕೆ ಇವರಿಗೆ ಅಸಹನೆ". ಎರಡು ಸಮುದಾಯಗಳಿಗೂ ಇವರು 'ದ್ವೈತ'ವಾಗಿ ಬಿಟ್ಟರು. ಅದಕ್ಕೆ ಕಾರಣವೆಂದರೆ ಅಂದಿನ ಜನರಲ್ಲಿದ್ದ ಅಜ್ಞಾನ ಮತ್ತು ಸಂಕುಚಿತ ಮನೋಭಾವವಷ್ಟೇ. ಇದರಿಂದಾಗಿ ಸುಮಾರು ಸಲ ಊರಿನವರು, ಚೂರು ಪಾರು ಧರ್ಮದ ತಿಳುವಳಿಕೆ ಹೊಂದಿದ್ದವರು ಇವರೊಂದಿಗೆ ಈ ಬಗ್ಗೆ ವಾದ ಮಾಡುತ್ತಿದ್ದರು; ಎಷ್ಟೋ ಸಲ ಅದು ವಿಕೋಪಕ್ಕೆ ಹೋದ ಉದಾಹರಣೆಗಳು ಇವೆ. 'ಯಾರೋ ಕೋಳಿಗೆ ಕೇಳಿದರಂತೆ ಜನ ಯಾಕೆ ನಿನ್ನನ್ನು ಬದುಕಲು ಬಿಡುತ್ತಿಲ್ಲವೆಂದು. ಅದಕ್ಕೆ ಕೋಳಿ, ಯಾರು ಜನರನ್ನು ಎಚ್ಚರಿಸುತ್ತಾರೋ ಅವರಿಗೆಲ್ಲಾ ಇದೇ ಗತಿ' ಎಂದು ಅವನಿಗೆ ಉತ್ತರಿಸಿತಂತೆ. ಭಾರತೀಯ ಸಂದರ್ಭದಲ್ಲಿನ ಎಲ್ಲ ಮಾದರಿಯ ಚಳುವಳಿಗಳಿಗೆ, ಹೋರಾಟಗಳಿಗೆ ಮತ್ತು ಹೋರಾಟಗಾರರಿಗೆ ಈ ಮಾತು ಅನ್ವಯಿಸುತ್ತದೆ.

'ಜಾತಿ ಎನ್ನುವುದು ದೇವ ನಿರ್ಮಿತವಲ್ಲ. ಅದು ಮಾನವ ಕಲ್ಪಿತ. ವ್ಯಕ್ತಿ ಉತ್ತಮ ಸಂಸ್ಕಾರವನ್ನು ಪಡೆಯುವ ಮೂಲಕ ಎಲ್ಲಾದರೂ ಹೇಗಾದರೂ ಬದುಕಬಹುದು' ಎಂದೆಲ್ಲಾ ಅವರು ಊರ ಜನರಿಗೆ ಸಾಕಷ್ಟು ತಿಳಿಹೇಳಿದರೂ ಕೂಡ ಅವರ ಮಾತನ್ನವರು ಕೇಳುವ ಸ್ಥಿತಿಯುಲ್ಲಿರಲಿಲ್ಲ. ಅವರ ಪ್ರತಿಯೊಂದು ಪ್ರಶ್ನೆಗಳಿಗೆ ಇವರು ಸಮಾಧಾನವಾಗಿಯೇ ಉತ್ತರಿಸಲು ಪ್ರಯತ್ನಿಸುತ್ತಿದ್ದರಾದರೂ ಅವರಿಗೆ ಮನದಟ್ಟು ಮಾಡಿಕೊಡಲು ಇವರಿಂದ ಸಾಧ್ಯವಾಗುತ್ತಿರಲಿಲ್ಲ. ಮೂಲತಃ

ಲಿಂಗಾಯಿತರಾಗಿದ್ದ ಇವರ ದೀಕ್ಷಾ ಗುರುಗಳಾದ ಶ್ರೀ ಕಲ್ಲಪ್ಪ ದೇವಣಿಯವರು ತಮ್ಮ ಪ್ರವಚನಗಳ ಬಗ್ಗೆ ಬಸವವಾದಿ ಶರಣರ ವಚನಗಳೊಂದಿಗೆ ಸ್ಪಷ್ಟೀಕರಣ ನೀಡುತ್ತಿದ್ದರು. ಆದರೆ ಗ್ರಾಮದವರಿಗೆ ಇವರ ಪೂರ್ವಾಶ್ರಯದವರಿಗೆ ಅದು ರುಚಿಸುತ್ತಿರಲಿಲ್ಲ. ಆದರೆ ಇವರು ಮಾತ್ರ ಅಪ್ಪ ಬಸವಣ್ಣನವರ ಆಶಯದಂತೆ 'ಹೊಕ್ಕಲ್ಲಿ ಹೊಕ್ಕು ನಿಮ್ಮೊಕ್ಕುದನುಂಬವನ ಕುಲವೇನೋ। ದೇವಾ ನೀನೊಲಿದವನ, ಸ್ವಾಮೀ ನೀ ಹಿಡಿದವನ ಕುಲವೇನೋ....' ಎಂಬಂತೆಯೇ ಬದುಕು ಸಾಗಿಸುತ್ತಿದ್ದಾರೆ.

ಇದೇ ಗುರುಗಳ ಪ್ರಯತ್ನದ ಪ್ರತಿಫಲವಾಗಿ ಇವರ ಆತ್ಮೀಯ ಗೆಳೆಯರಾದ ಆನಂದ ಸಿದ್ದಾಮಣಿ ಹಾಗೂ ಬಾಬುರವರು ಶೈವ ಸಂಪ್ರದಾಯವನ್ನು ತೊರೆದು ಬಸವಧರ್ಮವನ್ನು ಸ್ವೀಕರಿಸಿದರು. ಜೀವನೋಪಾಯಕ್ಕೆಂದು ಊರು ತೊರೆದು ಜಹೀರಾಬಾದಿನಲ್ಲಿ ವಾಸವಾಗಿರುವ ಶ್ರೀ ಪುಂಡಲೀಕ ರೆಡ್ಡಿಯೂ ಸಹ ಇಷ್ಟಲಿಂಗ ದೀಕ್ಷೆ ಪಡೆದು ಲಿಂಗಾಯತ ಪರಂಪರೆಯನ್ನು ಒಪ್ಪಿಕೊಂಡರು. ಒಂದು ಹಂತದಲ್ಲಿ ಚೀನಕೇರಾ ೧೨ನೇ ಶತಮಾನದ ಕಲ್ಯಾಣವನ್ನು ನೆನಪಿಸುವ ಚಟುವಟಿಕೆಗಳ ಆಗರವಾಗಿತ್ತು. ಅಂದಿನ ದಿನಕ್ಕೆ ಇದೆಲ್ಲಾ ರಾಜ್ಯದ ಉಳಿದ ಗ್ರಾಮಗಳ ಮಟ್ಟಕ್ಕೆ ಅಭೂತಪೂರ್ವ ಬದಲಾವಣೆ ಹಾಗೂ ಮಾದರಿ ನಡೆ ಎಂಬುದನ್ನು ಒಪ್ಪಿಕೊಳ್ಳಲೇಬೇಕು. ಓರ್ವ ಶಿಕ್ಷಕ ಮನಸ್ಸು ಮಾಡಿದರೆ ಗ್ರಾಮ ಮಟ್ಟದಲ್ಲಿ ಏನೆಲ್ಲಾ ಬದಲಾವಣೆಗಳನ್ನು ತರಬಲ್ಲನು ಎಂಬುದನ್ನು ಈ ಘಟನೆಗಳು ನಮಗೆ ಎದುರಾಗಿ ನಿಲ್ಲುತ್ತವೆ. ಇಂದು ಧರ್ಮ ಮತ್ತು ದೇವರು ಅಂದಿಗಿಂತ ಅಧಿಕ ಮಟ್ಟದಲ್ಲಿ ಸಂಕೀರ್ಣಗೊಂಡಿವೆ. ಅವರ ಪ್ರಯತ್ನಗಳನ್ನು ಇಂದಿನ ಈ ಸಂಕೀರ್ಣ ಸಮಾಜದಲ್ಲಿ ನಾವು ಊಹಿಸಿಕೊಳ್ಳಲು ಸಾಧ್ಯವಿಲ್ಲ. 'ಭಾರತೀಯ ಸಮಾಜವನ್ನು ಈ ಹಿಂದೆ ಹಾಳುಗೆಡವಿರುವ ಮತ್ತು ಇಂದಿಗೂ ಹಾಳುಗೆಡವುತ್ತಿರುವ ಎರಡು ಘಟಕಗಳೆಂದರೆ ಧರ್ಮ ಮತ್ತು ದೇವರು' ಎಂಬ ಹಿರಿಯ ಸಂಶೋಧಕ ಎಂ.ಎಂ. ಕಲಬುರ್ಗಿ ಅವರ ಮಾತು ಎಲ್ಲಾ ಕಾಲಕ್ಕೂ ನಿಜವೆನಿಸುತ್ತದೆ.

ಇವರ ತಂದೆಯ ಸಹೋದರರಲ್ಲಿ ೨ನೇ ಮತ್ತು ೪ನೆಯ ಸಹೋದರರಿಬ್ಬರೂ ಶಿವಸ್ವಾಮಿಯವರ ಈ ಧರ್ಮಸಂಕರವನ್ನು ಕಟುವಾಗಿ ವಿರೋಧಿಸಿದವರು. ಹಾಗೆ ನೋಡಿದರೆ ಆರಂಭದಲ್ಲಿ ಶಿವಸ್ವಾಮಿಯವರ ವಿಚಾರಗಳಿಗೆ ಬೆಂಬಲವಾಗಿ ನಿಂತಿದ್ದ ಇವರು ನಂತರ ಧರ್ಮಸಂಕರದಂತಹ ಕ್ರಾಂತಿಕಾರಿ ನಡೆಯನ್ನು ಸಹಿಸಿಕೊಳ್ಳಲಿಲ್ಲ. ಆರಂಭದಲ್ಲಿ ಇವನು ಬಸವಾದಿ ಶರಣರ ವಿಚಾರಗಳನ್ನು ಭಾಷಣಗಳಿಗೆ ಸೀಮಿತಗೊಳಿಸಿಕೊಂಡು ಹೀಗೆಯೇ ಬದುಕುತ್ತಾನೆ ಎಂದುಕೊಂಡಿದ್ದ ಅವರಿಗೆ ಶಿವಸ್ವಾಮಿಯವರ ಈ ನಡೆ ಸಹ್ಯವೆನಿಸಲಿಲ್ಲ. ಸ್ವಜಾತಿ ಜನರ ಹಾಗೂ ನೆಂಟರಿಷ್ಟರ ವಿರೋಧಗಳು ನಂತರ ಇದಕ್ಕೆ ಕೈಜೋಡಿಸಿದವು. ‘ಖ್ಚಿಜ ಈಡಿಜಜಜಠಟ ಣಠ ಟುತಜ ಛೆ ತಿಜ ತ್ಝು ಏ ಚಿಟತಿಚಿಥಿ ಚಿ ಣಜಡಿಡಿಬಿಟಜ ಜಿರ್ಝಣ,ಎಟಿಛಿಜ ತಿಜ ತಿಟಟ ಟಿಠಣ ರಜಜಿ ಎಣ ಜಚಿಟಥಿ’ (ನಾವು ಬಯಸಿದಂತೆ ಬದುಕುವ ಸ್ವಾತಂತ್ರ್ಯ ಯಾವತ್ತೂ ಭಯಾನಕ ಹೋರಾಟದ ಫಲವೇ ಹೊರತು ಸುಲಭಕ್ಕೆ ಸಿಗುವುದಿಲ್ಲ) ಎಂಬ ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರ ಮಾತು ಧರ್ಮಸಂಕರಕ್ಕೊಳಪಟ್ಟ ಶಿವಸ್ವಾಮಿಯವರ ಸಂದರ್ಭವನ್ನು ಸರಿಯಾಗಿಯೇ ನಿರೂಪಿಸುತ್ತದೆ. ಎಳೆಹೂಟೆ ಶಿಕ್ಷೆ ಶರಣ ಸಂಕುಲಕ್ಕೆಲ್ಲ ಮೈ ಜುಮ್ಮೆನ್ನಿಸುವ ಕಥನರೂಪ. ೧೨ನೇ ಶತಮಾನದಲ್ಲಾದ ವರ್ಣಸಂಕರದ ಮದುವೆಗೆ ಸಿಕ್ಕ ಪ್ರತಿಫಲ ಇಂದಿಗೂ ಈ ಸಮಾಜ ಅನುಭವಿಸುತ್ತಿದೆ. ಹಾಗೆಯೇ ಶಿವಸ್ವಾಮಿಯವರು ಕೂಡ ಆರ್ಥಿಕವಾಗಿ ಕುಟುಂಬ ನಲುಗುತ್ತಿದ್ದ ಸಂದರ್ಭದಲ್ಲಿ ಧರ್ಮಸಂಕರಕ್ಕೊಳಪಟ್ಟರು. ಇದು ಅವರ ಕುಟುಂಬಕ್ಕೆ ಆರ್ಥಿಕ ಸಂಕಷ್ಟಗಳ ಜೊತೆಗೆ ಸಾಮಾಜಿಕ ನಿಂದನೆಗಳನ್ನು ತಂದೊಡ್ಡಿತು. ಈ ಸಂದರ್ಭದಲ್ಲಿ ಅವರಿಗೆ ಯಾವ ಕಾರ್ಯಕ್ರಮಗಳು ಕೂಡ ಸಿಗುತ್ತಿರಲಿಲ್ಲ. ಮನೆ ನಡೆಸುವುದೇ ಕಷ್ಟಕರವಾಯಿತು. ಆಗ ಹುಮನಾಬಾದಿನಲ್ಲಿ ಪಡೀತರ ಅಂಗಡಿಯ ಮಾಲೀಕರು ಹಾಗೂ ತಾಲೂಕು ಬಸವ ಕೇಂದ್ರದ ಅಧ್ಯಕ್ಷರೂ ಆಗಿದ್ದ

ಶ್ರೀ ಕಾಶಿನಾಥ ಗಿರಮಲ್ಲ ಎಂಬುವವರ ಬಳಿ ಇವರು ತಮ್ಮ ಕಷ್ಟಗಳನ್ನು ಹೇಳಿಕೊಳ್ಳಲಾಗಿ ಅವರು ಶಿವಸ್ವಾಮಿಯವರಿಗೆ ೧೨ಕಿಲೋ ಅಕ್ಕಿ ಹಾಗೂ ೫೦ ರೂಪಾಯಿಗಳ ಧನ ಸಹಾಯ ಮಾಡಿದರಂತೆ. ಜೊತೆಗೆ ಮುಂದಿನ ೧ ವರ್ಷದ ತನಕ ವಾರಕ್ಕೊಂದರಂತೆ ಪ್ರತಿ ಗುರುವಾರ ಹುಮನಾಬಾದ್ ನಗರದಲ್ಲಿ 'ಶರಣ ಸಂಗಮ' ಮನೆ ಕಾರ್ಯಕ್ರಮಗಳನ್ನು ಕೊಡಿಸಿ ಅಲ್ಲಿ ಆಯಾ ಕುಟುಂಬಗಳಿಂದ ೫೦ ರೂಪಾಯಿಗಳನ್ನು ಇವರಿಗೆ ದಕ್ಷಿಣೆಯಾಗಿ ಇವರಿಗೆ ಕೊಡಿಸುತ್ತಿದ್ದರಂತೆ.

ಸುಟ್ಟ ಮಡಿಕೆ ಧರೆಯನಪ್ಪದು.

ಹುಟ್ಟಿನಿಂದ ಬರುವುದು ಜಾತಿ, ಸಂಸ್ಕಾರದಿಂದ ಬರುವುದು ಧರ್ಮ. ಅಂದರೆ ಮಾನವ ಕಲ್ಪಿತ ಜಾತಿ ಎಂಬ ಅನಿಷ್ಟವನ್ನು ತೊಡೆದುಹಾಕಲು ಜಗತ್ತಿನ ಅನೇಕ ಮಹಾಪುರುಷರು, ದಾರ್ಶನಿಕರು, ಸಮಾಜ ಸುಧಾರಕರೆಲ್ಲರೂ ಪ್ರಯತ್ನಿಸಿದ್ದಾರೆ. 'ಮಾನವರೆಲ್ಲರೂ ಒಂದೇ ದೇವನೊಬ್ಬನೆ ನಮ್ಮ ತಂದೆ' ಎಂಬ ಮಾನವ ಸೌಹಾರ್ದತೆಯ ಮಂತ್ರ ಬೋಧಿಸಿ, ಸಮಸ್ತ ಮನುಕುಲದ ಉದ್ಧಾರಕ್ಕೆ ಶ್ರಮಿಸಿದ್ದಾರೆ. ಅವರ ಶ್ರಮಕ್ಕೆ ನಿಜವಾದ ಸಾರ್ಥಕತೆ ದೊರೆಯಬೇಕಾದರೆ ನಾವೆಲ್ಲರೂ ಜಾತ್ಯಾತೀತರಾಗಿ ಬಾಳಬೇಕಾಗಿದೆ. ಕೇವಲ ಓದು ಬರಹಗಳಲ್ಲಿ ಭಾವೈಕ್ಯತೆ ಸಾಧಿಸಿದರೆ ಸಾಲದು. ಅದು ಬದುಕಿನ ಭಾಗವಾಗಬೇಕು; ಬದುಕುವ ರೀತಿಯಾಗಬೇಕು.

ವ್ಯಕ್ತಿ ತನ್ನ ಪೂರ್ವಾಶ್ರಯವನ್ನು ಕಳಚಿಕೊಂಡು ಧರ್ಮಸಂಸ್ಕಾರಕ್ಕೆ ಒಳಗಾದ ನಂತರ ಜಾತಿ ರಹಿತವಾಗುತ್ತಾನೆ. ಅಂತವನನ್ನು ಪುನಃ ಅವನ ಪೂರ್ವ ಜಾತಿಯೊಂದಿಗೆ ಸೇರಿಸಿ ನೋಡುವ ದೃಷ್ಟಿಕೋನ ನಮ್ಮಲ್ಲಿ ಬದಲಾಗಬೇಕು. ಜಾತಿ ಸಮೀಕರಣದ ರಾಜಕೀಯ ಕೆಸರೆರಚಾಟ ನಿಲ್ಲದ ಹೊರತು ನಮ್ಮ ಸಮಾಜ ಜಾತಿರಹಿತ ಸಮಾಜವಾಗುವ ನಿಟ್ಟಿನಲ್ಲಿ ನಮಗೆ ಯಶಸ್ಸು ಸಿಗುವುದು ಅಷ್ಟಕ್ಕಷ್ಟೆ. ಪ್ರಾಯಶಃ ನಮ್ಮ ಸಮಾಜ

ಅಂತಹ ಪರಿಪಕ್ವತೆ ಹೊಂದಬೇಕಾದರೆ ಇನ್ನೂ ಶತಮಾನಗಳೇ ಬೇಕಾಗಬಹುದೇನೋ. ನಾನಿಲ್ಲಿ ಶಿವಸ್ವಾಮಿಯವರ ಬದುಕಿನ ಕ್ರಾಂತಿಕಾರಿ ನಡವಳಿಕೆಯೊಂದನ್ನು ಓದುಗರ ಮುಂದಿಡಲು ಬಯಸುತ್ತೇನೆ.

೧೯೮೭ರಲ್ಲಿ ಅನುಭಾವಿ ಶರಣರಿಂದ ಲಿಂಗದೀಕ್ಷೆ ಹೊಂದಿ ಪೂರ್ವ ಜಾತಿಯನ್ನು ಕಳೆದುಕೊಂಡು ಲಿಂಗವಂತರಾದಾಗಿನಿಂದ ಇಂದಿನವರೆಗೆ ಅವರು ಅವರ ತಂದೆ ತಾಯಿಗಳು ಹೆಂಡತಿ ಮಕ್ಕಳೆಲ್ಲರೂ ಲಿಂಗವಂತರೆಂದೇ ಅಭಿಮಾನದಿಂದ ಹೇಳಿಕೊಳ್ಳುತ್ತಾರೆ. ಸ್ನೇಹಿತರು, ನೆಂಟರಿಷ್ಟರು ಅವರಿಗೆ ಪೂರ್ವ ಜಾತಿಗೆ ಲಭ್ಯವಿರುವ ಮೀಸಲಾತಿ ಧಾರಾಳವಾಗಿ ಪಡೆದುಕೊಳ್ಳಬಹುದೆಂದು ಸಲಹೆ ನೀಡಿದರೂ ಅವರದನ್ನು ನಿಷ್ಠುರವಾಗಿ ಖಂಡಿಸುತ್ತಲೇ, ನಯವಾಗಿ ಅದನ್ನು ವಿರೋಧಿಸಿಕೊಂಡು ಬರುತ್ತಿದ್ದಾರೆ.

ಅವರಿಗೆ ಜನಿಸಿದ ಮಗ ಚೆನ್ನಬಸವ ಮತ್ತು ಮಗಳು ಕಲ್ಯಾಣಮ್ಮಳಿಗೆ ಹುಟ್ಟಿನಿಂದ ಹಿಡಿದು ಎಲ್ಲ ಶಾಲಾ ದಾಖಲಾತಿಗಳಲ್ಲಿ ಲಿಂಗಾಯುತರೆಂದೇ ಬರೆಸಿ ದೃಢೀಕರಿಸಿದ್ದಾರೆ. ಏಕೆಂದರೆ ಧರ್ಮಸಂಕರಗೊಂಡ ಬಳಿಕವೂ ಪೂರ್ವಾಶ್ರಯವನ್ನು ನೆನೆಯುವುದು, ಅದರ ಹೆಸರಿನಿಂದ ಸವಲತ್ತುಗಳನ್ನು ಪಡೆಯುವುದು ಆತ್ಮವಂಚನೆಯ ಕೆಲಸ ಎಂಬುದು ಅವರ ನಿರ್ಧಾರವಾಗಿದೆ. ಈ ನಿರ್ಧಾರಕ್ಕೆ ಅವರ ಹೆಂಡತಿ ಮಕ್ಕಳ ಸಂಪೂರ್ಣ ಬೆಂಬಲವೂ ಇದೆ. ಅವರೆಂದು ಸವಲತ್ತುಗಳಿಗಾಗಿ ಅದನ್ನು ಬಳಸುವಂತೆ ಶಿವಸ್ವಾಮಿಯವರನ್ನು ಪೀಡಿಸಿದವರಲ್ಲ. ಸವಲತ್ತುಗಳ ಆಸೆಗಾಗಿ ಪಥಭ್ರಷ್ಟಾನಾಗುವ ಅಥವಾ ಆತ್ಮವಂಚನೆ ಮಾಡಿಕೊಳ್ಳುವ ಕ್ಷುಲ್ಲಕತನಕ್ಕೆ ಕನಸು ಮನಸ್ಸಿನಲ್ಲೂ ಯೋಚಿಸಿದವರಲ್ಲ. ಹಾಗೆ ಮಾಡಿದರೆ ಮಕ್ಕಳ ದಾಖಲಾತಿಗಳಲ್ಲಿ ಪೂರ್ವಾಶ್ರಯದ ಜಾತಿಯನ್ನು ದಾಖಲು ಮಾಡಿಸಿದ್ದರೆ ಸಾಕಷ್ಟು ಸೌಲಭ್ಯಗಳು ಸಿಗುತ್ತಿದ್ದವು. ಆದರೆ ಶಿವಸ್ವಾಮಿಯವರು ಹಾಗೆಂದೂ ಮಾಡುವ ಗೋಜಿಗೆ ಹೋಗಲಿಲ್ಲ. ಬಸವಾದಿ ಪ್ರಮಥರ ತತ್ವ

ಸಿದ್ಧಾಂತಗಳನ್ನು ತಮ್ಮ ಹಾಗೂ ಕುಟುಂಬದ ಬದುಕಿನ ಉಸಿರೆಂಬಂತೆ ಪಾಲಿಸುತ್ತಿದ್ದಾರೆ; ಬಾಳುತ್ತಿದ್ದಾರೆ.

ಜಾತಿಯಲ್ಲಿ ಉತ್ತಮರೆಂದು ಹೇಳಿಕೊಳ್ಳುವ ಜಾತಿ ಜಂಗಮರು ಮೀಸಲಾತಿಗಾಗಿ ತಾವು ಬೇಡಜಂಗಮರೆಂದು ಹೇಳಿಕೊಂಡು ಹೋರಾಟದ ಮೂಲಕ ಸರ್ಕಾರದ ಮನವೊಲಿಸಲು ಪ್ರಯತ್ನಿಸುತ್ತಿರುವುದು ಈ ಹೊತ್ತಿನ ವಿಷಯ ನಮಗೆಲ್ಲ ಗೊತ್ತಿದೆ. ಇಲ್ಲಿ ವಿಪರ್ಯಾಸವೆಂದರೆ ಒಂದು ಕಡೆ ಶ್ರೇಷ್ಠರೆಂದು ಹೇಳಿಕೊಳ್ಳುತ್ತಲೇ, ತಮಗೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಕೊಡುತ್ತಿರುವ ಸವಾನ ಮೀಸಲಾತಿಗಳನ್ನು ಕಲ್ಪಿಸಿಕೊಡಬೇಕೆಂಬುದು ಬೇಡಿಕೆ ಸಲ್ಲಿಸುತ್ತಿರುವುದು ಧರ್ಮಭ್ರಷ್ಟ ನಡೆಯಾಗಿದೆ. ಒಂದರ್ಥದಲ್ಲಿ ಅವರು ಜಂಗಮರಾದರೂ ಅನ್ಯರೆಂದು ಹೇಳಿಕೊಂಡಂತಾಗುವುದಿಲ್ಲವೇ? ಶಿವಸ್ವಾಮಿಯವರು ತಮ್ಮ ಜೀವನದುದ್ದಕ್ಕೂ ಜನರ ಈ ಇಬ್ಬಂದಿತನವನ್ನು ವಿರೋಧಿಸಿಕೊಂಡೇ ಬಂದವರು. ಸತ್ತಮೇಲೆ ಸ್ವರ್ಗದಲ್ಲಿ ಒಟ್ಟಾಗುವ ವೈದಿಕರ ಕ್ರಮ ಅವರಿಗೆ ಬೇಕಿಲ್ಲ. ಬದುಕಿರುವಾಗಿನ ಜೀವನಕ್ಕೆ ಗೌರವ ಬೇಕು. ಒಟ್ಟಿನಲ್ಲಿ ಇಂತಹ ಧರ್ಮಬಾಹಿರ ಬೆಳವಣಿಗೆಗಳು, ಧರ್ಮನಿಷ್ಠೆಯನ್ನು ಕಳೆದುಕೊಂಡವರ ಮನಃಸ್ಥಿತಿ ಎಂದೇ ಹೇಳಬೇಕಾಗುತ್ತದೆ. ಒಮ್ಮೆ ಧರ್ಮವಂತನಾದರೆ ಮರಳಿ ಜಾತಿವಂತನಾಗಲಾರ. ಅದನ್ನು ಶರಣರ ಪರಿಭಾಷೆಯಲ್ಲಿ ಹೇಳುವುದಾದರೆ ಕುಂಬಾರನು ತಯಾರಿಸಿದ ಕೆಸರಿನ ಮಡಿಕೆ ಆವಿಗೆಯಲ್ಲಿ ಸುಟ್ಟ ನಂತರ ಸಂಪೂರ್ಣ ಗಡಿಗೆಯಾಗಿ ರೂಪುಗೊಳ್ಳುತ್ತದೆ. ಆ ಗಡಿಗೆ ಒಡೆದು ಹೋಳಾದರೂ ಮತ್ತೆ ಕೆಸರಿನೊಂದಿಗೆ ಎಂದಿಗೂ ಬೆರೆಯುವುದಿಲ್ಲ. ಹಾಗೆಯೇ ನಮ್ಮ ಪೂರ್ವಾಶ್ರಮ.

ವೈವಾಹಿಕ ಜೀವನ.

ಅಂದು ಶಿವಾಚಾರಗೈದ ಮಧುವರಸರಂತೆ
ಇಂದೊಬ್ಬ ಮಧುವರಸ
ತನ್ನಣುಗಿಯನ್ನಿತ್ತು ಶಿವಾಚಾರಗೈದಡೆ
ಜಗದ ಜಂಗುಳಿಯ ಬಾಯ ಬೀಗ ತೆರೆಯಿತು
ಮನಬಂದಂತೆ ಆಡಿಕೊಳ್ಳುವರಯ್ಯಾ
ನಿಜತತ್ವಾಚಾರವರಿದು ಮಾಡದೆ
ಮಾಡುವರನು ಮಾಡಲೀಯದೆ
ಮತಿಗೇಡಿ ಹೇಡಿ ಮನುಜರ
ಕೇಡು ಬುದ್ಧಿಯ ದೂಡಿ ನೀ ನೋಡಿ
ಸಲಹಯ್ಯ ಲಿಂಗದೇವ.

ಶಿವಸ್ವಾಮಿಯುವರ ಜೀವನದ ಪ್ರತಿಘಟ್ಟಗಳು ಬಸವಾದಿ ಪ್ರಮಥರಿಂದಲೇ ಪೂರ್ವಯೋಜಿತವಾಗಿ ನಿರ್ಧರಿಸಲ್ಪಟ್ಟಿವೆ ಎಂಬಂತೆ ಘಟಿಸಿವೆ. ಮೂಲತಃ ಕುರುಬರ ಕುಟುಂಬದಲ್ಲಿ ಜನಿಸಿದ್ದ ಇವರಿಗೆ ಮುಂದೆ ದೃಷ್ಟಿ ಹೋಗುವುದು, ನಂತರ ಲಿಂಗಾಯತ ತತ್ವ ಸಿದ್ಧಾಂತಗಳ ಗುರು ಶ್ರೀ ಕಲ್ಲಪ್ಪ ದೇವಣೆಯವರು ಪರಿಚಯವಾಗಿ ಲಿಂಗದೀಕ್ಷೆ ನೀಡುವುದು, ಯಾವುದು ಅಂದುಕೊಂಡಿದ್ದಲ್ಲ; ಎಲ್ಲವೂ ನಡೆದಿದ್ದು. ಗುರುಹಿರಿಯರಿಂದ ಸಾಕಷ್ಟು ವಿಚಾರಗಳನ್ನು ಕಲಿತ ನಂತರ ಇವರೆ ಸ್ವತಃ ಊರೂರಿಗೆ ತೆರಳಿ ಪ್ರವಚನಗಳನ್ನು ನೀಡಲು ಪ್ರಾರಂಭಿಸಿದರು. ಅದು ಅವರ ವರ್ಷದ ಕಾಯಕವೆಂಬಂತೆ ನಡೆದುಕೊಂಡು ಹೊಂಟಿತ್ತು. ಹೀಗಿರುವಾಗಲೇ ಅವರೊಮ್ಮೆ ೧೯೬೫ರಲ್ಲಿ ಮನ್ನಾಎಖೇಳಿ ಹತ್ತಿರ ಬರುವ ಇತಿಹಾಸ ಪ್ರಸಿದ್ಧ ಬಗದಲ್ ಗ್ರಾಮಕ್ಕೆ ಪ್ರವಚನಕ್ಕಾಗಿ ತೆರಳುತ್ತಾರೆ. ಪ್ರವಚನಗಳು ಕೇಳುಗರ ಜೀವನದಲ್ಲಿ ಮಹತ್ತರವಾದ ಪರಿಣಾಮಗಳನ್ನು ತರುವ ಮೂಲಕ ಬದುಕನ್ನು ಹಸನುಗೊಳಿಸುವುದು ಸಹಜ. ಈ ಪ್ರವಚನ ಮಾತ್ರ ಬಗದಲ್

ಜನತೆಯೊಂದಿಗೆ ಶಿವಸ್ವಾಮಿಯವರ ಬದುಕನ್ನು ಕೂಡ ಹಸನಗೊಳಿಸಿತು. ಅದನ್ನವರು ಹೀಗೆ ಹೇಳುತ್ತಾರೆ. "ಬಸವಾದಿ ಶರಣರ ಸಾಮಾಜಿಕ ಸಮಾನತೆಯು ಸಾಕಾರಗೊಂಡ ಮತ್ತೊಂದು ಸಂದರ್ಭವದು. ನಾನು ಹಾಲ ನೀನು ತೈಲ, ನಮ್ಮ ಗಂಟು ಬ್ರಹ್ಮಲೀಲ" ಎಂದು ಬಣ್ಣಿಸುತ್ತಾರೆ. ಮುಂದುವರೆದು 'ನನ್ನ ವಿವಾಹ ಶರಣರ ಅನುಗ್ರಹದಿಂದುಂಟಾದ ಒಂದು ಅದ್ಭುತ ಪವಾಡ. ನನ್ನ ಜೀವನದ ಆಚಾರ, ವಿಚಾರ, ಧಾರ್ಮಿಕ ಸಂಸ್ಕಾರಗಳನ್ನು ಗಮನಿಸಿ, ಶರಣರ ಶಿವಾಚಾರ ತತ್ವವನ್ನು ಸಾಕಾರಗೊಳಿಸುವ ಸಂಕಲ್ಪತೊಟ್ಟು ಲಿಂ.ಶರಣ ವಿಶ್ವನಾಥ ಸಜ್ಜನಶೆಟ್ಟಿ ಹಾಗೂ ವಿದ್ಯಾವತಿ ಸಜ್ಜನಶೆಟ್ಟಿಯವರ ಕ್ರಾಂತಿಕಾರಕ ನಿರ್ಧಾರದಿಂದಾಗಿ ೧೨ನೇ ಶತಮಾನದ ಶೀಲವಂತ ಲಾವಣ್ಯವತಿಯರ ಕಲ್ಯಾಣ ಮಹೋತ್ಸವ ಮರುಕಳಿಸುವಂತೆ ನನ್ನ ಮದುವೆ ನಡೆಯಿತು' ಎನ್ನುತ್ತಾರೆ.

ಮದುವೆಗೆ ಭಾಲ್ಕಿಯ ಪರಮಪೂಜ್ಯ ಶತಾಯುಷಿ ಮ.ಘ.ಚ. ಪೂಜ್ಯ ಡಾ. ಚನ್ನಬಸವ ಪಟ್ಟದೇವರ ದಿವ್ಯ ಸಮ್ಮತಿ ಹಾಗೂ ಆರ್ಶಿವಾದ ಪಡೆಯಲಾಯಿತು. ನಂತರ ಜಿಲ್ಲೆಯ ಎಲ್ಲ ಮಠಾಧೀಶರ ಗಮನಕ್ಕೆ ತಂದು ಅವರಿಂದ ಸಮ್ಮತಿ ಹಾಗೂ ಆರ್ಶಿವಾದ ಪಡೆಯಲಾಯಿತು. ಸಜಾತಿಯ ಮದುವೆ ಸಂದರ್ಭದಲ್ಲಿ ಮಾಡಬಹುದಾದ ಎಲ್ಲ ಸಂಪ್ರದಾಯಗಳನ್ನು ರೀತಿ ರಿವಾಜುಗಳನ್ನು ಈ ಮದುವೆಯ ಸಂದರ್ಭದಲ್ಲಿ ಎರಡು ಕುಟುಂಬಗಳು ನೆರವೇರಿಸಿಕೊಂಡು ಬಂದವು. ಇದರಲ್ಲಿ ಶ್ರೀಮತಿ ಅರ್ಚನಾ ಅಕ್ಕನವರ ಧೈರ್ಯ ಹಾಗೂ ಪರಿತ್ಯಾಗದ ಸದ್ಗುಣಗಳನ್ನು ಮೆಚ್ಚಲೇಬೇಕು. 'ಎನ್ನ ಆಚಾರಕ್ಕೆ ನೀ ಸತಿಯಾಗಿ ನಿಂದಲ್ಲಿಯೇ ಆನು ಶಿವಾಚಾರಿಯಾದೆನು, ತತ್ವಪ್ರಚಾರಕ್ಕೆ ನೀ ಸ್ಫೂರ್ತಿಯಾಗಿ ನಿಂದಲ್ಲಿಯೇ ಆನು ಸದಾಚಾರಿಯಾದೆನು, ಲಿಂಗನಿಷ್ಠೆಯ ಭಕ್ತಿಯನ್ನಾಚರಿಸಿ ಎನ್ನವನುಕರಿಸಿದಾಗಲೇ ಆನು ಲಿಂಗಾಚಾರಿಯಾದೆನು, ಆದ್ಯರ ವಚನಾಂಕಿತಗಳ ಭಕ್ತಿಯುಳ್ಳವಳಾಗಿ ನೀ ಮನವನನುಗೊಳಿಸಿದಾಗಲೇ ಆನು ಗಣಾಚಾರಿಯಾದೆನು, ಮನೆಗೆ

ಬಂದವರಲ್ಲಿ ಬಸವಣ್ಣನ ಕಂಡು ನನ್ನೊಂದಿಗೆ ಸೇವಕಳಾಗಿ ದಾಸೋಹಗೈದಲ್ಲಿಯೇ ಆನು ಭೃತ್ಯಾಚಾರಿಯಾದೆನು, ಇಂತಿ ಪಂಚಾಚಾರಗಳನ್ನಿಲ್ಲಿ ನಿನ್ನಿಂದ ಅಳವಟ್ಟಾಗಿ ನಮ್ಮ ಲಿಂಗದೇವನ ಶರಣರಲ್ಲಿ ಆನು ಸತ್ಪಾತ್ರಕ್ಕೆ ಸಂದೆನು' ಎಂದು ಅವರು ತಮ್ಮ ಮನದನ್ನೆಯನ್ನು ಸ್ಮರಿಸುತ್ತಾರೆ.

'ಉಡುವುದು ಉಂಬುವುದು ಶಿವಾಚಾರ, ಕೊಡುವುದು ಕೊಂಬುವುದು ಕುಲಾಚಾರ' ಎಂಬ ಸಾಮಾಜಿಕ ಕಟ್ಟಳೆಯನ್ನೇ ಗಾಳಿಗೆ ತೂರಿ ನಡೆದ ಮದುವೆಯಿದು. ೧೨ನೇ ಶತಮಾನದಲ್ಲಿ ಕಲ್ಯಾಣದಲ್ಲಿ ನಡೆದ ಸಮಾಜೋ-ಧಾರ್ಮಿಕ ಚಳುವಳಿ ವಿಶ್ವಕ್ಕೆ ಮಾದರಿಯಾಗಿ ಘಟಿಸಿತ್ತು. ಅದರ ಮುಂದುವರಿಕೆಯೆಂಬಂತೆ ನಡೆದ ಈ ಮದುವೆಗೆ ಎಲ್ಲೆಡೆಗಳಿಂದ ಸತ್ಕಾರ ಸನ್ಮಾನಗಳು ಸಿಕ್ಕವು. ೧೭.೧೨.೧೯೯೫ರಲ್ಲಿ ರಾಷ್ಟ್ರೀಯ ಬಸವದಳ ಬೀದರ, ೧೮.೧೨.೧೯೯೫ರಲ್ಲಿ ದಾವಣಗೆರೆಯ ಬಸವ ಬಳಗ, ೦೫.೦೫.೧೯೯೬ರಲ್ಲಿ ಚಿತ್ರದುರ್ಗದ ಮುರುಘಾಮಠದಲ್ಲಿ ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪನವರ ದಂಪತಿಗಳಿಗೆ ಸನ್ಮಾನಿಸುವ ಸಮಾನ ವೇದಿಕೆಯಲ್ಲಿ ಅವರೊಂದಿಗೆ ಕುಳ್ಳಿರಿಸಿ ಸನ್ಮಾನಿಸಲಾಯಿತು. ಇದೇ ವೇದಿಕೆಯಲ್ಲಿ ಮಠದ ಮೊದಲ 'ಬಸವಶ್ರೀ ಪ್ರಶಸ್ತಿ'ಯನ್ನು ಕೌಠಾ (ಬಿ) ಗ್ರಾಮದ ಸಿದ್ಧರಾಮ ಶರಣರು ಬೆಲ್ದಾಳರಿಗೆ ಪ್ರದಾನ ಮಾಡಲಾಗಿತ್ತು. ಮುಂದೆ ಇದೇ ಸಿದ್ಧರಾಮ ಶರಣರು ಬೆಲ್ದಾಳರು ೧೯೯೬ರ ದೆಸೆಂಬರನಲ್ಲಿ ತಮ್ಮ 'ವಚನ ತತ್ವಾನುಭವ' ಕೃತಿ ಬಿಡುಗಡೆಯ ಸಂದರ್ಭದಲ್ಲಿ ಈ ದಂಪತಿಗಳನ್ನು ಕರೆದು ವಿಶೇಷವಾಗಿ ಸನ್ಮಾನಿಸಿದರು.

ಭಾಲ್ಕಿಯ ಶ್ರೀಮಠ, ಹುಲಸೂರಿನ ಶ್ರೀಮಠ, ಬೀದರಿನ ಬಸವ ಮುಕ್ತಿ ಮಂದಿರ, ಬಸವಕಲ್ಯಾಣದ ಅನುಭವ ಮಂಟಪ, ಕಲ್ಯಾಣ ನಾಡಿನ ಶರಣ ಸಾಹಿತ್ಯ ಪರಿಷತ್ತು, ಇಳಕಲ್ಲಿನ ಶರಣ ಸಾಹಿತ್ಯ ವಿದ್ಯಾಪೀಠ, ಮನ್ನಾಎಖೇಳಿಯ ಬಸವ ಮಹಾಮಠ, ಖಜೂರಿಯ ಶ್ರೀ ಕೊರಣೇಶ್ವರ ಮಠ, ಸೋಲ್ಲಾಪುರದ ಕಿರಿಟೇಶ್ವರ ಮಠ ಹಾಗೂ ಉದಗಿರದ ಬಸವ

ಭಕ್ತರು ನಿರಂತರವಾಗಿ ಈ ದಂಪತಿಗಳಿಗೆ ಸತ್ಕರಿಸಿದರು; ಮನೆಯ ಮಕ್ಕಳಂತೆ ಹಾರೈಸಿದರು. ಆದರೆ ಮಾತಿಗೆ ಮಾವಿನಕಾಯಿ ಉದರಲ್ಲವಲ್ಲ. ತತ್ವನಿಷ್ಠರಾಗಿದ್ದ ಶಿವಸ್ವಾಮಿಯವರು ವರ್ಣಸಂಕರದ ಮದುವೆ ಮಾಡಿಕೊಂಡು ಪಡಬಾರದ ಕಷ್ಟಗಳನ್ನು ಪಡಬೇಕಾಯಿತು. ಇವರ ಮದುವೆಗೆ ಹರಸಿದ ಕೈಗಳು ನಂತರ ಇವರ ಹತ್ತಿರ ಸುಳಿಯಲಿಲ್ಲ. ಮನೆಯ ಆರ್ಥಿಕ ಪರಿಸ್ಥಿತಿ ಸರಿ ಇರದೇ ಇದ್ದರೂ ಕೂಡ ಶಿವಸ್ವಾಮಿಯವರು ತಮ್ಮ ತತ್ವನಿಷ್ಠೆಯನ್ನು ಬಿಟ್ಟವರಲ್ಲ. ತಮ್ಮ ಪ್ರವಚನಗಳನ್ನು ಹಾಗೆಯೇ ಮುಂದುವರೆಸಿದರು.

ಹಾಗೆ ನೋಡಿದರೆ ಇಂದಿಗೂ ಸಮಾಜದಲ್ಲಿ ವಿಶೇಷಚೇತನರ ಬಗ್ಗೆ ಅಷ್ಟೇನೂ ಒಲವಿಲ್ಲದನ್ನು ನಾವು ಕಾಣುತ್ತೇವೆ. ಆದರೆ ಶಿವಸ್ವಾಮಿಯವರ ವಿಚಾರದಲ್ಲಿ ಮಾತ್ರ ಈ ಮಾತು ಸುಳ್ಳೆನಿಸುತ್ತದೆ. ಅವರ ಅಚಾರ-ವಿಚಾರಗಳು ಮತ್ತು ನಡವಳಿಕೆಗಳನ್ನು ಗಮನಿಸಿ ಅಂದವರಿಗೆ ತಮ್ಮ ಮನೆಯ ಹೆಣ್ಣುಮಕ್ಕಳನ್ನು ಕೊಡಲು ಸುಮಾರು ಮನೆತನಗಳು ಮುಂದೆ ಬಂದಿದ್ದವು. ಉಡಬಾಳ ಗ್ರಾಮದ ಶರಣರಾಗಿದ್ದ ಶ್ರೀ ಬಕ್ಕಪ್ಪ ಗೋಪ ಎಂಬುವವರು ತಮ್ಮ ಮಗಳಾದ ಅಕ್ಕನಾಗಮ್ಮಳನ್ನು ಇವರಿಗೆ ಕೊಟ್ಟು ಮದುವೆ ಮಾಡುವ ಬಗ್ಗೆ ವಿಚಾರಿಸಿದ್ದರಂತೆ. ಅವರು ಬಸವಕಲ್ಯಾಣದಲ್ಲಿ ಬಂಡಿಯ ಮೇಲೆ ಚೂಡ ಮಾರುವ ವ್ಯಾಪಾರ ಮಾಡುತ್ತಿದ್ದವರು. ನಮ್ಮ ಭಾಗದಲ್ಲಿ ಶರಣರಾಗಿ ಬಾಳಿಬದುಕಿದ ಶ್ರೀ ವೀರಶೆಟ್ಟಿ ಇಮಡಾಪುರ ಅವರ ಅಕ್ಕನ ಮಗ ಇವರು. ಅನುಭವ ಮಂಟಪದಲ್ಲಿ ನಡೆಯುತ್ತಿದ್ದ 'ಶಿವಾನುಭವ' ಗೋಷ್ಠಿಯಲ್ಲಿ ಇವರೀರ್ವರ ಪರಿಚಯವಾಗಿತ್ತು. ಆದರೆ ಅವರು ಆ ವಿಚಾರವನ್ನು ಸರಿಯಾದ ಸಮಯಕ್ಕೆ ಇವರ ಮನೆಯವರ ಗಮನಕ್ಕೆ ತಂದಿರಲಿಲ್ಲ; ತರುವ ಹೊತ್ತಿಗೆ ಶಿವಸ್ವಾಮಿಯವರಿಗೆ ಮದುವೆ ನಿಗಧಿಯಾಗಿತ್ತು. ೧೨ನೇ ಶತಮಾನದಲ್ಲಿ ಅಕ್ಕನಾಗಮ್ಮ-ಶಿವಸ್ವಾಮಿಗಳು ಸತಿಪತಿಗಳಾದ ರೀತಿ ಇವರಾಗಲಿ ಎಂಬುದು ಅವರ ಆಸೆಯಾಗಿತ್ತು. ಆದರೆ ಅದು ಸಕಾಲಕ್ಕೆ ಅವರು ಇವರ

ತಂದೆತಾಯಿಗಳ ಮುಂದೆ ಪ್ರಸ್ತಾಪಿಸದ ಕಾರಣ ಆಗಲಿಲ್ಲ. ಇದೇ ರೀತಿ ಬಗದಲ್ ಗ್ರಾಮದ ಹಮ್ಮನ್ನೋರ್ ಎಂಬ ಮನೆತನದವರೂ ಕೂಡ ಇವರಿಗೆ ತಮ್ಮ ಮಗಳನ್ನು ಕೊಟ್ಟು ಮದುವೆ ಮಾಡುವ ಬಗ್ಗೆ ಚಿಂತಿಸಿದ್ದರಂತೆ. ಆ ಬಗ್ಗೆ ಇವರ ಮುಂದೆ ಅದನ್ನು ಪ್ರಸ್ತಾಪ ಮಾಡಿದಾಗ 'ನೀವು ಹೇಳುವುದು ಸರಿ ಇದೆ. ಮದುವೆ ಮಾಡುವುದು ಸುಲಭ. ಆನಂತರದ ಬದುಕಿನ ಬಗ್ಗೆ ಇನ್ನೊಮ್ಮೆ ಚಿಂತಿಸಿ ನೋಡಿ. ನನಗೆ ದೃಷ್ಟಿದೋಷದ ಜೊತೆಗೆ ಸಧ್ಯಕ್ಕೆ ಉದ್ಯೋಗವೂ ಇಲ್ಲ. ಹಾಗಾಗಿ ಈ ವಿಷಯದಲ್ಲಿ ಅವಸರ ಮಾಡುವುದು ಬೇಡ' ಎಂದಿದ್ದರಂತೆ ಶಿವಸ್ವಾಮಿಯವರು. ನೂರು ಸುಳ್ಳು ಹೇಳಿ ಒಂದು ಮದುವೆ ಮಾಡು ಎಂಬ ಗಾದೆ ಮಾತಿರುವಾಗ ಬಸವವಾದಿ ಶರಣನ ಬಳ್ಳಿಯೊಂದು ತನಗೆ ಬಂದ ಮದುವೆ ಪ್ರಸ್ತಾಪದಲ್ಲಿಯೂ ಸಾಮಾಜಿಕ ಬದ್ಧತೆಯನ್ನು ತೋರುವುದು ನೈತಿಕವಾಗಿ ಅವರ ಜೀವನ ಬದ್ಧತೆಯನ್ನು ಸೂಚಿಸುತ್ತದೆ.

ಶಿವಸ್ವಾಮಿಯವರಿಗೆ ಕಣ್ಣು ಕಾಣಿಸುವುದಿಲ್ಲವೆಂದು ಗೊತ್ತಿದ್ದೂ ಕೂಡ ಈ ರೀತಿಯ ಪ್ರಸ್ತಾವನೆಗಳು ಬಂದಿರುವುದನ್ನು ಗಮನಿಸಿದರೆ ಬಹುಶಃ ಅಂದು ಅವರ ವ್ಯಕ್ತಿತ್ವಕ್ಕಿದ್ದ ಗೌರವವನ್ನು ನಾವು ಸರಿಯಾಗಿ ಊಹೆಗೊಳಪಡಿಸಬಹುದು ಎನಿಸುತ್ತದೆ. ಇದು ಕೇವಲ ಏಕಮುಖ ಸಮಾಜದ ನೈತಿಕತೆ ಎನಿಸಿಕೊಳ್ಳದೆ ಬಹುಮುಖದಲ್ಲಿ ಇಂದಿನ ಸಮಾಜಕ್ಕೆ ಮಾದರಿ ನಡೆ ಎನಿಸುತ್ತದೆ. ಒಂದು ಓರ್ವ ವ್ಯಕ್ತಿಯ ವ್ಯಕ್ತಿತ್ವವನ್ನು ಸಮಾಜದ ಕುಟುಂಬ ವ್ಯವಸ್ಥೆಯಲ್ಲಿ ಗುರುತಿಸುವುದು, ಹಾಗೆ ಇನ್ನೊಂದು ಕಡೆ ಕೌಟಂಬಿಕವಾಗಿ ಮಗಳಿಗೆ ದೃಷ್ಟಿದೋಷವಿದ್ದರೂ ಸರಿ ನೈತಿಕವಾಗಿ ಬದುಕಿಸಬಲ್ಲ ಸ್ವಾಭಿಮಾನಿಯನ್ನು ಅಳಿಯನಾಗಿ ಸ್ವೀಕರಿಸುವ ಕೌಟಂಬಿಕ ಮನಸ್ಥಿಯನ್ನು ನಾವಿಲ್ಲಿ ಗಮನಿಸಬೇಕಿದೆ. ಇಂದು ಅಳಿಯನಾಗಲು ಕೇವಲ ಅವನ ಮನೆಯ ಆಸ್ತಿ ಹಾಗೂ ಉದ್ಯೋಗವೇ ಉರುಗೋಲಾಗಿರುವಾಗ ನಮ್ಮ ಪರಂಪರೆಯಲ್ಲಿ ಹರಿದುಬಂದ ಈ ಮಾದರಿಯ ನಡೆಗಳನ್ನು ಮೆಲುಕು ಹಾಕುವುದು ಇಂದಿನ ಅಗತ್ಯವೆನಿಸುತ್ತದೆ.

ಪ್ರವಚನಕಾರರಾಗಿ ಶಿವಸ್ವಾಮಿ.

ಬದುಕು ಹರಿವ ನೀರಿದ್ದಂತೆ. ಎಲ್ಲೋ ಹುಟ್ಟಿ ಇನ್ನೆಲ್ಲೋ ಹರಿದು ಮತ್ತೆಲ್ಲೋ ಬಂದು ಸಮುದ್ರ ಸೇರುವಂತೆ ಶಿವಸ್ವಾಮಿಯವರ ಬಾಲ್ಯದ ಬದುಕು ಹರಿವ ನೀರಿನಂತೆ ವಿವಿಧ ವಿಷಯಗಳ ಕಡೆ ಆಕರ್ಷಣೆಗೊಂಡು ನಂತರ ಬಂದು ನಿಂತಿದ್ದು ಮಾತ್ರ ಶರಣ ಸಂಸ್ಕೃತಿ ಎಂಬ ಸಮುದ್ರಕ್ಕೆ. ಅದನ್ನು ಅಲ್ಲಿಗೆ ತಂದು ತಡೆದು ನಿಲ್ಲಿಸಿದ್ದು ಶ್ರೀ ಕಲ್ಲಪ್ಪ ದೇವಣಿ ಎಂಬ ಶಿಕ್ಷಕ ಆಣೆಕಟ್ಟು. ದೇವಣಿಯವರು ಮೂಲತಃ ಶಿಕ್ಷಕರಾಗಿದ್ದರು ಕೂಡ ಪ್ರವೃತ್ತಿಯಿಂದ ಶರಣ ಸಂಸ್ಕೃತಿ ಚಿಂತಕರಾಗಿದ್ದವರು. ಅವರ ಪಾಠ-ಪ್ರವಚನಗಳು ಎಷ್ಟು ಹಿತಕರವಾಗಿದ್ದವೋ, ಅವರ ಅಧ್ಯಾತ್ಮದ ವಿಚಾರಗಳು ಕೂಡ ಅಷ್ಟೇ ತೀಕ್ಷ್ಣವಾಗಿದ್ದವು ಎಂಬುದನ್ನು ನಾನು ಕೂಡ ಕೇಳಿದ್ದೇನೆ. ವಿದ್ಯಾರ್ಥಿಗಳಿಗೆ ಅವರೆಂದರೆ ಅಚ್ಚುಮೆಚ್ಚು; ಅಷ್ಟೇ ಗೌರವ ಮತ್ತು ಭಯ. ಅಪ್ಪಟ ಬಸವ ತತ್ವನಿಷ್ಠರು ಆದ ಶ್ರೀ ಕಲ್ಲಪ್ಪ ದೇವಣಿ ಗುರುಗಳು ಸುಮಾರು ೪೦ ವರ್ಷಗಳಿಂದ ಪ್ರತಿದಿನ ತಪ್ಪದೆ ತ್ರಿಕಾಲ ಇಷ್ಟಲಿಂಗ ಪೂಜೆಯನ್ನು ಮಾಡುತ್ತಾ ಬಂದವರು. ಅವರ ಶಿವಯೋಗ, ಲಿಂಗಾನುಸಂಧಾನ ಯಾವ ಮಠಾಧೀಶರಿಗೂ ಕಡಿಮೆ ಇಲ್ಲದಂತೆ ನಡೆದಿದೆ. ಉಂಡು ಉಪವಾಸಿ, ಬಳಸಿ ಬ್ರಹ್ಮಚಾರಿಯಾದನಂತೆ.

ಆದರೆ ಅವರು ನಿಜವಾಗಿಯೂ ಮಕ್ಕಳಿಗೆ ಯೋಗ್ಯ ಗುರುಗಳಾಗಿದ್ದರು, ಮನೆಯಲ್ಲಿ ಒಳ್ಳೆಯ ತಂದೆಯಾಗಿದ್ದರು. ಸಮಾಜಕ್ಕೆ ಸತ್ಪುರುಷ ಶರಣರಾಗಿ ಬಾಳಿದರು. ವೈಯಕ್ತಿಕವಾಗಿ ಪಾಲಿಸುತ್ತಿದ್ದುದನ್ನು ಸಾಮಾಜಿಕವಾಗಿ ಜಾರಿಗೆ ತರುವ ಉತ್ತರದಾಯಿಯಾಗಿ ತಮ್ಮ ಪಾಲಿನ ಕರ್ತವ್ಯವನ್ನು ಅತ್ಯಂತ ನಿಷ್ಠೆಯಿಂದ ಪೂರೈಸಿದ್ದಾರೆ. ಶಿಕ್ಷಕನಾದವನು ಮಕ್ಕಳಿಗೆ ಕಲಿಸುವುದರೊಂದಿಗೆ ಸಮಾಜಕ್ಕೆ ಮಾದರಿಯಾಗಿ ಬದುಕಬೇಕು. ಅಂದಾಗಲೆ ಆತ ಪರಿಪೂರ್ಣವಾಗಿ ಶಿಕ್ಷಕ ವೃತ್ತಿಗೆ ನ್ಯಾಯ ಒದಗಿಸಲು ಸಾಧ್ಯ ಎಂಬುದನ್ನು ಬಲ್ಲವರಾಗಿದ್ದರು ಮತ್ತು ಬಾಳಿನುದ್ದಕ್ಕೂ ಅದನ್ನವರು ಪಾಲಿಸಿದರು.

ಅವರಿಂದ ಲಿಂಗದೀಕ್ಷಿತನಾಗಿ ಅವರ ಪ್ರವಚನಗಳನ್ನು ಕೇಳಲು ಅವರೊಂದಿಗೆ ಊರೂರು ಸುತ್ತಿದ್ದಾಯಿತು. ಶರಣರ ಬಗೆಗೆ, ಅವರ ವಿಚಾರಧಾರೆಗಳ ಬಗೆಗೆ ಸಾಕಷ್ಟು ಕಲಿತಿದ್ದಾಯಿತು. ಮುಂದೇನೂ ಮಾಡುವುದು ಎಂದು ಅದೇ ಗ್ರಾಮದ ಅವರ ಬಾಲ್ಯದ ಗೆಳೆಯನಾದ ಶ್ರೀ ಆನಂದ ಸಿದ್ಧಾಮಣಿ ಅವರೊಂದಿಗೆ ಒಮ್ಮೆ ಚರ್ಚಿಸಿದರಂತೆ. ಮುಂದೆ ಇವರು ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರ್ಗಿ ವತಿಯಿಂದ ಕನ್ನಡದಲ್ಲಿ ಪಿಹೆಚ್.ಡಿ ಪದವಿಯನ್ನು ಪಡೆದರು. ಪ್ರಸ್ತುತವಾಗಿ ಅವರು ಪೂಜ್ಯ ದೊಡ್ಡಪ್ಪ ಅಪ್ಪ ಪದವಿಪೂರ್ವ ವಸತಿ ವಿಜ್ಞಾನ ಕಾಲೇಜು ಕಲಬುರ್ಗಿಯಲ್ಲಿ ಕನ್ನಡ ಉಪನ್ಯಾಸಕರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಹೀಗೆ ಯೋಚಿಸುತ್ತಿರುವಾಗಲೇ ಅವರಿಗೆ ಹೊಳೆದಿದ್ದು ನಾವು ಕೂಡ ಶ್ರೀ ಕಲ್ಲಪ್ಪ ದೇವಣಿ ಸರ್ ಅವರಂತೆ ಊರೂರು ಸುತ್ತಿ ಶರಣರ ಬಗೆಗೆ ಪ್ರವಚನಗಳನ್ನು ಮಾಡಬೇಕೆಂದು ತೀರ್ಮಾನಿಸಿದರಂತೆ. ಒಂದೊಂದು ದಿನ ಒಂದೊಂದು ಗ್ರಾಮವನ್ನು ಆಯ್ದುಕೊಳ್ಳುವುದು, ಅಲ್ಲಿಗೆ ತೆರಳಿ ಗ್ರಾಮದ ದೇವಸ್ಥಾನಗಳಲ್ಲಿ ರಾತ್ರಿ ಪ್ರವಚನಗಳನ್ನು ಮಾಡುವುದು ಎಂಬ ಯೋಜನೆ ಸಿದ್ಧಗೊಳಿಸಿಕೊಂಡರು. ಮೊದಲಿಗೆ ಹೀಗೆ ಸುಮಾರು ೨೦ ಹಳ್ಳಿಗಳನ್ನು ಆಯ್ಕೆ ಮಾಡಿಕೊಂಡರಂತೆ. ಅದರಲ್ಲಿ ಮೊದಲನೆಯದು ಭಾಲ್ಕಿ ತಾಲೂಕಿನ ಮೊರಂಬಿ ಗ್ರಾಮ.

ಪ್ರವಚನ ಮಾಡುವ ಚರ್ಚೆ ಆಯಿತು. ಗ್ರಾಮಗಳ ಆಯ್ಕೆಯೂ ಆಯಿತು. ಆದರೆ ಅಲ್ಲಿಗೆ ಹೋಗುವುದು ಹೇಗೆ? ಸಂಪರ್ಕ ಸಾಧನ ಬೇಕಲ್ಲವೇ? ಅದಕ್ಕೊಂದು ಸೈಕಲ್ ಸಿದ್ಧಮಾಡಿಕೊಂಡರು. ಅದರ ಮುಂಭಾಗಕ್ಕೆ ೨ ಅಡಿ ಉದ್ದ, ೧ ಅಡಿ ಅಗಲದ ರಟ್ಟಿನ ಮೇಲೆ "ವಿಶ್ವಧರ್ಮ ಪ್ರಚಾರಕರು" ಎಂದು ದೊಡ್ಡ ಅಕ್ಷರಗಳಲ್ಲಿ ಬರೆದ ಫಲಕವನ್ನು ನೇತುಹಾಕಿ ಶ್ರೀ ಗುರು ಬಸವ ಲಿಂಗಾಯನಮಃ ಎಂದು ಹೊರಡುತ್ತಿದ್ದರಂತೆ. ಯಾವ ಊರಿಗೆ ಹೋಗಲಿ, ಹೋದಲ್ಲೆಲ್ಲಾ ಇವರಿಗೆ ಜಗದ್ಗುರುಗಳಿಗೆ ಸತ್ಕರಿಸಿದಂತೆ ಗೌರವಿಸುತ್ತಿದ್ದರಂತೆ. ಇದಕ್ಕೆ ಒಂದು

ಕಾರಣವೂ ಇತ್ತು. ಒಂದು ವೇಳೆ ಇವರು ಸುಮ್ಮನೆ ಸಾಮಾನ್ಯ ಜನರಂತೆ ಗ್ರಾಮಗಳಿಗೆ ಹೋಗಿ ನಾವು ವಿಶ್ವಧರ್ಮ ಪ್ರಚಾರಕರು, ಪ್ರವಚನ ಮಾಡುತ್ತೇವೆ ಎಂದರೆ ಯಾರೂ ಇವರ ಹತ್ತಿರ ಸುಳಿಯುತ್ತಿರಲಿಲ್ಲವೇನೋ. ಆದರೆ ಇವರು ಅದಕ್ಕೆ ಪರಿಹಾರವಾಗಿ ಕಾವಿ ಬಟ್ಟೆಯನ್ನು ಧರಿಸುವ ಉಪಾಯವನ್ನು ಕಂಡುಕೊಂಡಿದ್ದರು. ಶಿವಸ್ವಾಮಿ ಅವರು ಊರು ಸಮೀಪಿಸುತ್ತಿದ್ದಂತೆ ಯಾವುದಾದರೊಂದು ರಸ್ತೆಯ ಪಕ್ಕದ ಹೊಲದೊಳಗೆ ಹೋಗಿ ತಮ್ಮ ಸಾಮಾನ್ಯ ಬಟ್ಟೆಗಳನ್ನು ಕಳೆದು ಸ್ವಾಮೀಜಿಗಳು ತೊಡುವಂತೆ ಕಾವಿ ಬಟ್ಟೆ ಧರಿಸುತ್ತಿದ್ದರಂತೆ. ಹೀಗೆ ತೊಟ್ಟ ಕಾವಿ ಬಟ್ಟೆಯೊಂದಿಗೆ ಊರ ಪ್ರವೇಶವಾಗುತಿತ್ತು. ಊರನ್ನು ಪ್ರವೇಶಿಸುತ್ತಿದ್ದಂತೆ ಜನರಿಗೆ ತಾವು ಪ್ರವಚನ ಮಾಡಲು ಬಂದಿದ್ದು ತಿಳಿಸುವುದಕ್ಕೋಸ್ಕರ ಕೈಯಲ್ಲೊಂದು ತಮಟೆ ಹಿಡಿದುಕೊಂಡು ಅದನ್ನು ಭಾರಿಸುತ್ತ ಊರಲ್ಲೊಂದು ಫರ್ಬಾತ್ ಫೇರಿ ಹೊಡೆಯುತ್ತಿದ್ದರಂತೆ. ಈ ಸಂದರ್ಭದಲ್ಲಿ ಒಬ್ಬರು ಮೊದಲು ಹೀಗೆ ಕೂಗುತ್ತಿದ್ದರು. 'ಇಂದು ಈ ಊರಿಗೆ ಯಾರು ಬಂದಿದ್ದಾರಪ್ಪಾ' ಅದಕ್ಕಿನ್ನೊಬ್ಬರು 'ಇಂದು ಈ ಊರಿಗೆ ವಿಶ್ವಧರ್ಮ ಪ್ರಚಾರಕರು ಬಂದಿದ್ದಾರಪ್ಪಾ' ಎಂದು ಹೇಳುತ್ತಿದ್ದರಂತೆ. ಮತ್ತೆ ಸ್ವಲ್ಪ ಮುಂದೆ ಹೋಗಿ 'ಇಂದು ಸಂಜೆ ಊರ ದೇವಸ್ಥಾನದಲ್ಲಿ ಪ್ರವಚನವಿದೆ' ಎಲ್ಲರೂ ಬಂದು ಕೇಳಬೇಕೆಂದು ಜನರಲ್ಲಿ ಮನವಿ ಮಾಡುತ್ತಿದ್ದರು.

ಹೀಗೆ ಸುಮಾರು ದಿನಗಳವರೆಗೆ ಇವರಿಬ್ಬರ ಪ್ರವಚನ ನಡೆಯಿತು. ತುಂಬಾ ಆಸಕ್ತಿಯಿಂದ ತಿಳಿದಷ್ಟು ವಿಷಯಗಳ ಬಗ್ಗೆ ಶಿವಸ್ವಾಮಿ ಅವರು ದೇವಾಲಯಗಳ ಮುಂದೆ ಸೇರಿದ ಜನರಿಗೆ ಪ್ರವಚನ ನೀಡುತ್ತಿದ್ದರಂತೆ. ಆನಂದ ಸಿದ್ಧಾಮಣಿ ಅವರು ಆ ಎಲ್ಲಾ ಪ್ರವಚನ ಕಾರ್ಯಕ್ರಮಗಳಿಗೆ ಸಂಚಾಲಕರಾಗಿರುತ್ತಿದ್ದರು. ವಿಶೇಷವಾಗಿ ಶಿವಸ್ವಾಮಿ ಅವರಿಗೆ ಈ ಸಂದರ್ಭ ತಂದುಕೊಟ್ಟ ಲೋಕಾನುಭವ ಮುಂದಿನ ಅವರ ಜೀವನದ ಸಿದ್ಧತೆಗೆ ಸಾಕಷ್ಟು ತಿಳುವಳಿಕೆಯನ್ನು ನೀಡಿತು ಎಂದು ಅವರು ಈಗಲೂ ನೆನಪಿಸಿಕೊಳ್ಳುತ್ತಾರೆ. ಸ್ವಾಮೀಜಿಗಳೆಂದರೆ ದಕ್ಷಿಣೆ, ಕಾಣಿಕೆ, ಕೊಡುಗೆಗಳನ್ನು

ಬಯಸುವ ಮನಸ್ಥಿತಿಯನ್ನು ನಾವು ಕಾಣುತ್ತೇವೆ. ಆದರೆ ನಾವಿಲ್ಲಿ ಗಮನಿಸಬೇಕಾದ ಗಮನಾರ್ಹ ಸಂಗತಿ ಎಂದರೆ ಪ್ರವಚನ ಮುಗಿದ ಬಳಿಕ ಈ ಸ್ವಾಮೀಜಿಗಳು ಜನರಿಂದ ಯಾವ ದಕ್ಷಿಣೆ ಆಗಲಿ, ಕೊಡುಗೆಗಳಾಗಲಿ ಸ್ವೀಕರಿಸುತ್ತಿರಲಿಲ್ಲ. ಕೆಲವು ಸಂದರ್ಭಗಳಲ್ಲಿ ಜನ ಕೊಡಲು ಬಂದರೂ ಕೂಡ ನಯವಾಗಿಯೇ ಅದನ್ನು ನಿರಾಕರಿಸುತ್ತದ್ದರಂತೆ. ಮತ್ತೆ ಕೆಲವು ಸಂದರ್ಭಗಳಲ್ಲಿ ಜನರು ಪ್ರವಚನ ಮುಗಿದ ಬಳಿಕ ಕಾಲಿಗೆ ನಮಸ್ಕರಿಸಲು ಮುಂದೆ ಬಂದಾಗಲೆಲ್ಲ ಶಿವಸ್ವಾಮಿ ಅವರು ತೀವ್ರ ಮುಜುಗರಕ್ಕೆ ಒಳಪಡುತ್ತಿದ್ದರು. ಏಕೆಂದರೆ ಮೂಲತಃ ಅವರು ಯಾವ ಸ್ವಾಮಿಗಳೂ ಅಲ್ಲ. ಮೇಲಾಗಿ ಕಾಲಿಗೆ ನಮಸ್ಕರಿಸುವ ಜನ ವಯಸ್ಸಿನಲ್ಲಿ ಇವರಿಗಿಂತ ಹಿರಿಯರಾಗಿರುತ್ತಿದ್ದರು. ಆದರೂ ಏನೂ ಮಾಡದ ಪರಿಸ್ಥಿಯಲ್ಲಿ ಮುಜಗರದಲ್ಲಿಯೇ ಸುಮ್ಮನಾಗಬೇಕಾದ ಪರಿಸ್ಥಿತಿ ಎದುರಾಗುತ್ತಿತ್ತು.

ಧುಮ್ಮನಸೂರು ಚೀನಕೇರಾ ಹಾಗೂ ತಾಲೂಕು ಕೇಂದ್ರ ಹುಮನಾಬಾದಿನ ಮಾರ್ಗ ಮಧ್ಯದಲ್ಲಿ ಬರುವ ಗ್ರಾಮ. ತತ್ವಪದಕಾರರಾಗಿ ಬಾಳಿಬದುಕಿದ ಶಿವಕವಿ ಪೂಜ್ಯ ಸಿದ್ಧಪ್ರಭುಗಳು ಇಲ್ಲಿಯೇ ಇದ್ದು ಲಿಂಗೈಕ್ಯರಾದವರು. ಶಿವಸ್ವಾಮಿ ಅವರು ಪೂಜ್ಯರ ವ್ಯಕ್ತಿತ್ವಕ್ಕೆ ಮಾರುಹೋಗಿ ಐದಾರು ವರ್ಷಗಳ ಕಾಲ ಅವರ ಸಾಮೀಪ್ಯದಲ್ಲಿದ್ದು, ದರ್ಶನ ಆಶೀರ್ವಾದ ಪಡೆಯುವದರೊಂದಿಗೆ ಅವರಿಂದ ಸಾಕಷ್ಟು ಕಲಿತರು. 'ನಾವು ಚಿಕ್ಕವರಿದ್ದಾಗ ಶ್ರೀಗಳು ನೂರಾರು ಸಲ ಸೈಕಲ್ ಮೇಲೆ ಕುಳಿತು ನಮ್ಮೂರಿಂದ ಹಾದು ಹೋಗಿರುವುದನ್ನು ನೋಡಿದ್ದೇನೆ. ಅವರು ನಮ್ಮ ಓಣಿಯಲ್ಲಿ ಬಂದೊಡನೆ ಸುತ್ತಲಿನ ಜನರೆಲ್ಲ ಓಡೋಡಿ ಬಂದು ಅವರ ಪಾದಕ್ಕೆ ಭಕ್ತಿಯಿಂದ ನಮಸ್ಕರಿಸುತ್ತಿದ್ದರು. ನಾವು ಕೂಡ ಪ್ರತೀಸಲ ದೊಡ್ಡವರನ್ನೇ ಅನುಸರಿಸುತ್ತಿದ್ದೆವು. ಪರೋಕ್ಷವಾಗಿ ಅವರ ದೈವೀಶಕ್ತಿಯ ಪ್ರಭಾವ ನನ್ನ ಮೇಲಾಗಿದೆ' ಎಂದು ಶಿವಸ್ವಾಮಿಯವರು ಈಗಲೂ ಆ ಸಂದರ್ಭಗಳನ್ನು ನೆನಪಿಸಿಕೊಳ್ಳುತ್ತಾರೆ.

ಶ್ರೀ ಕಲ್ಲಪ್ಪ ದೇವಣೆ ಗುರುಗಳು ಲಿಂಗದೀಕ್ಷೆ ನೀಡಿದ ಬಳಿಕ ಶಿವಸ್ವಾಮಿಯವರು ಅವರ ಪಟ್ಟ ಶಿಷ್ಯರಾಗಿ ಗುರುತಿಸಿಕೊಂಡರು. ಅವರೊಂದಿಗೆ ಅನೇಕ ಗ್ರಾಮಗಳಿಗೆ ತೆರಳಿ ಪ್ರವಚನಗಳನ್ನು ನೀಡಿದರು. ಮುಂದೆ ಸ್ವತಃ ತಾವೇ ಎಷ್ಟೋ ಗ್ರಾಮಗಳಲ್ಲಿ ಜನರನ್ನು ಸಂಘಟಿಸಿ ಪ್ರವಚನಗಳನ್ನು ನೀಡತೊಡಗಿದರು. ಇದೆಲ್ಲದರಿಂದಾಗಿ ಸಹಜವಾಗಿಯೇ ಜಿಲ್ಲೆಯ ಹಿರಿಯರ, ಸಾಧು ಸಂತರ, ಮಠಾಧೀಶರ ಸಾಮೀಪ್ಯ ದೊರೆಯಿತು. ಅವರಿಂದ ಮತ್ತಷ್ಟು ಕಲಿತು ಗಟ್ಟಿಗೊಂಡರು. ಶ್ರಾವಣ ಮಾಸ ಬಂತೆಂದರೆ ಇವರಿಗೆ ಬಿಡುವಿಲ್ಲದ ಕಾರ್ಯಕ್ರಮಗಳು. ೧೯೮೯-೯೦ರಲ್ಲಿ ಸ್ವಗ್ರಾಮ ಚೀನಕೇರಾದಲ್ಲಿ, ೧೯೯೧-೯೩ರವರೆಗೆ ಕಬೀರಾಬಾದವಾಡಿಯಲ್ಲಿ, ೧೯೯೪ರಲ್ಲಿ ಬಗದಲ್ ಗ್ರಾಮದಲ್ಲಿ, ೧೯೯೬ರಲ್ಲಿ ಯರಂಡಗಿಯಲ್ಲಿ, ೧೯೯೭ರಲ್ಲಿ ಲಕ್ಕನಗಾಂವ ಮತ್ತು ಜಮಖಂಡಿ ತಾಲೂಕಿನ ಮರೆಗುದ್ದಿ (ಎಪ್ರಿಲ್) ಗ್ರಾಮದಲ್ಲಿ, ೧೯೯೮ರಲ್ಲಿ ದೇವರದಾಸಿಮಯ್ಯನವರ ಜನ್ಮಸ್ಥಳವಾದ ಮುದನೂರಿನಲ್ಲಿ, ೧೯೯೯ರಲ್ಲಿ ಮನ್ನಳ್ಳಿಯಲ್ಲಿ, ೨೦೦೦ರಲ್ಲಿ ನಿರ್ಣಾ ಗ್ರಾಮದಲ್ಲಿ, ೨೦೦೧ರಲ್ಲಿ ತಾಳಮಡಗಿಯಲ್ಲಿ, ೨೦೦೩ರಲ್ಲಿ ಹುಲಸೂರಿನಲ್ಲಿ, ೨೦೦೪ರಲ್ಲಿ ಬೇಲೂರಿನಲ್ಲಿ ೪೮ ದಿನಗಳ ಕಾಲ, ೨೦೦೭ರಲ್ಲಿ ಇಂಡಿ ತಾಲೂಕಿನ ಚನೆಗಾಂವನಲ್ಲಿ, ೨೦೦೮ರಲ್ಲಿ ಬೇನಚಿಂಚೋಳಿಯಲ್ಲಿ, ೨೦೦೯ರಲ್ಲಿ ಬಿಎಸ್‌ಎಸ್‌ಕೆ ಹಳ್ಳಿಖೇಡ ಗ್ರಾಮದಲ್ಲಿ, ೨೦೧೦ರಲ್ಲಿ ಖಟಕಚಿಂಚೋಳಿ, ೨೦೧೧ಕ್ಕೆ ೨ನೇ ಸಲ ತಾಳಮಡಗಿಯಲ್ಲಿ, ೨೦೧೮ಕ್ಕೆ ಬೀದರಿನ ಬಸವ ಕೇಂದ್ರದಲ್ಲಿ ನಿರಂತರವಾಗಿ ಪ್ರವಚನಗಳನ್ನು ನೀಡಿದರು. ಹೀಗೆ ೧೯೯೦ ರಿಂದ ೨೦೦೪ರವರೆಗೆ ಅಂದಾಜು ೨೦೦ಕ್ಕೂ ಹೆಚ್ಚು ಪ್ರವಚನಗಳನ್ನು ನೀಡಿದ್ದಾರೆ. ಈ ಎಲ್ಲ ಪ್ರವಚನಗಳು ಅವರಿಗೆ ಒಳ್ಳೆಯ ಹೆಸರುಗಳನ್ನು ಖ್ಯಾತಿಯನ್ನು ತಂದುಕೊಟ್ಟವು. ಅಲ್ಲದೇ ಅಕ್ಕನವರಾದ ಶ್ರೀಮತಿ ಅರ್ಚನಾರವರು ಕೂಡ ಈ ಪ್ರವಚನದ ಫಲವಾಗಿಯೇ ಇವರ ಬಾಳಲ್ಲಿ ಬಂದರು.

ಹುಮನಾಬಾದ ತಾಲೂಕಿನ ೭ ಗ್ರಾಮಗಳನ್ನು ಹೊರತುಪಡಿಸಿ ಉಳಿದೆಲ್ಲ ಗ್ರಾಮಗಳಲ್ಲಿ ಇವರು ತಮ್ಮ ಪ್ರವಚನಗಳನ್ನು ನೀಡಿದ್ದಾರೆ. ಅದರಂತೆ ಬಸವಕಲ್ಯಾಣ ತಾಲೂಕಿನ ೨೫ ಗ್ರಾಮಗಳಲ್ಲಿ, ಭಾಲ್ಕಿ ತಾಲೂಕಿನ ೫ ಗ್ರಾಮಗಳಲ್ಲಿ, ಕಲಬುರಗಿ ಜಿಲ್ಲೆ ಸೇಡಂ ತಾಲೂಕಿನ ೨೫ ಗ್ರಾಮಗಳಲ್ಲಿ, ಆಳಂದ ತಾಲೂಕಿನ ೫ ಗ್ರಾಮಗಳಲ್ಲಿ ಹಾಗೂ ಸೋಲ್ಲಾಪುರ ಸಮೀಪ ಬರುವ ವಳಸಂಗ ಎಂಬಲ್ಲಿ ಇವರು ಅಷ್ಟಾವರಣ ಪ್ರವಚನಗಳನ್ನು ನೀಡಿದ್ದಾರೆ. ೫ ವರ್ಷಗಳ ಕಾಲ ಬಸವಕಲ್ಯಾಣದ ಅನುಭವ ಮಂಟಪದ ಆಶ್ರಯದಲ್ಲಿ ಜಿಲ್ಲೆಯ ಹಳ್ಳಿ-ಹಳ್ಳಿಗಳಲ್ಲಿ ನಡೆಯುತ್ತಿದ್ದ ಮಾಸಿಕ ಲಿಂಗಾನುಭವ ಗೋಷ್ಠಿಗೆ ತಾಳಮಡಗಿಂಯ ಶ್ರೀ ಶಾಂತಪ್ಪ ಧಡಿಮಾಳರೊಂದಿಗೆ ಪ್ರವಚನಗಳನ್ನು ನೀಡಿದ್ದಾರೆ. ಇದಕ್ಕಾಗಿ ಇವರಿಗೆ ಮಾಸಿಕ ೪೦೦ ರೂಪಾಯಿಗಳು ಸಿಗುತ್ತಿದ್ದವು. ಕೆಲವೊಂದಿಷ್ಟು ದಿನ ಚಿತ್ರದುರ್ಗದ ಡಾ.ಶಿವಮೂರ್ತಿ ಮುರುಘಾ ಶರಣರು ಪ್ರತಿ ತಿಂಗಳು ಧರ್ಮ ಪ್ರಚಾರ ಕಾರ್ಯಕ್ಕಾಗಿ ಇವರಿಗೆ ಮತ್ತು ಶಾಂತಪ್ಪನವರಿಗೆ ૩ ವರ್ಷಗಳ ಕಾಲ ಮಾಸಿಕ ೧೫೦೦ ರೂಪಾಯಿಗಳನ್ನು ನೀಡುತ್ತಿದ್ದರಂತೆ.

ಪ್ರವಚನದ ಕೆಲವು ಅವಿಸ್ಮರಣೀಯ ಘಟನೆಗಳು.

ಶಿವಸ್ವಾಮಿ ಅವರು ಗುರುಗಳಾದ ಶ್ರೀ ಕಲ್ಲಪ್ಪ ದೇವಣಿ ಅವರೊಂದಿಗೆ ಪ್ರವಚನ ನೀಡಲು ಹೋದ ಸಂದರ್ಭದಲ್ಲಿ ಹಾಗೂ ಇನ್ನಿತರೆ ಸಂದರ್ಭಗಳಲ್ಲಿ ಎದುರಾದ ಸಮಸ್ಯೆಗಳನ್ನು ಹಾಗೂ ಸ್ವಾರಸ್ಯಕರವಾದ ಸನ್ನಿವೇಶಗಳನ್ನು ಹೀಗೆ ಹಂಚಿಕೊಳ್ಳುತ್ತಾರೆ. "ಒಮ್ಮೆ ಇವರು, ಗುರುಗಳಾದ ಶ್ರೀ ಕಲ್ಲಪ್ಪ ದೇವಣಿ ಅವರೊಂದಿಗೆ ಚೀನಕೇರಾ ಗ್ರಾಮದ ಹತ್ತಿರ ಬರುವ ಇತಿಹಾಸ ಪ್ರಸಿದ್ಧ ಜಲಸಂಗಿ ಗ್ರಾಮಕ್ಕೆ ಪ್ರವಚನಕ್ಕಾಗಿ ಹೋಗಿದ್ದರಂತೆ. ಪ್ರವಚನ ಮಾಡುವಾಗ ಊರ ಜನರೆಲ್ಲ ಬಂದು ಸೇರುವರು. ಅದರಂತೆ ಗ್ರಾಮದ ದಲಿತ ಜನರು ಕೂಡ ಬಂದು ಪ್ರವಚನವನ್ನು ಕೇಳುತ್ತಿದ್ದರು. ಆದರೆ ಉಳಿದ ಜನರಿಂದ ಅವರು

ಅಂತರವನ್ನು ಕಾಪಾಡಿಕೊಂಡು ದೂರ-ದೂರ ಕುಳಿತುಕೊಳ್ಳುತ್ತಿದ್ದರು. ಇದನ್ನು ಗಮನಿಸಿದ ಗುರುಗಳು, ಒಂದು ದಿನ ತಮ್ಮ ಪ್ರವಚನ ಮುಗಿದ ಬಳಿಕ ಆ ಜನರ ಬಳಿ ಹೋಗಿ ನಾಳೆಯಿಂದ ನೀವು ಹೀಗೆ ದೂರ ಕುಳಿತುಕೊಳ್ಳುವುದು ಬೇಡ. ದೇವಾಲಯದ ಒಳಗಡೆ ಬಂದು ಎಲ್ಲರೊಂದಿಗೆ ಕುಳಿತುಕೊಳ್ಳಿ ಎಂದರಂತೆ. ಅದಕ್ಕವರು ಆಗಲಿ ಸ್ವಾಮಿ ಎಂದು ಹೊರಟರಂತೆ. ಮಾರನೇ ದಿನ ಗುರುಗಳ ಆಜ್ಞೆಯಂತೆ ದಲಿತರೆಲ್ಲ ದೇವಾಲಯದ ಒಳಗಡೆ ಬಂದು ಕುಳಿತು ಪ್ರವಚನ ಕೇಳಲು ಪ್ರಾರಂಭಿಸಿದಂತೆ, ಸವರ್ಣಿಯರೆಲ್ಲ ಪ್ರವಚನದಿಂದ ಮಧ್ಯದಲ್ಲಿಯೇ ಎದ್ದು ಹೊರಡಲು ಪ್ರಾರಂಭಿಸಿದರಂತೆ. ಅದರಿಂದಾಗಿ ನೊಂದ ದಲಿತರು ನಮ್ಮಿಂದಾಗಿ ಊರ ಜನ ಪ್ರವಚನ ಕೇಳದೆ ಎದ್ದು ಹೋದರೆಂದು ಭಾವಿಸಿ, ಸ್ವಾಮೀಜಿಗಳಿಗೆ ನಮ್ಮಿಂದ ತೊಂದರೆ ಆಗಬಾರದೆಂದು ತಾವು ಎದ್ದು ಹೋದರಂತೆ. ಮಾರನೇ ದಿನ ಪ್ರವಚನ ಕೇಳಲು ಯಾರೂ ಬರಲಿಲ್ಲ. ಕೊನೆಗೆ ಪರಿಸ್ಥಿತಿ ಹೇಗಾಯಿತು ಎಂದರೆ ಇವರಿಗಾಗಿ ಅವರು, ಅವರಿಗಾಗಿ ಇವರು ಪ್ರವಚನ ಕೇಳಲು ಬರುವುದನ್ನು ನಿಲ್ಲಿಸಿದರು. ಆಗ ನಮ್ಮಿಬ್ಬರಿಗೆ ಬಿಟ್ಟರೆ ದೇವಸ್ಥಾನದಲ್ಲಿ ಪ್ರವಚನ ಕೇಳಲು ಯಾರೂ ಇರುತ್ತಿರಲಿಲ್ಲ. ಆದರೆ ನಾವು ಧೃತಿಗೆಡಲಿಲ್ಲ. ಪ್ರವಚನ ಮಾಡಿಯೇ ಸಿದ್ಧ ಎಂಬಂತೆ ಧ್ವನಿವರ್ಧಕಗಳನ್ನು ಬಳಸಿಕೊಂಡು ನಮ್ಮ ಪ್ರವಚನಗಳನ್ನು ಮುಂದುವರೆಸಿದೆವು".

ಹಳ್ಳಿಗಳಲ್ಲಿ ಜಾತೀಯತೆ ಹಾಸುಹೊಕ್ಕಾಗಿದ್ದ ಕಾಲವದು. ಜನರಿಗೆ ಅದು ತಪ್ಪು ಎಂದು ಹೇಳಿದರೆ ಅರ್ಥೈಸಿಕೊಳ್ಳುತ್ತಿರಲಿಲ್ಲ. ಎಷ್ಟೋ ಸಂದರ್ಭಗಳಲ್ಲಿ ಪರಿಸ್ಥಿತಿ ಹೇಗಿರುತ್ತಿತ್ತೆಂದರೆ ದಲಿತ ಸಮುದಾಯದ ಹಿರಿಕರೇ ಪ್ರವಚನಕಾರರ ಜಾತಿ ವಿರೋಧಿ ನಿಲುವುಗಳನ್ನು ವಿರೋಧಿಸುತ್ತಿದ್ದರಂತೆ. ಇದೆಲ್ಲ ಆ ದೇವರ ಸೃಷ್ಟಿ. ಹಾಗಾಗಿ ಅದನ್ನು ಅಲ್ಲಗಳೆಯುವುದು ಎಂದರೆ ಆ ದೇವರಿಗೆ ಮಾಡಿದ ದ್ರೋಹ ಎಂಬರ್ಥದಲ್ಲಿ ಅವರು ಇವರೊಂದಿಗೆ ವಾದಿಸುತ್ತಿದ್ದರು. ಇದೇ

ಮಾದರಿಯ ಅನುಭವವೊಂದನ್ನು ತಮ್ಮ ಮನೆಯಲ್ಲಿಯೇ ಅನುಭವಿಸಿದ್ದ ಬಗ್ಗೆ ಶ್ರೀ ಮಾರುತಿ ಮಾನ್ಪಡೆಯವರು ನ್ಯಾಷನಲ್ ಲಾ ಸ್ಕೂಲ್ ಯೂನಿವರ್ಸಿಟಿಗೆ ನೀಡಿದ ಸಂದರ್ಶನದಲ್ಲಿ ಹೇಳಿಕೊಂಡಿದ್ದರು. ಅವರ ತಂದೆ ತಾಯಿಗಳು 'ಲಿಂಗಾಯತ್ರು ಮೇಲ್ಜಾತಿಯವ್ರು, ಅವರು ನಮ್ಮನೆಗೆ ಬಂದ್ರೆ ನಮಗೆ ಪಾಪ ಬರ್ತೈತಿ' ಅಂತಿದ್ದರಂತೆ. ಇದು ಅವರ ಮೌಢ್ಯ ಎನ್ನುವುದುಕ್ಕಿಂತ ಮುಗ್ಧತೆಯಾಗಿತ್ತು. ಶತಶತಮಾನಗಳಿಂದ ಅವರ ತಲೆಗಳಲ್ಲಿ ಅದನ್ನು ಹಾಗೆ ಬಿತ್ತಲಾಗಿತ್ತು. ಅಕ್ಷರ ಜ್ಞಾನವಿಲ್ಲದ ಹಿರಿಕರು ಅದನ್ನೇ ನಂಬಿ ತಮ್ಮ ತಲೆವಾರುಗಳಿಗೆ ಬಳುವಳಿಯಾಗಿ ಕೊಂಡೊಯ್ಯುತ್ತಿದ್ದರು. 'ಈ ಘಟನೆಯಿಂದಾಗಿ ನನಗೆ ಒಳೊಗೊಳಗೆ ಕೋಪ, ದುಃಖ ಇನ್ನೊಂದು ಕಡೆ ಮುಜುಗರ ಹಾಗೂ ಅವರ ಅಜ್ಞಾನಕ್ಕೆ ಒಳಗೊಳಗೆ ನಗುವು ಬರುತ್ತಿತ್ತು' ಎಂದು ಶಿವಸ್ವಾಮಿಯವರು ಈ ಘಟನೆಯನ್ನು ವಿವರಿಸುತ್ತಾರೆ.

ಗುರುಗಳಿಂದ ಸಾಕಷ್ಟು ಕಲಿತ ಮೇಲೆ ಶಿವಸ್ವಾಮಿ ಅವರು ಮುಂದೆ ತಾವೇ ಸ್ವತಃ ಪ್ರವಚನ ನೀಡಲು ಗ್ರಾಮಗಳಿಗೆ ತೆರಳಲು ಪ್ರಾರಂಭಿಸಿದರು. ಒಮ್ಮೆ ಬಸವಕಲ್ಯಾಣ ತಾಲೂಕಿನ ಸುಮತಾಣ ಗ್ರಾಮಕ್ಕೆ ಹತ್ತು ದಿನಗಳ ಕಾಲ ಪ್ರವಚನಕ್ಕೆ ಹೋಗಿದ್ದರು. ಊರಿನ ಜನರ ಸಹಕಾರದಿಂದಾಗಿ ಎರಡು-ಮೂರು ದಿನಗಳ ಕಾಲ ನಿರಂತರವಾಗಿ ಒಳ್ಳೆಯ ರೀತಿಯಿಂದ ಪ್ರವಚನವೂ ನಡೆಯಿತು. ಒಂದು ದಿನ ಮಧ್ಯಾಹ್ನದ ವಿಶ್ರಾಂತಿ ಮುಗಿಸಿ ಅವರಿಗೆ ನೀಡಲಾಗಿದ್ದ ಕೊಠಡಿಯಲ್ಲಿ ಕುಳಿತ್ತಿದ್ದರು. ಅಂದಾಜು ೩೦ ವರ್ಷ ವಯಸ್ಸಿನ ಓರ್ವ ಹೆಣ್ಣು ಮಗಳು ಇದ್ದಕ್ಕಿದ್ದಂತೆ ಆ ದಿನ ಇವರ ಕೋಣೆಯನ್ನು ಪ್ರವೇಶಿಸಿ, ಇವರನ್ನು ನಮಸ್ಕರಿಸಿ ಕುಳಿತುಕೊಂಡು ಅಳಲು ಪ್ರಾರಂಭಿಸಿದರಂತೆ. ಅಳುವುದನ್ನು ಕೇಳಿಸಿಕೊಂಡ ಇವರು ಏನು ತಾಯಿ, ಯಾಕೆ ಅಳುತ್ತಿದ್ದೀರಿ ಎಂದು ಪ್ರಶ್ನಿಸಲಾಗಿ ಅವಳು, 'ಸ್ವಾಮಿ ನನ್ನ ಗಂಡ ತುಂಬಾ ಕುಡಿಯುತ್ತಾನೆ. ಮನೆಯ ಪರಿಸ್ಥಿತಿ ಸರಿಯಿಲ್ಲ. ಅವರಿಂದಾಗಿ ನಮ್ಮ ಮನೆಯವರ ಮಾನಸಿಕ ನೆಮ್ಮದಿಯೆಲ್ಲಾ ಹಾಳಾಗಿದೆ.

ಹೇಗಾದರು ಮಾಡಿ ಅವರನ್ನು ಆ ಕುಡಿತದ ಚಟದಿಂದ ಮುಕ್ತಿಗೊಳಿಸಿ ಸ್ವಾಮಿ' ಎಂದು ಗೋಗರೆದು ಕೇಳಿಕೊಂಡರು. ಆದರೆ ಶಿವಸ್ವಾಮಿ ಅವರಿಗೆ ಏನು ಮಾಡಬೇಕೆಂಬುದೇ ತೋಚದಾಗಿ ಸುಮ್ಮನೆ ಕುಳಿತುಕೊಂಡರಂತೆ. ಆ ಸಂದರ್ಭವನ್ನು ಅವರು ಹೀಗೆ ವಿವರಿಸುತ್ತಾರೆ. 'ನಾನು ಪ್ರವಚನಕಾರನೇ ಹೊರತು ಮ್ಯಾಜಿಕ್ ಸ್ವಾಮಿ ಅಲ್ಲ ಎಂಬುದನ್ನು ಅವರಿಗೆ ಹೇಗೆ ವಿವರಿಸುವುದು. ತುಂಬಾ ಸಂಧಿಗ್ಧ ಸನ್ನಿವೇಶದಲ್ಲಿ ನಾನು ಸಿಕ್ಕಿಹಾಕಿಕೊಂಡಿದ್ದೆ. ನನಗೆ ಈ ಬಗ್ಗೆ ಯಾವ ಗಿಡಮೂಲಿಕೆಯಾಗಲಿ, ಔಷಧಿಯಾಗಲಿ ತಿಳಿದಿರಲಿಲ್ಲ'. ಕೊನೆಗೆ ಏನು ಮಾಡುವುದು ಎಂದು ಒಂದು ಕ್ಷಣ ಯೋಚಿಸಿ ಅವರಿಗೆ ಒಂದು ವಿಭೂತಿಯನ್ನಾದರೂ ಕೊಟ್ಟು ದಿನಾಲು ಇದನ್ನು ಧರಿಸಲು ಹೇಳಬೇಕೆಂದುಕೊಂಡರು. ಆದರೆ ಅದರ ಬಗ್ಗೆ ವಿಚಾರಿಸಲಾಗಿ ಅವರು ಮೂಲತಃ ಜಂಗಮರಾಗಿದ್ದರಿಂದ ಅವರಾಗಲೇ ಅದನ್ನು ತಪ್ಪದೆ ಪ್ರತಿದಿನ ಧರಿಸುತ್ತಿದ್ದರಂತೆ. ಹಾಗಾಗಿ ಶಿವಸ್ವಾಮಿ ಅವರ ಯೋಜನೆ ಕೈಗೂಡಲಿಲ್ಲ.

ಕೊನೆಗೆ ಅವರ ಮನೆಗೆ ಇವರೇ ಹೋಗಿ ಒಂದರ್ಧ ಗಂಟೆ ಅವರೊಂದಿಗೆ ಮಾತನಾಡಿ ಆ ಮೂಲಕ ಅವರಿಗೆ ಅವರ ತಪ್ಪಿನ ಮನವರಿಕೆ ಮಾಡಿಕೊಡುವುದು. ತನ್ನ ತಪ್ಪನ್ನು ಅವರು ತಿದ್ದಿಕೊಳ್ಳಲು ಒಪ್ಪಿಕೊಂಡರೆ ಮರಳಿ ಬರುವುದು. ಇಲ್ಲವಾದರೆ ಅಲ್ಲಿಯೇ ಅವರ ಎರಡು ಕಾಲುಗಳನ್ನು ಜೋರಾಗಿ ಹಿಡಿದುಕೊಂಡು ಅವರ ಪಾದಗಳಿಗೆ ತಮ್ಮ ಹಣೆ ಹಚ್ಚಿ, ನೀವು ಚಟ ಬೀಡುವುದಾಗಿ ಆ ದೇವರ ಮೇಲೆ ಪ್ರಮಾಣ ಮಾಡುವವರೆಗೂ ನಾನು ನಿಮ್ಮ ಪಾದ ಬಿಡುವುದಿಲ್ಲವೆಂದು ಗಟ್ಟಿಯಾಗಿ ಹಿಡಿದುಕೊಳ್ಳುವುದು ಎಂದು ಯೋಜನೆ ಹಾಕಿಕೊಂಡರಂತೆ. ಅದರಂತೆ ಆ ಹೆಣ್ಣುಮಗಳೊಂದಿಗೆ ಅವರ ಮನೆಗೆ ಹೋದರು. ಸ್ವಾಮೀಜಿ ಮನೆಗೆ ಬಂದರು ಎಂದು ಅವರ ಯಜಮಾನರಾದ ಶ್ರೀ ವಿಶ್ವನಾಥರು ಇವರ ಬಳಿಬಂದು ಕುಳಿತರು. ಅವರಿಗೆ ಒಂದಿಷ್ಟು ತಿಳುವಳಿಕೆಯನ್ನು ಹೇಳಿದರೂ ಪ್ರಯೋಜನವಾಗದನ್ನು ಮನಗಂಡು ಶಿವಸ್ವಾಮಿ ಅವರು

ಅಂದುಕೊಂಡಂತೆ ಗಟ್ಟಿಯಾಗಿ ಅವರ ಪಾದಕ್ಕೆ ತನ್ನ ಹಣೆಹಚ್ಚಿ ಕಾಲು ಹಿಡಿದುಕೊಂಡರಂತೆ. ಆ ಹೆಣ್ಣುಮಗಳು ಸ್ವಾಮಿಗಳ ಈ ಅನೀರಿಕ್ಷಿತ ನಡೆಯಿಂದಾಗಿ ಗಾಬರಿಗೊಂಡರು. 'ಪ್ರವಚನಕ್ಕೆ ಬಂದ ಸ್ವಾಮಿಗಳು ನನ್ನ ಕುಡುಕ ಗಂಡನ ಪಾದ ಹಿಡಿಯುವುದು ಎಂದರೆ ಏನರ್ಥ. ಅಯ್ಯೋ ಬಿಟ್ಟುಬಿಡಿ ಸ್ವಾಮಿ. ಇಂತಹ ಪಾಪಿಯ ಪಾದಗಳನ್ನೇಕೆ ನೀವು ಹಿಡಿದುಕೊಂಡಿರಿ ಬಿಟ್ಟುಬಿಡಿ ಗುರುಗಳೇ' ಎಂದು ಗೋಗರೆಯಲು ಪ್ರಾರಂಭಿಸಿದರು. ಅಷ್ಟರಲ್ಲೇ ಆ ವ್ಯಕ್ತಿ ಜೋರಾಗಿ ಅಳುತ್ತಾ 'ನನ್ನದು ತಪ್ಪಾಯ್ತು ಸ್ವಾಮಿ. ಇನ್ನುಂದೆ ನಾನೆಂದು ಅದನ್ನು ನನ್ನ ಕೈಯಾರೆ ಮುಟ್ಟುವುದಿಲ್ಲ. ದೇವರಾಣೆ ಮಾಡಿ ಪ್ರತಿಜ್ಞೆ ಮಾಡುತ್ತೇನೆ' ಎಂದು ಬಿಕ್ಕಳಿಸಿ ನುಡಿದಾಗ ಇವರಿಗೆ ಯುದ್ಧವೇ ಗೆದ್ದಷ್ಟು ಖುಷಿ. ಆದರೂ ಆ ಕುಡುಕನ ಮೇಲೆ ಇವರಿಗೆ ಸಂಪೂರ್ಣವಾಗಿ ನಂಬಿಕೆ ಬರಲಿಲ್ಲವಂತೆ. ಸ್ವಾಮೀಜಿ ನಾಟಕವಾಡಿದಂತೆ ಅವನು ಪರಿಸ್ಥಿತಿಯ ಮುಜುಗರದಿಂದ ತಪ್ಪಿಸಿಕೊಳ್ಳಲು ನಾಟಕವಾಡಿರಬೇಕು ಎಂಬುದು ಇವರ ಅನುಮಾನವಾಗಿತ್ತೋ ಏನೋ?. ಆದರೆ ಮುಂದೊಂದು ದಿನ ಅವರ ಅನುಮಾನಕ್ಕೆ ಉತ್ತರವೂ ಸಿಕ್ಕಿತು. ೧೨ ವರ್ಷಗಳ ನಂತರ ಒಮ್ಮೆ ಆ ಮಹಿಳೆ ಬಸವಕಲ್ಯಾಣದಲ್ಲಿ ಶಿವಸ್ವಾಮಿಯವರನ್ನು ಕಂಡು, ಗುರುತು ಹಿಡಿದು ಸಂತೋಷದಿಂದಲೇ 'ಸ್ವಾಮಿ ಈಗ ನನ್ನ ಗಂಡ ಕುಡಿಯುತ್ತಿಲ್ಲ. ಅಂದಿನಿಂದ ಇಂದಿನವರೆಗೆ ಅದನ್ನು ಮುಟ್ಟಿಲ್ಲ. ಕನಸಿನಲ್ಲಿಯೂ ಅದನ್ನು ನೆನಸಿಕೊಳ್ಳುತ್ತಿಲ್ಲವೆಂದು, ತುಂಬಾ ಒಳ್ಳೆಯವರಾಗಿ ಜೀವನ ನಡೆಸುತ್ತಿದ್ದಾರೆಂದು' ಹೇಳಿದಳಂತೆ. ಓರ್ವ ನಿಜ ಸ್ವಾಮಿಯ ಪ್ರವಚನಕ್ಕೆ ಇದಕ್ಕಿಂತ ಒಳ್ಳೆಯ ಪ್ರತಿಫಲವೆಂಬುದಿದೆಯೇ? ನನಗಂತೂ ಕಾಣಿಸುತ್ತಿಲ್ಲ.

ಬಸವಕಲ್ಯಾಣ ತಾಲೂಕಿನ ಯರಂಡಗಿಯಲ್ಲಿನ ಒಂದು ಕಾರ್ಯಕ್ರಮದ ಸಮಾರೋಪಕ್ಕೆಂದು ವಿಶ್ವಕಲ್ಯಾಣ ಪತ್ರಿಕೆಯ ಸಂಪಾದಕರಾಗಿದ್ದ ಶ್ರೀ ಬಿ.ಮಹಾದೇವಪ್ಪನವರು ಶಿವಸ್ವಾಮಿಯವರನ್ನೊಮ್ಮೆ ಕರೆಸಿದ್ದರು. ಆಗಷ್ಟೇ ಇವರಿಗೆ ಮದುವೆಯಾಗಿ ಐದಾರು ತಿಂಗಳಾಗಿತ್ತು.

ಹಾಗಾಗಿ ನವದಂಪತಿಗಳನ್ನು ಈ ನೆಪದಲ್ಲಿ ಸನ್ಮಾನಿಸುವ ಕಾರ್ಯಕ್ರಮವನ್ನು ಊರಿನವರು ಹಮ್ಮಿಕೊಂಡಿದ್ದರಂತೆ. ಪ್ರವಚನಗಳಲ್ಲಿ ಸಾಂದರ್ಭಿಕವಾಗಿ ವಚನಗಳನ್ನು ಬಳಸಿಕೊಂಡು ಎಷ್ಟೇ ಸ್ವಾರಸ್ಯಕರವಾಗಿ ಮೌಢ್ಯಗಳನ್ನು ವಿಶ್ಲೇಷಿಸಿದ್ದರು ಕೂಡ ಪ್ರಾಯೋಗಿಕವಾಗಿ ಅವುಗಳನ್ನು ವೇದಿಕೆಯ ಮೇಲೆ ಖಂಡಿಸುವುದು ಜನರಿಗೆ ಹೆಚ್ಚು ಮನಮುಟ್ಟತ್ತದೆ ಎಂದು ಭಾವಿಸಿ, ವೇದಿಕೆ ಮೇಲೆ ಹಾಕಿದ ಆಸನಗಳಲ್ಲಿ ಇವರು ಎಡಕ್ಕೆ ಮತ್ತು ತಮ್ಮ ಶ್ರೀಮತಿಯವರನ್ನು ಬಲಕ್ಕೆ ಕುಳ್ಳರಿಸಿದರಂತೆ. ಸಭೆಯಲ್ಲಿದ್ದ ಜನ ಅದನ್ನು ನೋಡುತ್ತಿದ್ದಂತೆ ಗುಸುಗುಸು ಮಾತನಾಡಲು ಪ್ರಾರಂಭಿಸಿದರು. ಕೆಲವರಂತು ಎದ್ದುನಿಂತು ಸ್ವಾಮೀಜಿಯವರೆ ನೀವು ಬಲಕ್ಕೆ ಕುಳಿತುಕೊಳ್ಳಿ, ಮನೆಯವರನ್ನು ಎಡಕ್ಕೆ ಕುಳ್ಳಿರಿಸಿ ಎಂದರಂತೆ. ಆಗ ಅವರು ಧ್ವನಿವರ್ಧಕದಲ್ಲಿ ಹಾಗೆ ನಾವು ಕುಳಿತುಕೊಳ್ಳಲು ಕಾರಣವೇನೆಂಬುದನ್ನು ಜನರಿಗೆ ಸಂದರ್ಭೋಚಿತವಾಗಿ ವಿವರಿಸಿ ಕುಳಿತುಕೊಂಡರಂತೆ. ಹೀಗೆ ಶಿವಸ್ವಾಮಿಯವರು ಹೋದಕಡೆಗಳೆಲ್ಲ ಸುಮ್ಮನೆ ಭಾಷಣ ಮಾಡಿದವರಲ್ಲ. ಅದನ್ನು ಜನರಿಗೆ ಹೇಗೆ ಮನಕ್ಕೆ ಮುಟ್ಟಿಸಬೇಕು ಎಂಬುದರ ಬಗ್ಗೆ ಚಿಂತಿಸುತ್ತಿದ್ದರು. ಇದು ಅವರ ಪ್ರವಚನಗಳ ವೈಶಿಷ್ಟ್ಯ.

ಸಾಮಾನ್ಯವಾಗಿ ನಮ್ಮಲ್ಲಿ ದಂಪತಿಗಳು ಮದುವೆ ಮುಂಜಿ ಇತರೆ ಕಾರ್ಯಕ್ರಮಗಳಲ್ಲಿ ಕುಳಿತುಕೊಳ್ಳಬೇಕಾದರೆ ಹೆಣ್ಣು ಎಡಕ್ಕೆ ಮತ್ತು ಗಂಡು ಬಲಕ್ಕೆ ಕುಳಿತುಕೊಳ್ಳಬೇಕೆಂಬ ಅಲಿಖಿತವಾದ ನಿಯಮವಿದೆ. ಸಂಪ್ರದಾಯ ಏಕೆ? ಹೇಗೆ ಪ್ರಾರಂಭವಾಯಿತು ಯಾರಿಗೂ ತಿಳಿಯದು. ಆದರೆ ಇಲ್ಲಿ ಹೆಣ್ಣನ್ನು ತುಚ್ಛೀಕರಿಸಿ ನೋಡುವ ಇರಾದೆಯಂತೂ ಸ್ಪಷ್ಟವಾಗಿದೆ. ಅವಳನ್ನು ನೈತಿಕವಾಗಿ ಕುಸಿಯುವಂತೆ ಮಾಡುವ, ಸ್ತ್ರೀ ಶೋಷಣೆಯ ಹಾಗೂ ಗಂಡಿಗಿಂತ ಹೆಣ್ಣು ದುರ್ಬಲಳು ಎಂಬ ಹುನ್ನಾರದ ಕ್ರಮವಿದು ಎಂಬುದನ್ನಂತೂ ಎಲ್ಲರು ಒಪ್ಪಲೇಬೇಕು. ಶಿವಸ್ವಾಮಿಯವರು ಅದನ್ನು ಪ್ರಾಯೋಗಿಕವಾಗಿ ಖಂಡಿಸುವ ಮೂಲಕ ಅಂದಿನ ಸಭೆಯಲ್ಲಿ ಸಭಿಕರಿಗೆ ಮಾದರಿ ಪಂಕ್ತಿಯನ್ನು ಹಾಕಿಕೊಟ್ಟರು. ಹೀಗೆ ಶಿವಸ್ವಾಮಿಯವರು

ಹೋದಕಡೆಗಳೆಲ್ಲ ಈ ಮಾದರಿಯ ಪದ್ಧತಿಗಳನ್ನು ಜನರ ನಡವಳಿಕೆಗಳನ್ನು ವಿರೋಧಿಸುತ್ತಲೇ ಬಂದಿದ್ದಾರೆ.

ಒಮ್ಮೆ ಬಸವಕಲ್ಯಾಣ ತಾಲೂಕಿನ ಖಂಡಾಳ ಗ್ರಾಮದಲ್ಲಿ ಪ್ರವಚನಕ್ಕೆ ಹೋದ ಸಂದರ್ಭದಲ್ಲಿ ನಡೆದ ಘಟನೆ ಇದು. ಮಧ್ಯಾಹ್ನದ ಊಟ ಮುಗಿಸಿ ಊರ ಹೊರವಲಯದಲ್ಲಿ ಗ್ರಾಮದ ಶಿವಾನಂದ ಎಂಬುವವರೊಂದಿಗೆ ಓಡಾಡುತ್ತಿರುವಾಗ ಶಾಲೆಯ ಛಾವಣಿಯ ಮೇಲೊಂದು ಮಂಗ ತುಂಬಾ ನಿತ್ರಾಣ ಸ್ಥಿತಿಯಲ್ಲಿರುವುದನ್ನು ಕಂಡು ಅದರ ಹತ್ತಿರಕ್ಕೆ ಹೋದರು. ಅದು ಯಾವುದೋ ರೋಗದಿಂದ ಬಳಲುತ್ತಿರುವುದನ್ನು ಮನಗಂಡು ಕೂಡಲೇ ಅದಕ್ಕೆ ವೈದ್ಯರಿಂದ ಚಿಕಿತ್ಸೆ ಕೊಡಿಸಿದರಂತೆ. ಮಾರನೆ ದಿನ ಅದು ಸಹಜ ಸ್ಥಿತಿಗೆ ಮರಳಿ ಲವಲವಿಕೆಯಿಂದ ಉಳಿದ ಮಂಗಗಳೊಡನೆ ಬೆರೆತು ಊರಲ್ಲಿ ಅಡ್ಡಾಡುತ್ತಿರುವುದನ್ನು ಗಮನಿಸಿದ ಶಿವಸ್ವಾಮಿಯವರು ತುಂಬಾ ಸಂತೋಷಪಟ್ಟರು. ದಯವೇ ಧರ್ಮದ ಮೂಲ ಎಂಬುದು ಇದೇ ಅಲ್ಲವೇ. ದಯವಿಲ್ಲದ ಧರ್ಮ ಅದ್ಯಾವುದಯ್ಯ ಎಂಬ ಶರಣರ ಸೂಳ್ನುಡಿಯಂತೆ ಸಣ್ಣಪುಟ್ಟ ವಿಷಯಗಳಿಗೂ ಪ್ರತಿಸ್ಪಂದಿಸುವ ಗುಣ ಶಿವಸ್ವಾಮಿಯವರಲ್ಲಿದೆ.

ನಿಷ್ಠುರ ಬಸವಭಕ್ತ.

ಲೇಖಕರಾದವರು, ಸಾಹಿತ್ಯಿಕವಾಗಿ ಬರೆದಿದ್ದನ್ನು ವೈಯಕ್ತಿಕವಾಗಿ ಬದುಕಬೇಕು; ಸಾಮಾಜಿಕವಾಗಿ ಅದನ್ನು ಜಾರಿಗೆ ತರಬೇಕು ಎಂಬ ಮಾತನ್ನು ಶಿವಸ್ವಾಮಿ ಅವರು ಅಕ್ಷರಶಃ ಪಾಲಿಸಿದವರು. ಪಾಲಿಸದ ಹೊರತು ಬೋಧಿಸುವ ಹಕ್ಕಿಲ್ಲ ಎಂಬ ಶರಣರ ನುಡಿಯನ್ನು ಚಾಚುತಪ್ಪದೆ ಅನುಸರಿಸಿದವರು. ಇಷ್ಟಲಿಂಗ ದೀಕ್ಷೆ ಆದ ಬಳಿಕ ಶರಣ ಸಂಕುಲವೆಲ್ಲ ಒಂದೇ ಎಂಬ ನಿಲುವು ತಾಳಬೇಕಾಗುತ್ತದೆ. ಅದರಂತೆ ಬಾಳಿ ಬದುಕುವ ನಡೆಯನ್ನು ಶಿವಸ್ವಾಮಿಯವರು ಆರಂಭದಲ್ಲಿಯೇ ಪ್ರದರ್ಶಿಸಿದ್ದಾರೆ.

ಹೋದಕಡೆಗಳೆಲ್ಲ ಜಾತಿ ತಾರತಮ್ಯದ ವಿರುದ್ಧ, ಮೇಲ್ವರ್ಗದವರ ಶೋಷಣೆಗಳ ವಿರುದ್ಧ ಮಾತನಾಡುತ್ತಲೇ ಅದನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ಮೂಲಕ ಉಳಿದವರಿಗೆ ಮಾದರಿಯಾಗಿದ್ದು ಈಗ ಇತಿಹಾಸ. ತತ್ವ, ಧರ್ಮ, ದೇವರು, ಸಾಹಿತ್ಯ ಈ ವಿಷಯಗಳನ್ನು ಬಾಳಿನ ಉಸಿರಾಗಿ ಮಾಡಿಕೊಂಡು ಅನುಗಾಲವೂ ಒಂದು ನೀತಿಬದ್ಧವಾದ ಜೀವನವನ್ನು ನಡೆಸುತ್ತ ಬಂದವರು. ಬಾಲ್ಯದಿಂದಲೂ ತಮ್ಮ ಸರಿದೊರೆಯ ತರುಣ ವೃಂದಕ್ಕೆ ಆದರ್ಶಪ್ರಾಯವಾಗಿ ಕೆಲಸ ಮಾಡಿದವರು. ಕತ್ತಲಿನಿಂದ ಬೆಳಕಿನ ಕಡೆಗೆ ಕ್ರಮಕ್ರಮವಾಗಿ ಮುಖ ತಿರುಗಿಸಿ ತನ್ನ ಪಯಣದ ಹಾದಿಯನ್ನು ತಾನೆ ಹುಡುಕಿಕೊಂಡು ದಟ್ಟಡಿಯಿಡುವ ದಿಟ್ಟತನವನ್ನು ಸ್ವಬುದ್ಧಿಯಿಂದ ಕಂಡುಕೊಂಡವರು.

ಭಾರತೀಯ ಸಮಾಜದಂತೆ ಚೀನಕೇರಾ ಗ್ರಾಮದ ಸಾಮಾಜಿಕ ವ್ಯವಸ್ಥೆ ಕೂಡ ಅಷ್ಟೇ ಜಾತಿ ಸಂಕೀರ್ಣತೆಯಿಂದ ಕೂಡಿದೆ. ಹಾಗೆ ನೋಡಿದರೆ ಉಳಿದೆಡೆಗಿಂತ ಸ್ವಲ್ಪ ಉದಾರವಾದಿ ಮನಸ್ಸುಗಳು ಇಲ್ಲಿವೆ ಎನ್ನಬಹುದು. ಇದಕ್ಕೆಲ್ಲ ಹಿರಿಯ ತಲೆಮಾರಿನ ಒಂದಿಷ್ಟು ಜನ ಕಾರಣ. ಅದರ ಪಳಿಯುಳಿಕೆ ಎಂಬಂತೆ ಗುರುಗಳಾದ ಶ್ರೀ ಕಲ್ಲಪ್ಪ ದೇವಣೆ ಅವರೊಂದಿಗೆ ಕೂಡಿಕೊಂಡು ಒಮ್ಮೆ ಶಿವಸ್ವಾಮಿ ಅವರು ತಮ್ಮ ಮಿತ್ರ ಬಳಗದವರಾದ ಶ್ರೀ ಆನಂದ ಸಿದ್ದಾಮಣಿ, ಪುಂಡಲಿಕ ಮತ್ತು ಬಾಬು ಅವರೊಂದಿಗೆ ಸೇರಿ ಊರಿನ ದಲಿತ ಮನಸ್ಸುಗಳಲ್ಲಿದ್ದ ಕಿಳರಿಮೆಯನ್ನು ಹೋಗಲಾಡಿಸಬೇಕೆಂಬ ಯೋಜನೆ ಹಾಕಿಕೊಂಡರು. ಅವರಿಗೆ ಶರಣ ಸಂಸ್ಕೃತಿ ಹಾಗೂ ಇನ್ನಿತರ ಸಾಧುಸಂತರ ವಿಷಯಗಳನ್ನು ಬೋಧಿಸುವ ಮೂಲಕ ಅವರನ್ನು ಧರ್ಮ ಸಂಸ್ಕಾರಕ್ಕೆ ಒಳಗು ಮಾಡಬೇಕೆಂದು ಊರಿನ ಸುಮಾರು ೨೦ ದಲಿತ ಕುಟುಂಬಗಳನ್ನು ಗುರುತಿಸಿದರು. ಅವರುಗಳ ಮನೆಗೆ ತೆರಳಿ ಅವರ ಮನೆಯಲ್ಲಿಯೇ ಸಾಮೂಹಿಕ ಇಷ್ಟಲಿಂಗ ಪೂಜೆಯನ್ನು ಹಾಗೂ ಸಹಪಂಕ್ತಿ ಭೋಜನ ಮಾಡುವ ಮೂಲಕ ಅವರಲ್ಲಿ ಆತ್ಮವಿಶ್ವಾಸ ಮೂಡಿಸುವ ಕೆಲಸವನ್ನು ಮಾಡಿದರು. ಅಂದಿನ

ಹಳ್ಳಿ ಸಮುದಾಯಗಳಿಗೆ ಇದೆಲ್ಲಾ ಕ್ರಾಂತಿಕಾರಿ ನಡೆಯಾಗಿತ್ತು. ದಲಿತರನ್ನು ಹತ್ತಿರ ಸೇರಿಸುವುದರಿಂದ ಮೈಲಿಗೆಯಾಗುತ್ತೇವೆ ಎಂಬುವರ ಮಧ್ಯೆ ಇದೊಂದು ಆಗಿನ ಕಾಲದ ಸಮಾಜ ಸುಧಾರಣೆ ಮಾತನಾಡುವವರಿಗೆ ಮಾದರಿ ನಡೆಯಾಗಿತ್ತು. ಇಂದಿಗೂ ಈ ಮಾದರಿಯ ಪ್ರಯತ್ನಗಳನ್ನು ನಮ್ಮ ಸಮಾಜದಲ್ಲಿ ಮಾಡಿಕೊಂಡು ಬರಲಾಗುತ್ತಿದೆಯೇ ವಿನಾಃ ಜಾತೀಯತೆಯನ್ನು ನಿಜವಾಗಿಯೂ ಈ ಸಮಾಜದಿಂದ ಬೇರುಸಮೇತ ಕಿತ್ತೆಸೆಯುವ ಕೆಲಸವಾಗುತ್ತಿಲ್ಲ. ಜಾತೀಯತೆ ಈಗ ಮೊದಲಿಗಿಂತ ಹೆಚ್ಚು ಸಂಕೀರ್ಣವಾಗಿ, ಜಟೀಲವಾಗಿ ಅದು ತನ್ನ ಮುಖಚರ್ಯೆಯನ್ನು ಬದಲಾಯಿಸಿಕೊಂಡಂತೆ ಆಧುನಿಕತೆಯ ಸೋಗಿನಲ್ಲಿ ನಮ್ಮ ನಡುವೆ ಇದ್ದೆ ಇದೆ. ಅದಕ್ಕೆ ಪರಿಹಾರವಾಗಿ ನಮ್ಮ ಸಮಾಜ ಮತ್ತು ನಾವು, ಗಿರೀಶ್ ಕಾರ್ನಾಡರು ಹೇಳುವಂತೆ 'ನೋವಿದ್ದ ಹಲ್ಲಿನ ಕಡೆಗೆ ನಮ್ಮ ನಾಲಿಗೆ ಪುನಃ ಪುನಃ ಹೊರಳುವಂತೆ ನಾವಿಂದು ಬಸವಾದಿ ಶರಣರ ಚಿಂತನೆಗಳ ಕಡೆಗೆ ಹೊರಳಬೇಕಿದೆ'.

ಕವಿ ಮನಸ್ಸಿನ ವಿಚಾರವಾದಿ.

ಶಿವಸ್ವಾಮಿಯವರು ರಚಿಸಿರುವ ಗ್ರಂಥಗಳ ಮೇಲೆ ವಿಮರ್ಶಾತ್ಮಕ ದೃಷ್ಟಿಯಿಂದ ಬರೆಯುವ ಶಕ್ತಿ ನನಗಿಲ್ಲ. ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪನವರು ಹೇಳುವಂತೆ 'ಒಬ್ಬ ಲೇಖಕ ತನ್ನ ಕೃತಿಯಲ್ಲಿ ಹೇಗೆ ಹೇಳಿದ್ದಾನೆ ಎನ್ನುವುದಷ್ಟೇ ಮುಖ್ಯವಲ್ಲ, ಏನು ಹೇಳಿದ್ದಾನೆ ಎನ್ನುವುದು ಮುಖ್ಯ' ಎಂಬ ಮಾತನ್ನು ಗಮನದಲ್ಲಿರಿಸಿಕೊಂಡು ಆನು ಒಲಿದಂತೆ ಇಲ್ಲಿ ಹಾಡಿರುವೆ. ಅವರ ಕಾವ್ಯ ತಂತ್ರಗಾರಿಕೆ ಮತ್ತು ಕಾವ್ಯ ಸೌಂದರ್ಯ ಎಂತಹದ್ದು ಎಂಬುದನ್ನು ಪ್ರಕಟಿಸುವ ಪ್ರಯತ್ನ ಮಾಡಿದೆ. ಈ ದೇಶ-ರಾಜ್ಯದಲ್ಲಿ ರಾಜಕಾರಣದ ಹೆಸರಿನಲ್ಲಿ ನಡೆಯುತ್ತಿರುವ ದುರಾಚಾರ, ಅನಾಚಾರ, ಹಿಂಸಾಚಾರ, ಭ್ರಷ್ಟಾಚಾರ, ಮೌಢ್ಯ ಇವುಗಳನ್ನು ಕಂಡು ಸಹಿಸದೆ ರೋಷದಿಂದಲೇ ಸಾಹಿತ್ಯವನ್ನು ಬರೆದವರು. 'ಲಿಂಗದೇವ'

ಅವರ ವಚನಾಂಕಿತ. ಅದು ಕೂಡ ಅವರಲ್ಲಿನ ಬಂಡಾಯ ಮನೋವೃತ್ತಿಯನ್ನು ಸೂಚಿಸುತ್ತದೆ. ಕೆಲವರು ಬಸವಣ್ಣನವರ ವಚನಾಂಕಿತವನ್ನು ತಿದ್ದಿ ಚರಿತ್ರೆಯನ್ನು ವರ್ತಮಾನದಲ್ಲಿ ಹೊಸಕಿ ಹಾಕುತ್ತಿರುವುದನ್ನು ಗಮನಿಸಿದ ಕವಿಮನಸ್ಸು ಅದನ್ನೇ ತನ್ನ ವಚನಾಂಕಿತವಾಗಿರಿಸಿಕೊಳ್ಳುವ ಮೂಲಕ ತನ್ನ ಸೈದ್ಧಾಂತಿಕ ಪ್ರತಿಭಟನೆಯನ್ನು ವ್ಯಕ್ತಪಡಿಸುತ್ತದೆ. ಇದು ಅವರಲ್ಲಿರುವ ಮೂಲಗುಣ. ಹೇಳಬೇಕಾದನ್ನು ಯಾರ ಹಂಗಿಗೂ ಒಳಪಡದೆ ನಿರ್ಭಯತೆಯಿಂದ ಹೇಳುತ್ತಾರೆ. 'ಹಂಗಿನೊಳಗಿದ್ದು ಲಿಂಗಪೂಜೆಯ ಮಾಡಲಾಗದು' ಎಂಬ ಜೀವನ ಧಾಟಿ ಅವರದು. ಇನ್ನೊಂದಕ್ಕೆ ಚ್ಯುತಿ ಬರದಂತೆ ಆನು ಒಲಿದಂತೆ ಹಾಡುವೆ ಎಂಬ ಸ್ವಾಭಿಮಾನಿ. ಮೌಢ್ಯಗಳನ್ನು ತಿದ್ದುವಲ್ಲಿ ಮತ್ತು ವಿರೋಧಿಸುವಲ್ಲಿ 'ಮತಿ ಹೀನನಾದವಂಗೆ ಅತಿಬೋಧೆ ಮಾಡದಿರು' ಎಂಬ ನಿಲುವು ತಾಳಿದವರು. ಅಂಥವರಿಗೆ ಮಾಡುವ ಉಪದೇಶ ಬಂಡೆಗಲ್ಲ ಮೇಲೆ ಸುರಿವ ಉದಕದಂತೆ. ಅವರ ಸಾಹಿತ್ಯ ರಚನೆಗೆ ಪುರಾಣ ಪ್ರಸಿದ್ಧರೆ ಬೇಕೆಂದೇನಿಲ್ಲ.

ವರ್ತಮಾನದ ಜೀತನ್ ರಾಮ್ ಮಾಂಝಿ, ಸಾಲುಮರದ ತಿಮ್ಮಕ್ಕ, ಅಣ್ಣಾ ಹಜಾರೆ ಮುಂತಾದವರನ್ನು ಅವರ ಸಾಹಿತ್ಯ ಗ್ರಹಿಸುತ್ತದೆ; ವಿಷಯವಸ್ತುವಾಗಿಸಿಕೊಳ್ಳುತ್ತದೆ. ಹೀಗೆ ವಿವಿಧ ಕ್ಷೇತ್ರಗಳಲ್ಲಿ ದುಡಿದ ಶಿವಸ್ವಾಮಿಯವರು ಸಾರ್ಥಕ ಬಾಳನ್ನು ನಡೆಸಿದ್ದಾರೆ. ಆ ಬಾಳಿನ ಪಯಣದ ಅನುಭವ-ಅನುಭಾವಗಳೆಲ್ಲ ಅವರ ಸಾಹಿತ್ಯ ಮತ್ತು ಸಂಗೀತದಲ್ಲಿ ಕಾಣಬಹುದು. ಹೊರಗಣ್ಣಿನಿಂದ ನೋಡಲಾಗದಿದ್ದರೂ, ಸಾಹಿತ್ಯದ ಮೂಲಕವೇ ಸಮಾಜದ ಆಗುಹೋಗುಗಳಿಗೆ ಪ್ರತಿಸ್ಪಂದಿಸಿದವರು.

ಅವರ ಬರವಣಿಗೆ ಸಮಾಜದ ಅಂಕುಡೊಂಕುಗಳಿಗೆ ಒಮ್ಮೆ ಪ್ರಶ್ನೆಯಾಗಿ ಮತ್ತೊಮ್ಮೆ ಪರಿಹಾರವಾಗಿ ಎದುರುಗೊಳ್ಳುತ್ತವೆ. ಸತ್ಯವನ್ನು ಬಗೆದೊಡೆ ಕತ್ತಲೆಯು ಹರಿದಂತೆ. ಅವರ ಕೃತಿಗಳಲ್ಲಿ ವಾಸ್ತವಿಕ ಜನಜೀವನ

ಹಾಗೂ ಸಮಾಜೋ-ಧಾರ್ಮಿಕ ವಿಷಯಗಳು ಸಮ್ಮಿಳಿತವಾಗಿವೆ. ಅವರು ಕೇವಲ ಕಲ್ಪನಾಲೋಕದಲ್ಲಿ ವಿಹರಿಸುವ ಸಾಹಿತಿಯಲ್ಲ. ಲೌಕಿಕ ಬದುಕಿಗೆ ಪೂರಕವಾದ ಸಾಹಿತಿ. ಅವರ ಲೇಖನಿ ಹರಿತವಾದುದು ಮತ್ತು ನೇರವಾದುದು. ಅವರ ಸಾಹಿತ್ಯ ಕೃಷಿಗೆ ಹುಮನಾಬಾದ್ ತಾಲೂಕಿನ ಳನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ಕೂಡ ಲಭಿಸಿದೆ. ಸಾಹಿತ್ಯದ ಬರವಣಿಗೆಯ ಜೊತೆಗೆ ಅವರು ಅಧ್ಯಾತ್ಮ ಜೀವಿಯೂ ಹೌದು. ವೃತ್ತಿ ಮತ್ತು ಪ್ರವೃತ್ತಿಯಲ್ಲಿ ನಡೆ-ನುಡಿ, ಸತ್ಯ-ಶುದ್ಧತೆಯನ್ನು ಉಳಿಸಿಕೊಂಡಿದ್ದಾರೆ. ಉನ್ನತಾದರ್ಶಗಳನ್ನು ಮುಂದಿಟ್ಟುಕೊಂಡು ಅದರ ಸಾಧನೆಗಾಗಿ ಸರ್ವಶಕ್ತಿಯನ್ನು ವಿನಿಯೋಗಿಸಿದ ಭಾವಜೀವಿಯ ಈ ಚರಿತ್ರೆ ಹೊಸ ಮನಸ್ಸುಗಳಿಗೆ, ಮಕ್ಕಳಿಗೆ ಖಂಡಿತಾ ಮಾರ್ಗದರ್ಶನವಾಗುತ್ತದೆ ಎಂಬುದು ನನ್ನ ನಂಬಿಕೆ. ಆದರ್ಶ ವಿದ್ಯಾರ್ಥಿಯಾಗಿ, ಕವಿಯಾಗಿ, ಪ್ರವಚನಕಾರರಾಗಿ, ಶಿಕ್ಷಕನಾಗಿ ಅವರೆಂದೂ ತಾನು ನಂಬಿದ ತತ್ವ ಸಿದ್ಧಾಂತಗಳೊಂದಿಗೆ ರಾಜಿ ಆದವರಲ್ಲ.

'ಮನುಷ್ಯನ ಉದ್ಯೋಗಕ್ಕೂ ಆದರ್ಶಕ್ಕೂ ಪರಸ್ಪರ ಹೊಂದಿಕೆ ಬಾರದೆ ಹೋದಲ್ಲಿ ಜೀವನದಲ್ಲಿ ಸುಖ ಸಿಗಲಾರದು' ಎಂಬ ಕವಿ ಶಿವರಾಮ ಕಾರಂತರ ಮಾತು ಶಿವಸ್ವಾಮಿಯವರ ಜೀವನಕ್ಕೆ ಸರಿಯಾಗಿ ಜೋಡಿಯಾಗುತ್ತದೆ. ಹಾಗಾಗಿ ಕವಿಯೊಬ್ಬನ ಜೀವನಕ್ಕೂ ಅವನ ಕೃತಿಗಳಿಗೂ ಇರುವ ನಿಕಟ ಬಾಂಧವ್ಯವನ್ನು ಗುರುತಿಸಿಕೊಡುವಲ್ಲಿ ಅವನ ಕೃತಿ ಸಮೀಕ್ಷೆ ಸುಗಮವಾಗುತ್ತದೆ; ಸಂಬದ್ಧವಾಗುತ್ತದೆ. ಮನುಷ್ಯ ಏನನ್ನು ತಿನ್ನುತ್ತಾನೋ ಅದನ್ನೇ ತೇಗುತ್ತಾನೆ. ಹಾಗೆಯೇ ಬರಹಗಾರ. ಅರವಿಂದರು ಹೇಳುವಂತೆ 'ಸಾಹಿತ್ಯ ಸೃಷ್ಟಿ ಮಾಡುವಾಗ ಬರಹಗಾರ ಉನ್ನತ ಮಾನಸಿಕ ಸ್ತರದಲ್ಲಿರುತ್ತಾನೆ. ಆ ಒಂದು ಘಳಿಗೆ ಮಾತ್ರ ಅವನು ದೈವದ ಉಪಕರಣವಾಗುತ್ತಾನೆ' ಎಂಬ ಜಾಗೃತಿಯ ಮಾತನ್ನು ಶಿವಸ್ವಾಮಿಯವರು ತಮ್ಮ ಬರಹಗಳ ಉದ್ದಕ್ಕೂ ಜತನದಿಂದ ಕಾಪಾಡಿಕೊಳ್ಳಲು ಪ್ರಯತ್ನಿಸಿದ್ದಾರೆ.

ಸಾಮಾಜಿಕ ಕಾಳಜಿಯೊಂದಿಗೆ ಪರಿಸರ ಕಾಳಜಿಯ ಸಾಹಿತ್ಯವನ್ನು ಅವರಲ್ಲಿ ಕಂಡುಬರುತ್ತದೆ. 'ಕೊಳವೆಬಾವಿಗಳ ತೋಡಿ, ಅಂತರ್ಜಲವನ್ನೆಲ್ಲ ಬರಿದು ಮಾಡಿ ದೇವರು ಕೊಟ್ಟ ಅಮೂಲ್ಯ ವರವ ಬಳಸಿಕೊಳ್ಳಲರಿಯದೆ ಪರಿಸರವನ್ನೆ ಹಾಳುಗೆಡುವುವ ಕೀಳು ಮಾನವರು ನಿಸರ್ಗ ಬದುಕನ್ನು ಬದುಕದೇ ನೆಲವೆ ನರಕವನ್ನಾಗಿಸುತಿಹರಯ್ಯ' ಎಂಬಲ್ಲಿ ವಿಶ್ವ ಸಮಸ್ಯೆಯನ್ನು ಸ್ಥಳೀಯವಾಗಿ ಎಚ್ಚರಿಸುವ ಮೂಲಕ ಜನರಲ್ಲಿ ಜಾಗೃತಿಯನ್ನುಂಟು ಮಾಡುತ್ತಾರೆ. ಸಮಷ್ಠಿ-ವ್ಯಷ್ಠಿಯಾಗಿ, ವ್ಯಷ್ಠಿ-ಸಮಷ್ಠಿಯಾಗಿ ಅವರ ವಚನಗಳಲ್ಲಿ ಬಿಂಬಿತವಾಗುತ್ತದೆ. ಇಂತಹ ಕವಿತೆಗಳ ಮೂಲಕ ಮಾನವ ಕುಲದ ವಿನಾಶಕಾರಿ ನಡೆಯನ್ನು ಅವರು ಖಂಡಿಸುತ್ತಾರೆ. 'ಲಂಚಕ್ಕೆ ಕೈ ಆನದಂತೆ ವಂಚನೆಗೆ ಮನ ಹಾರದಂತೆ ಸಂಚಕರ ಬಳಿ ಸುಳಿಯದಂತೆ' ಆ ನಿರಾಕಾರ ದೇವರಲ್ಲಿ ತನ್ನ ಬದುಕಿಗೊಂದು ನೈತಿಕ ಚೌಕಟ್ಟನ್ನು ತಂದುಕೊಳ್ಳುತ್ತಾರೆ. ಇದು ಎಲ್ಲಾ ಕಾಲಕ್ಕೂ ಎಲ್ಲರಲ್ಲೂ ಇರಬೇಕಾದ ಗುಣ. 'ದೇಶವ ಕಟ್ಟುವೆನೆಂದು ಹೊರಟವರು ದುರುದ್ದೇಶವ ಕಟ್ಟುತಿಹರಯ್ಯ' ಎಂಬಲ್ಲಿ ಪ್ರಸ್ತುತ ಕಲುಷಿತಗೊಂಡ ರಾಜಕೀಯ ವ್ಯವಸ್ಥೆಯನ್ನು ಜಾಡಿಸುತ್ತಾರೆ.

ರಾಜಕೀಯ ಪ್ರಜ್ಞೆ ಇಲ್ಲದ ಜನ ಹೆಂಡ ಹಣಕ್ಕೆ ತಮ್ಮ ಮೌಲ್ಯವನ್ನು ಮಾರಿಕೊಳ್ಳುತ್ತಿರುವುದರ ಬಗ್ಗೆ ತಮ್ಮ ಸಾಹಿತ್ಯದ ಮೂಲಕ ಕಳವಳವನ್ನು ವ್ಯಕ್ತಪಡಿಸುತ್ತಾರೆ. ಬಹುತ್ವ ಭಾರತದ ಬಹು ಕನಸುಗಳು ಕಣ್ಣೆದುರಿಗೆ ಕನರಿಹೋಗುತ್ತಿರುವ ಬಗ್ಗೆ, ಏಕಮಾರ್ಗವಾಗುತ್ತಿರುವ ಬಗ್ಗೆ ಅವರಲ್ಲಿ ವೇದನೆ ಇದೆ.

ಇಂದು ಎಲ್ಲವೂ ರಾಜಕೀಯ ನೆರಳಿನಲ್ಲಿ ತನ್ನ ಅಸ್ತಿತ್ವವನ್ನು ಕಂಡುಕೊಳ್ಳುತ್ತಿರುವ ಹೊತ್ತಲ್ಲಿ ಕಾವಿ, ಖಾದಿ ಮತ್ತು ಖಾಕಿ ವ್ಯವಸ್ಥೆ ಹಾಳಾದ ಬಗೆಯನ್ನು ಹೀಗೆ ವಿವರಿಸುತ್ತಾರೆ. 'ಕಾವಿಯ ಧರಿಸಿ ಭವಿಯಾಗಿಪ್ಪವರ ಕಂಡೆ, ಖಾದಿಯ ಧರಿಸಿ ದೇಶ ವಿರೋಧಿಯಾಗಿಪ್ಪವರ ಕಂಡೆ, ಖಾಕಿಯ ಧರಿಸಿ ಕಳ್ಳತನವ ಮಾಡುವವರ ಕಂಡೆ, ಇಂತಪ್ಪ

ಮೂವರ ಲಾಂಛನಕ್ಕೆ ಶರಣೆನ್ನದೆ, ಲಾಂಛನಕ್ಕೆ ತಕ್ಕ ನಡೆ ಉಳ್ಳವರಾದರೆ ಮಣಿವೆನೆಯ್ಯ' ಎನ್ನುವಲ್ಲಿ ಭ್ರಷ್ಟತೆಗೆ ಮೋಸಕ್ಕೆ ಕಲುಷಿತ ಜೀವನಕ್ಕೆ ಸಡ್ಡು ಹೊಡೆಯುತ್ತಾರೆ. ನಾನವರನ್ನು ಲೆಕ್ಕಿಸುವುದಿಲ್ಲ; ಮಣಿಯುವುದಿಲ್ಲ ಎಂಬ ಶಿವಸ್ವಾಮಿಯವರ ಧೈರ್ಯ ಮೆಚ್ಚುವಂತಹದ್ದು. ಇಂದು ಅನೇಕ ಜನ ಕಾಯಕ ಮಾಡದ ಸೋಮಾರಿಗಳು ತಮ್ಮ ತಮ್ಮ ಹೊಟ್ಟೆಗಳನ್ನು ಹೊರಲು ಧರ್ಮದ ಸೋಗು ಹಾಕಿಕೊಂಡು ಊರೂರು ಸಂಚರಿಸಿ ತುತ್ತಿನಾಸೆಗಾಗಿ ಲಿಂಗವ ಕೊಡುವ ಕೆಲಸ ಮಾಡುತ್ತಾರೆ. ಅಂತವರು ಭವಿಗಳಿಗಷ್ಟೇ ಗುರುಗಳಾಗಲು ಸಾಧ್ಯ, ಭಕ್ತರಿಗಲ್ಲ ಎಂಬುದನ್ನು ಈ ವಚನದ ಮೂಲಕ ಶಿವಸ್ವಾಮಿಯವರು ವಿಡಂಬಿಸುತ್ತಾರೆ. ಇದು ಮೂಲತಃ ಅಂಬಿಗರ ಚೌಡಯ್ಯನವರ 'ತುತ್ತಿನಾಸೆಗೆ ಲಿಂಗವ ಕೊಟ್ಟು ಹೋಗುವ ವ್ಯರ್ಥ ಮೂಳ' ಎಂಬ ವಚನವೊಂದನ್ನು ನೆನಪಿಸುತ್ತದೆ. ಅದನ್ನವರು ಅಷ್ಟಕ್ಕೆ ನಿಲ್ಲಿಸದೆ ರಾಷ್ಟ್ರದ್ರೋಹಿ (ಖಾದಿಯ ಧರಿಸಿ ದೇಶ ವಿರೋಧಿಯಾದವನು), ಧರ್ಮದ್ರೋಹಿ (ಕಾವಿಯ ಧರಿಸಿ ಧರ್ಮಭ್ರಷ್ಟನಾದವನು) ಮತ್ತು ಸಮಾಜದ್ರೋಹಿ (ಖಾಕಿಯ ಧರಿಸಿ ಜನರ ಭಕ್ಷಿಸುವವನು) ಎಂಬ ನೆಲೆಯವರೆಗೂ ವಿಸ್ತರಿಸುತ್ತಾರೆ. ಇದು ಅವರ ಬದುಕಿನ ಹಾಗೂ ಸಾಹಿತ್ಯದ ಚಲನಶೀಲತೆಯನ್ನು ಸೂಚಿಸುತ್ತದೆ. ಹೀಗೆ ಅವರು ತಮ್ಮ ಇಡಿ ಸಾಹಿತ್ಯ ಕೃಷಿಯಲ್ಲಿ ನೈತಿಕವಾದ ವಿರೋಧವನ್ನು, ಚೌಕಟ್ಟನ್ನು ಕಟ್ಟುತ್ತಲೇ ಹೊರಡುತ್ತಾರೆ. 'ವ್ಯಕ್ತಿ ತನ್ನ ಸದಾಚಾರ, ನಡೆನುಡಿಗಳಿಂದ ಸಮಾಜದೊಳಗಿನ ಒಳ್ಳೆಯ ಮನಸ್ಸುಗಳನ್ನೆಲ್ಲ ಆಕರ್ಷಿಸಿಕೊಂಡು ಅನುಯಾಯಿಗಳ ಸಂಖ್ಯೆಯನ್ನು ತನ್ನಷ್ಟಕ್ಕೆ ತಾನೆ ವೃದ್ಧಿಸಿಕೊಳ್ಳುತ್ತಾ ಹೋಗುತ್ತಾನೆ' ಎಂಬ ಅವರ ಗೃಹಿಕೆ ಸರಿ ಎನಿಸುತ್ತದೆ. ಅದನ್ನವರು ತಮ್ಮ ಜೀವನದುದ್ದಕ್ಕೂ ಜತನದಿಂದ ಕಾಪಾಡಿಕೊಂಡು ಬಂದಿದ್ದಾರೆ. ತಾನಾವ ಒಳ್ಳೆಯ ಕಾರ್ಯ ಮಾಡಿದರು ಅದು ಸಹಜ ಕರ್ತವ್ಯವೆಂದು ನಿರ್ಲಿಪ್ತರಾಗುತ್ತಾರೆ ಮತ್ತು ಜೊತೆಗಾರರಿಗೆ ಅದರ ಶ್ರೇಯಸ್ಸನ್ನು ನೀಡುತ್ತಾರೆ.

ಕಾವ್ಯವೆಂಬುದು ಅಂತರಂಗದ ಬೆಳಕು. ಕಾವ್ಯ ಕವಿಯ ಅಭಿವ್ಯಕ್ತಿಯ ಕಲೆ ಎಂಬುದನ್ನು ಒಪ್ಪಿಕೊಂಡಿಯೂ, ಅದು ಅವನ ಅನುಭವದ ನೆಲೆಯಲ್ಲಿ ಹುಟ್ಟು ಪಡೆದಿರುತ್ತದೆ. ಹಾಗಾಗಿ ಅದು ಬುದ್ಧಿಗಿಂತಲೂ ಹೆಚ್ಚಾಗಿ ಹೃದಯದ ಭಾಷೆಯಾಗಿರುತ್ತದೆ. ಅಂದಾಗ ಮಾತ್ರವೇ ಅದಕ್ಕೊಂದು ಸಾಮಾಜಿಕ ಬದ್ಧತೆ, ಕಳಕಳಿ ಇರಲು ಸಾಧ್ಯ. ಇಲ್ಲವಾದಲ್ಲಿ ಅದು ಶುಷ್ಕ ಮಾತಾಗಿ ಓದುಗನಿಗೆ ಅನುಭವ ದಕ್ಕಿಸುತ್ತದೆ. ಹಾಗೆಯೇ ಶಿವಸ್ವಾಮಿಯವರ ಕಾವ್ಯ ರಚನೆ ಕೇವಲ ಅವರ ಪಾಂಡಿತ್ಯವಲ್ಲ; ಪ್ರತಿಭೆ. ಅದು ಅವರಿಗೆ ಶಿವ ಕಾರುಣ್ಯದಿಂದ ಸಿಕ್ಕ ಪ್ರತಿಫಲ. ಅಂತರಂಗದ ಫಲ. ಹಾಗಾಗಿ ಅದು ಎಂದಿಗೂ ಲೌಕಿಕ ಜನರ ಬದುಕು ಬವಣೆಗಳನ್ನು ಪ್ರತಿಬಿಂಬಿಸುವಂತಹದ್ದು. ಅಲೌಕಿಕ ಕತೆಗಳನ್ನು ಹೆಣೆಯುವುದಲ್ಲ. ಲೋಕದ ಬದುಕನ್ನು ಸಹ್ಯಗೊಳಿಸುವ ಮೂಲಕ ಸುಂದರಗೊಳಿಸುವ ಜವಾಬ್ದಾರಿಯನ್ನು ಹೊತ್ತು ಶಿವಸ್ವಾಮಿಯವರು ತಮ್ಮ ಕಾವ್ಯ ಕೃಷಿ ಮಾಡುತ್ತಿದ್ದಾರೆ. ಅದನ್ನವರು 'ಕಣಗಿಲು ಬಾವಿ' ಎಂಬ ಕಥಾ ಸಂಕಲನದ ಮೂಲಕ ಸಾಬೀತುಪಡಿಸಿದ್ದಾರೆ. ತನ್ನ ಸುತ್ತಲಿನ ಜನಪದರ ಬದುಕಿನ ಭಾಗವಾಗಿರುವ ಸ್ಥಳಗಳು, ಹೆಸರುಗಳು ಅವರ ಪುಸ್ತಕದ ಶೀರ್ಷಿಕೆಗಳಾಗುವಲ್ಲಿ ಸ್ಥಳೀಯ ಅಸ್ಮಿತೆಗಳ ಅನಾವರಣವಾಗುತ್ತದೆ.

'ಲೋಕದಲ್ಲಿ ಮನುಷ್ಯನಾಗಿ ಜನಿಸುವುದು ಪುಣ್ಯ. ವಿದ್ಯೆಯನ್ನು ಸಂಪಾದಿಸುವುದು ಇನ್ನೂ ದುಲರ್ಭ. ಅದಕ್ಕಿಂತ ಕಠಿಣವಾದುದ್ದು ಕಾವ್ಯಶಕ್ತಿ ಪಡೆಯುವುದು' ಎಂಬ 'ಅಗ್ನಿಪುರಾಣ'ದ ಮಾತು ಶಿವಸ್ವಾಮಿಯವರ ಬದುಕನ್ನು, ಕಲಿಕೆಯನ್ನು ಸರಿಯಾಗಿ ಪ್ರತಿಬಿಂಬಿಸುತ್ತದೆ. ಅವರ ಪ್ರತಿಯೊಂದು ಬರಹ, ಕಾವ್ಯ, ವಿಮರ್ಶೆ ಸುತ್ತಲಿನ ಜನರ ಬದುಕಿಗೆ ಚೈತನ್ಯ, ಮಾಧುರ್ಯವನ್ನು ನೀಡುತ್ತವೆ. 'ನವನವೋನ್ಮೇಷಶಾಲಿನಿ'ಯಂತೆ ಲೋಕಯಾತ್ರೆಗೆ ಜನರನ್ನು ಸಿದ್ಧಗೊಳಿಸುವ ಶಕ್ತಿ, ಕಸುವು ಅವರ ಬರಹದಲ್ಲಿದೆ. ಅದನ್ನು ನಾವು ಪ್ರೊ.ಎಸ್.ಜಿ. ಸಿದ್ದರಾಮಯ್ಯನವರು, ಶಿವಸ್ವಾಮಿಯವರ 'ಸೀಮೋಲ್ಲಂಘನ' ಎಂಬ ವಿಮರ್ಶಾ ಗ್ರಂಥಕ್ಕೆ ಬರೆದ

ಮುನ್ನಡಿಯಲ್ಲಿ ಕಾಣಬಹುದು. 'ಕಣ್ಣೀರ ಹನಿಗಳು ಎಂದರೆ ಬರೆಯಬೇಕಾದ ಶಬ್ದಗಳು ಎಂದರ್ಥ' ಎಂಬ ಕವಿ ಪಾವ್ಲೊನ ಮಾತುಗಳನ್ನು ಇವರ ಆಧುನಿಕ ವಚನ ಸಂಕಲನ ಕೃತಿಯಾದ 'ವಚನ ಸಂಜೀವಿನಿ' ಮಾರ್ಮಿಕವಾಗಿ ಸ್ಫುಟಿಸುತ್ತದೆ. ಸಂಪ್ರದಾಯವಾದಿಗಳ ಅಮಾನವೀಯ ಪದ್ಧತಿಗಳನ್ನು, ನಡೆ-ನುಡಿಗಳನ್ನು ಶಿವಸ್ವಾಮಿಯವರು ತಮ್ಮ ಈ ಪುಸ್ತಕದಲ್ಲಿ ಪ್ರಶ್ನಿಸುತ್ತಲೇ ಹೋಗಿದ್ದಾರೆ. ಎಲ್ಲಾ ಸಂದರ್ಭಗಳಲ್ಲಿ ಕೇವಲ ಪ್ರಶ್ನಿಸುವುದೇ ಪರಿಹಾರವಲ್ಲ. ಅದಕ್ಕೆ ಪರ್ಯಾಯಗಳನ್ನು ಕೊಡಬೇಕು. ಆಗಲೇ ಕವಿಗೆ ಪ್ರಶ್ನಿಸುವ ನೈತಿಕತೆ ಬರುವುದು. ಇದು ಕೇವಲ ವ್ಯಕ್ತಿಯೊಬ್ಬನ ಪ್ರಶ್ನೆಯಲ್ಲ. ಇಡಿ ಸಮಷ್ಠಿಯ ಪ್ರಶ್ನೆ. ಜನಾಂಗೀಯ ದ್ವೇಷ ಮತ್ತು ತಾರತಮ್ಯ ಎಂಬುದು ಇಂದಿಗೂ ಅತೀ ಮುಂದುವರೆದ ರಾಷ್ಟ್ರಗಳೆನಿಸಿಕೊಂಡ ಅಮೆರಿಕಾದಂತಹ ದೇಶಗಳಲ್ಲಿಯೇ ಜೀವಂತವಿರಬೇಕಾದರೆ, ಇನ್ನೂ ಭಾರತದಂತಹ ಸಂಕೀರ್ಣ ಸಮಾಜದಿಂದ ಅದನ್ನು ಹೋಗಲಾಡಿಸುವುದು ಮತ್ತಷ್ಟು ಕಠಿಣವೆನಿಸುತ್ತದೆ. 'ಒಲೆ ಹತ್ತಿ ಉರಿದಡೆ ನಿಲ್ಲಬಹುದಲ್ಲದೆ ಧರೆ ಹತ್ತಿ ಉರಿದಡೆ ನಿಲಬಹುದೆ' ಎಂಬ ಶರಣ ವಾಣಿಯಂತೆ ಅದನ್ನವರು ಕೃತಿ-ಕಾವ್ಯದ ಮೂಲಕ ನಂದಿಸುವ ಕಾರ್ಯದಲ್ಲಿ ಜೊತೆಯಾಗಿದ್ದಾರೆ. ಹಾಗಾಗಿ ಶಿವಸ್ವಾಮಿಯವರ ಬದುಕು ಮತ್ತು ಬರಹ ಜೊತೆಜೊತೆಯಾಗಿಯೇ ಈ ಸಂದರ್ಭಕ್ಕೆ ನಮಗೆ ಎದುರುಗೊಳ್ಳುತ್ತವೆ.

ಕಾಲಕ್ರಮಿಸಿದಂತೆಲ್ಲ ಮೌಲ್ಯಗಳು ದುರ್ಬಲಗೊಂಡಾಗ ಶಿವಸ್ವಾಮಿಯವರು ತಮ್ಮ ಸಾಹಿತ್ಯದ ಮೂಲಕ ಎಚ್ಚರಗೊಳಿಸಿದವರು. ಅರಿವು ಆಚಾರ ಮೂಲ್ಯಗಳ ಮೂಲಕ ಘನತೆಯನ್ನು ಎತ್ತಿ ಹಿಡಿದವರು. ಸಮಾಜವೇ ಆಗಲಿ ಕುಟುಂಬ ವ್ಯವಸ್ಥೆಯೇ ಆಗಲಿ ಅದಕ್ಕೊಂದು ಚೌಕಟ್ಟು, ಬದ್ಧತೆ ಬೇಕೆಂಬುದು ಅವರ ಅಂಬೋಣ. '...ಓದಿನಲ್ಲಿ ಒಲವಿಲ್ಲದ ವಿದ್ಯಾರ್ಥಿಗಳು, ಮಕ್ಕಳ ಹಿತವನ್ನರಿಯದ ಶಿಕ್ಷಕರು, ದಾಸೋಹವನ್ನರಿಯದ ದಾನಿಗಳು, ಕಾವ್ಯವನ್ನರಿಯದ ಕವಿಗಳು, ಮತದ ಮೌಲ್ಯವರಿಯದ ಮತದಾರರು...' ಎಂಬ ಅವರ ಪದ್ಯಪಟ್ಟಿ ಇಡಿ ಸಾಮಾಜಿಕ ಧಾರ್ಮಿಕ

ಆರ್ಥಿಕ ಕೌಟಂಬಿಕ ವ್ಯವಸ್ಥೆಯನ್ನು ಪ್ರಶ್ನಿಸುತ್ತದೆ ಮತ್ತು ಇತರರನ್ನು ಚಿಂತನೆಗೆ ಹಚ್ಚುತ್ತದೆ.

'ಕಣಗಿಲು ಬಾವಿ' ಅವರ ಪ್ರಥಮ ಕಥಾ ಸಂಕಲನ. ಒಟ್ಟು ಹದಿನೇಳು ಕಥೆಗಳು ಇದರಲ್ಲಿವೆ. ಈ ಹೊತ್ತಿನ ಸಂದರ್ಭ ಹೇಗೆ ಮನುಷ್ಯನನ್ನು ಅಧೋಗತಿಗೆ ಕೊಂಡೊಯ್ಯುತ್ತಿದೆ ಎಂಬುದರ ಚಿತ್ರಣವನ್ನು ಸಣ್ಣ ಸಣ್ಣ ಕತೆಗಳ ಮೂಲಕ ಇಲ್ಲಿ ಕಟ್ಟಿಕೊಟ್ಟಿದ್ದಾರೆ. ಹಾಗೆ ನೋಡಿದರೆ ಇವು ಕಲ್ಪನಾಲೋಕದಲ್ಲಿ ಹೆಣೆದ ಕತೆಗಳಲ್ಲ. ಬದಲಿಗೆ ಸುತ್ತಲಿನ ಸಮಾಜದಲ್ಲಿ ಘಟಿಸಿದ, ಘಟಿಸುತ್ತಿರುವ ಸಂಗತಿಗಳನ್ನೇ ಇಲ್ಲಿ ಕತೆಯ ವಸ್ತುವಾಗಿಸಿಕೊಳ್ಳಲಾಗಿದೆ. ಹಾಗಾಗಿ ಇವು ನಡೆದ ಸತ್ಯ ಕತೆಗಳು. ಅದನ್ನು ಲೇಖಕರು ಕೂಡ ಪುಸ್ತಕದ ಕಥೆಗಾರನ ನುಡಿಯಲ್ಲಿ ಹೇಳಿಕೊಂಡಿದ್ದಾರೆ. 'ಕಣಗಿಲು ಬಾವಿ'ಯಲ್ಲಿ ಬರುವ ಮಾರಪ್ಪನ ಪಾತ್ರ, ಅವನಿಗೆ ಕಾಯಿಲೆ ಬಂದು ಹಾಸಿಗೆ ಹಿಡಿಯುವುದು, ದೆವ್ವ ಬಡಿಯುವುದು, ಇನಾಮತಿ ಎಂಬ ಮಳ (ತೋಟ), ಕಮಾನ್ ಮಟ್ಟಿ, ಹಣಾದಿ ಪದ ಬಳಕೆ, ಗಚ್ಚಿನ ಬಾವಿ, ಬಸವಕಲ್ಯಾಣದ ರಾಜಾಬಕ್ಷ ದರ್ಗಾಕೆ ಹೋಗಿ ಖಡಗಾ ಹಾಕಿಸುವ ಪ್ರಕ್ರಿಯೆ ಎಲ್ಲವೂ ಸುತ್ತಲಿನ ಜನಪದರಲ್ಲಿ ಬಳಕೆಯಲ್ಲಿರುವ ಪ್ರಕ್ರಿಯೆ ಹಾಗೂ ಸ್ಥಳನಾಮಗಳು. ಕಣಗಿಲು ಬಾವಿ ಊರ ಜನರ ಮೌಢ್ಯತೆ ಮತ್ತು ಭಯದ ಸಂಕೇತವಾಗಿ ಈ ಕತೆಯಲ್ಲಿ ಸೊಗಸಾಗಿ ಮೂಡಿಬಂದಿದೆ. 'ಗೋವಿನ ಸಾವು' ಎಂಬ ಕತೆಯಲ್ಲಿ ಬರುವ ಆಕಳ ಬಾಣಂತನದ ಪ್ರಕ್ರಿಯೆಗಳು, ಬಡತನವನ್ನೇ ಉಂಡ ಮನೆಯ ಮಕ್ಕಳು ಆಕಳು ಕರು ಹಾಕಿದಾಗ ಗಿಣ್ಣ ಉಣ್ಣಲು ಪಡುವ ಸಂಭ್ರಮವೆಲ್ಲ ಮನಮೋಹಕವಾಗಿ ಕತೆಯಲ್ಲಿ ನಿರೂಪಗೊಂಡಿದೆ. 'ಅದಕ್ಕೆ ವಯಸ್ಸಾಯಿತು, ಇನ್ನು ಹೆಚ್ಚೆಂದರೆ ಒಂದು ಕರು ಹಾಕಿ ಅದು ಸಾಯಬಹುದು' ಎಂಬ ಅಮ್ಮನ ಮಾತಿಗೆ ಗೋಪುವಿನ ಪ್ರತಿಕ್ರಿಯೆ ನಮ್ಮಲ್ಲಿಯೇ ಒಂದಾಗಿ ಬಾಳಿಬದುಕುವ ದನಕರುಗಳ ಮೇಲಿನ ಪ್ರೀತಿ ವಾತ್ಸಲ್ಯಗಳನ್ನು ಬಿಂಬಿಸುತ್ತವೆ. ಮನೆಯ ಬಡತನದಿಂದಾಗಿ ಹಳ್ಳಿಗರು ದನಗಳನ್ನು ಕಟುಕರಿಗೆ ಮಾರುವ ಪ್ರಕ್ರಿಯೆಯ

ಬಗ್ಗೆ ಹಳ್ಳಿಯ ಹೆಣ್ಣು ಮಕ್ಕಳಲ್ಲಿರುವ ಆಕ್ರೋಶವನ್ನು ಲೇಖಕರು ಇಲ್ಲಿ ಆಕಳು ಸುರಭಿಯ ಪಾತ್ರದ ಮೂಲಕ ವ್ಯಕ್ತಪಡಿಸುತ್ತಾರೆ. ಕತೆಗೆ 'ಗೋವು' ಎಂಬುದಕ್ಕೆ ಬದಲಾಗಿ ಲೇಖಕರು 'ಆಕಳು' ಎಂದೂ ಹೆಸರಿಸಬಹುದಾಗಿತ್ತು. ಹಾಗಾದಲ್ಲಿ ಅದು ಇನ್ನೂ ಹಳ್ಳಿ ಸಂಸ್ಕೃತಿಗೆ ಹೆಚ್ಚು ಹತ್ತಿರವಾಗುತ್ತಿತ್ತು.

ಅವರ 'ಮುಂಬೆಳಕು' ಎಂಬ ೨ನೇ ಕಥಾ ಸಂಕಲನವೂ ಕೂಡ ಕಣಗಿಲು ಬಾವಿಯಂತೆ ಅವರಿವರ ಮೂಲಕ ತಿಳಿದುಕೊಂಡ, ಹಿರಿಯರ ಬಾಯಿಂದ ಬಾಯಿಗೆ ಹರಿದುಬಂದ ಸುತ್ತಲಿನ ಪರಿಸರದಲ್ಲಿ ನಡೆದ, ನಡೆಯುತ್ತಿರುವ ವಿದ್ಯಮಾನಗಳ ಮೇಲೆ ಬರೆಯಲ್ಪಟ್ಟ ಕಥಾ ಸಂಕಲನ. ಅದನ್ನು ಪುಸ್ತಕಕ್ಕೆ ಬೆನ್ನುಡಿ ಬರೆದ ಶ್ರೀಮತಿ ವಿಜಯಲಕ್ಷ್ಮಿ ಅಲ್ಲಮಪ್ರಭು ಅವರು 'ಇಲ್ಲಿಯ ಸಣ್ಣ-ಸಣ್ಣ ಕತೆಗಳು ನೈತಿಕ ಹಾಗೂ ಮಾನವೀಯ ಮೌಲ್ಯಗಳನ್ನು ಒಳಗೊಂಡಿವೆ. ಕೆಲವು ರೀತಿ-ನೀತಿ ಹೇಳುವುದರ ಜೊತೆಗೆ ತಿಳಿಹಾಸ್ಯವನ್ನು ಸಹ ವ್ಯಕ್ತಪಡಿಸುತ್ತವೆ' ಎಂದು ಸರಿಯಾಗಿಯೇ ಗುರುತಿಸಿದ್ದಾರೆ. ಮೋಸಹೋದ ಕಳ್ಳ, ಅತ್ತೆಗೆ ತಕ್ಕ ಅಳಿಯ, ಅಜ್ಞಾನಿಗೆ ಅರ್ಥವಾಗದ ಪುರಾಣ, ಅಳಿಯನ ಅವಾಂತರ ಎಂಬ ಕತೆಗಳು ಇದೇ ಧಾಟಿಯಲ್ಲಿವೆ. 'ಶಿವಸ್ವಾಮಿಯವರು ಬಹುಮುಖಿ ನೆಲೆಯ ಸಂಸ್ಕೃತಿಯ ಮೇಲೆ ಕತೆ ಹೆಣದಿದ್ದಾರೆ. ...ಕೆಲವೊಂದು ವಸ್ತುಗಳು ಸಹಜವಾದರೂ ಶಿವಸ್ವಾಮಿ ಕೊಡುವ ನಿರೂಪಣೆಯಿಂದ ಗಮನ ಸೆಳೆಯುತ್ತವೆ. ಕಲಾತ್ಮಕತೆ, ಸಾವು ಚಿತ್ರಣ, ಸಂಭಾಷಣೆ, ಭಾವಾಶ್ರೈಲಿ ಸಹಜವಾದದ್ದು. ನೇರ ನಿರೂಪಣೆ, ಗೊಂದಲವಿಲ್ಲದೇ ಕತೆಗಟ್ಟುವ ಕಲೆ ಇಲ್ಲಿದೆ' ಎಂಬ ಕವಿ ಡಾ. ಗವಿಸಿದ್ದಪ್ಪ ಪಾಟೀಲ ಅವರ ಮಾತುಗಳು ಅವರ ಕಥಾಸಂಕಲನಗಳಿಗೆ ಹಿಡಿದ ಕೈಗನ್ನಡಿಯಾಗಿದೆ.

ಆಧುನಿಕತೆಯ ಸೋಗಿನಲ್ಲಿ ಕೊಳ್ಳುಬಾಕ ಸಂಸ್ಕೃತಿಯಲ್ಲಿ ಮುಳುಗಿ ಹೋಗಿರುವ ಸಮುದಾಯುವನ್ನು ಕುರಿತು 'ಸೌಜನ್ಯ ಉಳ್ಳವರ ಹುಚ್ಚರೆಂಬುವರು, ದಯವ ತೋರುವವರ ಹೇಡಿ ಎಂಬರು... ನಿಜವ ನುಡಿವವರ ಕಂಡು ಗೇಲಿ ಮಾಡುವವರು' ಎಂದು ಛೇಡಿಸುತ್ತಾರೆ.

ಅವರಿಗೆ ಅದೇ ಬದುಕಾಗಿದೆ. ಸರಳ ಜೀವನ ಉನ್ನತ ಚಿಂತನೆ ಎಂಬುದೆಲ್ಲ ಈಗ ಪುಸ್ತಕದ ಬದನೆಕಾಯಿ ಎಂಬಂತಾಗಿರುವುದನ್ನು ಲೇಖಕರು ಸೂಕ್ಷ್ಮವಾಗಿ ಗಮನಿಸುತ್ತಾರೆ. ಜಾಗತಿಕ ಬದುಕಿನೊಂದಿಗೆ ನಮ್ಮ ವರ್ತಮಾನದ ಬದುಕು ನಾಗಾಲೋಟದೊಂದಿಗೆ ಸಾಗುತ್ತಿದೆ. ಅಲ್ಲಿ ನಮ್ಮ ವ್ಯಕ್ತಿಗತ ನೆಲೆ, ಕಲೆಗಳನ್ನು ವಿಚಾರಿಸುವಷ್ಟು ವ್ಯವಧಾನವಾಗಲಿ ಸಮಾಧಾನವಾಗಲೀ ಇಲ್ಲದಿರುವ ಬಗ್ಗೆ ಲೇಖಕರು ತಮ್ಮ ಬರಹಗಳಲ್ಲಿ ಖೇದವನ್ನು ವ್ಯಕ್ತಪಡಿಸುತ್ತಾರೆ. ಅವರ ಇಡಿ ಬದುಕು ಮತ್ತು ಬರಹ ಯಾಂತ್ರಿಕ ಜೀವನದ ನೀತಿ ನಿರೂಪಣೆಗಳ ಬಗೆಗೆ, ಧರ್ಮ, ಕಲೆ, ಸಾಹಿತ್ಯದ ಬಗೆಗೆ ತನ್ನ ಕಣ್ಣೋಟಗಳನ್ನು ಹೊರಳಿಸುತ್ತಲೇ ಇದೆ. ಮೌಲ್ಯಗಳು ನಮ್ಮಿಂದ ಕಳಚುತ್ತಿರುವ ಬಗೆಯನ್ನು ಅವರ 'ಸೀಮೋಲ್ಲಂಘನ' ಕೃತಿ ರಸವತ್ತಾಗಿ ಕಟ್ಟಿಕೊಡುತ್ತದೆ. ಅದನ್ನು ಮುನ್ನುಡಿಯಲ್ಲಿ ಪ್ರೊ.ಎಸ್.ಜಿ. ಸಿದ್ದರಾಮಯ್ಯನವರು ಸರಿಯಾಗಿಯೇ ಗ್ರಹಿಸಿದಂತೆ 'ಮಾತಿನ ಮೊದಲ ಬಲ್ಲ ನೋಟ' ಎಂಬ ಉಪಮೆಯೊಂದಿಗೆ ವಿವರಿಸಿದ್ದಾರೆ. 'ಪ್ರಕೃತಿ ಮತ್ತು ತಂದೆ ತಾಯಿಗಳು ನಮಗೆ ದೇಹವನ್ನು ಕರುಣಿಸಿದರೆ, ಸಾಹಿತ್ಯ ಮತ್ತು ಸಂಸ್ಕೃತಿಗಳು ನಮಗೆ ಸುಂದರವಾದ ಬದುಕನ್ನು ಕಟ್ಟಿಕೊಡುತ್ತವೆ' ಎಂಬ ಶಿವಸ್ವಾಮಿಯವರ ಮಾತು ನಾವು ಎಲ್ಲಿ ಎಡವುತ್ತಿದ್ದೇವೆ ಎಂಬುದರ ಬಗ್ಗೆ ಎಚ್ಚರಿಕೆಯನ್ನು ನೀಡುತ್ತವೆ. ಈ ಎಲ್ಲ ಪ್ರಕ್ರಿಯೆಗಳು ನಮ್ಮ ಬದುಕಿಗೆ ಆದರ್ಶವಾಗದಿರುವ ಬಗೆಗಿನ ಅವರ ಚಿಂತನೆ ನೆಲಮೂಲ ಸಂಸ್ಕೃತಿಯಿಂದ ಜನಸಮುದಾಯ ದೂರವಾಗುತ್ತಿರುವುದನ್ನು ಗ್ರಹಿಸುತ್ತವೆ. ಒಟ್ಟಾರೆಯಾಗಿ ಸಾಮರಸ್ಯ ಮತ್ತು ಸಹಿಷ್ಣುತೆಯನ್ನು ವಚನ ಸಾಹಿತ್ಯ ಪೂರಕವಾಗುವ ಬಗೆಯನ್ನು ಅವರ ಸಾಹಿತ್ಯ ಢಾಳಾಗಿ ಗುರುತಿಸುತ್ತದೆ.

ಸಾಮಾಜಿಕ ಕಳಕಳಿ.

ಶಿವಸ್ವಾಮಿಯವರು ಮೂಲತಃ ತತ್ವ ಪ್ರತಿಪಾದಕರು. ಲೋಕನಿಂದೆಗೆ ಹೆದರಿದವರಲ್ಲ. ಬಸವವಾದಿ ಶರಣರ ಮಾರ್ಗದ ಮೂಲಕ ಕಂಡ ಸತ್ಯವನ್ನು

ಪಾಲಿಸುವುದು ಮತ್ತು ಅನ್ಯರಿಗೆ ಅದನ್ನು ಬೋಧಿಸುವುದು ಅವರ ನಿತ್ಯದ ಕೆಲಸ. ಆ ಮೂಲಕ ಅವರು ತನ್ನ ಸುತ್ತಲಿನ ಅದೆಷ್ಟೋ ಸಮಸ್ಯೆಗಳಿಗೆ ಮಾತುಕತೆಗಳ ಮೂಲಕವೇ ಪರಿಹಾರಗಳನ್ನು ಕಂಡುಕೊಂಡ ಉದಾಹರಣೆಗಳಿವೆ. ಅವುಗಳಲ್ಲಿ ಕೆಲವೊಂದನ್ನು ಇಲ್ಲಿ ಸಾಂಕೇತಿಕವಾಗಿ ಪ್ರಸ್ತಾಪಿಸಲಾಗಿದೆ.

೧. ಎರಡೂ ಕುಟುಂಬದವರಿಗೆ ಕೂಡಿಸಿಕೊಂಡು ಮಾತುಕತೆಯ ಮೂಲಕ ಅವರಿಗೆ ತಿಳಿಹೇಳಿ ನಾಲ್ಕು ಬಾಲ್ಯ ವಿವಾಹಗಳನ್ನು ತಡೆಗಟ್ಟಿರುವುದು.
೨. ವಿಚ್ಛೇದನಗೊಂಡು ಸಂಕಷ್ಟದಲ್ಲಿದ್ದ ಇಬ್ಬರು ಬಡ ಮಹಿಳೆಯರ ಪುನರ್ ವಿವಾಹಗಳನ್ನು ಮಾಡಿಸಿದ್ದು, ಈಗವರೆಲ್ಲಾ ಸಂತೋಷದೊಂದಿಗೆ ತಮ್ಮ ಕುಟುಂಬಗಳೊಂದಿಗೆ ಜೀವನ ನಡೆಸುತ್ತಿದ್ದಾರೆ.
೩. ಮನ್ನಾಎಖ್ಖೇಳ್ಳಿ ಬಸ್ ನಿಲ್ದಾಣದಲ್ಲಿ ತಿಂಡಿ ತಿನಿಸುಗಳನ್ನು ಮಾರಾಟ ಮಾಡುತ್ತಿದ್ದ ಶಾಲೆ ಬಿಟ್ಟ ಹದಿನಾಲ್ಕು ವರ್ಷದ ಒಳಗಿನ ಹತ್ತಾರು ಮಕ್ಕಳಿಗೆ ಹಾಗೂ ಅವರ ಪಾಲಕರಿಗೆ ಮನವೊಲಿಸಿ ಶಾಲೆಗೆ ಸೇರಲು ಒತ್ತಾಯಿಸಿ, ಅವರನ್ನು ಶಾಲೆಗೆ ಸೇರಿಸಿದ್ದಾರೆ.
೪. ಜಾತಿ ಅಸಮಾನತೆ ನಿವಾರಿಸಲು ದಲಿತರ ಮನೆಮನೆಗೆ ತೆರಳಿ ಇಪ್ಪತ್ತು ಮನೆಗಳಲ್ಲಿ ಸಾಮೂಹಿಕ ಇಷ್ಟಲಿಂಗ ಪೂಜೆ ನೇರವೇರಿಸಿದ್ದು.
೫. ಊರಲ್ಲಿ ವಯಸ್ಸಾದ ಅಸಹಾಯಕ ಅಜ್ಜನೊಬ್ಬನಿಗೆ ಅವನ ಅಂತಿಮ ಕಾಲದಲ್ಲಿ ಯಾರೂ ನೋಡಿಕೊಳ್ಳುವವರು ಇಲ್ಲದೇ ಇದ್ದಾಗ ಎರಡು ವರ್ಷಗಳ ಕಾಲ ಸತತವಾಗಿ ಅವರಿಗೆ ಊಟದ ವ್ಯವಸ್ಥೆ ಮಾಡಿಸಿದ್ದಾರೆ.
೬. ಕಳೆದ ಹತ್ತು ವರ್ಷಗಳಿಂದ ಮನೆಯ ಹಿತ್ತಲಲ್ಲಿ ವಿಶೇಷವಾಗಿ ಬೇಸಿಗೆ ದಿನಗಳಲ್ಲಿ ಪಕ್ಷಿಗಳಿಗಾಗಿ ಕುಡಿಯುವ ನೀರಿನ ಅನುಕೂಲ ಮಾಡಿಕೊಡುತ್ತಿದ್ದಾರೆ.

ಗಡಿನಾಡು ಮತ್ತು ಕನ್ನಡ ಕಟ್ಟುವಿಕೆ.

ಮಾನವರ ನಡುವಿನ ಸಂಬಂಧವನ್ನು ಬೆಸೆಯುವಲ್ಲಿ ಭಾಷೆಯೂ ಕೂಡ ಒಂದು ಪ್ರಮುಖ ಮಾಧ್ಯಮವಾಗಿ ಕಾರ್ಯ ನಿರ್ವಹಿಸುತ್ತದೆ. ಇದನ್ನೇ ನೆಲದ ನುಡಿಯ ನಂಟು ಅನ್ನುವುದು. ಹೆಚ್ಚು ಹೆಚ್ಚು ಭಾಷೆಗಳ ಬಲ್ಲವನು ತನ್ನ ಜ್ಞಾನದ ವ್ಯಾಪ್ತಿಯನ್ನು ಹೆಚ್ಚಿಸಿಕೊಳ್ಳುತ್ತಾನೆ. ಆ ಮೂಲಕ ತಾನು ಹುಟ್ಟಿದ ನೆಲೆಯಿಂದ ಸಮಸ್ತ ಜಗತ್ತನ್ನೇ ಅರಿಯುಬಲ್ಲ ಸಾಮರ್ಥ್ಯವನ್ನು ಪಡೆಯುತ್ತಾನೆ. ಇದಕ್ಕೆಲ್ಲಾ ಪೂರಕ ಶಕ್ತಿಯಾಗಿ ಮಾತೃಭಾಷೆಯು ಸಾಕ್ಷಿಯಾಗಿ ನಿಲ್ಲುತ್ತದೆ. ಏಕೆಂದರೆ ಮನುಷ್ಯ ಹುಟ್ಟಿದಾಗಿನಿಂದ ಪ್ರೌಢಾವಸ್ಥೆಗೆ ಬರುವವರೆಗೂ ಮಾತೃ ಭಾಷೆಯ ಸಹಾಯದಿಂದಲೇ ಎಲ್ಲವನ್ನು ಗ್ರಹಿಸುತ್ತಿರುತ್ತಾನೆ. ಹೀಗಾಗಿ ಭಾಷೆಯಿಂದ ಸುತ್ತ-ಮುತ್ತಲಿನ ಪರಿಸರ ಪ್ರಜ್ಞೆಯ ಬೆಳವಣಿಗೆಯೊಂದಿಗೆ ಜ್ಞಾನದ ವಿವಿಧ ಹಂತಗಳ ಪರಿಚಯ ಮಾಡಿಕೊಳ್ಳುತ್ತಾನೆ. ತಾಯಿ ಕಲಿಸಿದ ತೊದಲು ನುಡಿಗಳಿಂದ ಹಿಡಿದು ಆಗಾಧ ಪಾಂಡಿತ್ಯ ಸಂಪಾದಿಸುವಲ್ಲಿ ತನ್ನ ಮೂಲ ನೆಲೆಯಿಂದ ಪಡೆದುಕೊಂಡ ಗ್ರಹಿಕೆ ಬೇಕೆಂದಾಗ ಬಳಸಿಕೊಳ್ಳುವಲ್ಲಿ ಭಾಷೆ ಪ್ರಮುಖ ಪಾತ್ರ ನಿರ್ವಹಿಸುತ್ತದೆ. ಹೀಗಾಗಿ ಮಾತೃಭಾಷೆ ಎಂಬುದು ಎಲ್ಲದಕ್ಕೂ ಭೂಮಿಕೆಯಾಗಿದೆ.

'ಜನನಿ ಜನ್ಮಭೂಮಿಗಳೊಂದಿಗೆ ಸಮಾನ ಗೌರವಕ್ಕೆ ಅರ್ಹವಾದುದೆಂದರೆ ಅದು ಮಾತೃಭಾಷೆ' ಎಂಬುದು ಶಿವಸ್ವಾಮಿಯವರ ಭಾವನೆ. ಅಂತೆಯೇ ಅವರು ಜನನಿ, ಜನ್ಮಭೂಮಿಯ ಬಗ್ಗೆ ಎಲ್ಲಿಯೇ ಮಾತನಾಡುವಾಗ ಆ ಎರಡು ಪದಗಳೊಂದಿಗೆ ಮಾತೃಭಾಷೆಯನ್ನು ಸಹ ಸೇರಿಸಿಕೊಂಡು ಇವು ಮೂರು ಸ್ವರ್ಗಕ್ಕೆ ಮಿಗಿಲೆಂದು ಹೇಳುತ್ತಿರುತ್ತಾರೆ. ಮಾತೃಭಾಷೆಯ ಮೇಲಿನ ಅವರ ಪ್ರೀತಿ ಅನನ್ಯ. 'ಭಾಷೆಯ ಬಗೆಗೆ ಗೌರವವುಳ್ಳವನು ಎಲ್ಲೆಡೆಯೂ ಗೌರವಿಸಲ್ಪಡುತ್ತಾನೆ' ಎಂಬ ಅವರ ಮಾತು ಪ್ರಾಯಶಃ ಅತಿಶಯೋಕ್ತಿಯಂತೆ ತೋರಬಹುದು. ಆದರೆ ಅದನ್ನು ಅಲ್ಲಗೊಳಿಸುವಂತೆಯೂ ಇಲ್ಲ. ವ್ಯಕ್ತಿಯ ಸರ್ವಾಂಗೀಣ ವಿಕಾಸಕ್ಕೆ

ಮೂಲಭೂತ ಶಕ್ತಿಯಾಗಿ ನಿಂತುಕೊಂಡಿರುವುದೇ ಮಾತೃಭಾಷೆ. ಮನುಷ್ಯ ತನ್ನ ತಾಯಿ ಭಾಷೆಯಲ್ಲಿ ಕಲಿತಷ್ಟು ಅನುಭವ ಬೇರೆಲ್ಲೂ ಕಲಿಯಲು ಸಾಧ್ಯವಿಲ್ಲ ಎಂಬುದು ಅವರ ಬಲವಾದ ನಂಬಿಕೆ. ಅದಕ್ಕಾಗಿ ಮಾತೃಭಾಷೆಯ ಪ್ರೇಮ ಮೈಗೂಡಿಸಿಕೊಂಡವನಿಗೆ ಅನ್ಯ ಭಾಷೆಗಳ ಬಗೆಗೆ ತಿರಸ್ಕಾರವಿರುವುದಿಲ್ಲ. ಏಕೆಂದರೆ ನನ್ನಷ್ಟೇ ಮಾತೃಭಾಷೆಯನ್ನು ಪ್ರೀತಿಸುವ ಜನ ಅನ್ಯಭಾಷಿಕರೂ ಇರುತ್ತಾರೆ ಎಂಬ ಅರಿವು ಅವನಿಗಿರುತ್ತದೆ. ಅದಕ್ಕಾಗಿ ಮಾತೃಭಾಷೆಯ ಪ್ರೇಮದೊಂದಿಗೆ ಇತರೆ ಭಾಷೆಗಳಲ್ಲಿ ಸೌಹಾರ್ದತೆ ಕಾಯ್ದುಕೊಂಡು ಹೋದಾಗ ನಮ್ಮ ಭಾಷೆ ಬೆಳೆಸಲು ಸಾಧ್ಯವಾಗುತ್ತದೆ.

'ನಾಡು ಕನ್ನಡ ಮತ್ತು ನಾನು ಕನ್ನಡ'ವಾಗುವ ಬಗೆಯನ್ನು ಅವರ ಸಾಹಿತ್ಯ ಮತ್ತು ಬದುಕಿನಲ್ಲೂ ಕಾಣಬಹುದು. ಚೀನಕೇರಾದಂತಹ ಕುಗ್ರಾಮಗಳಲ್ಲಿ ಪ್ರತಿವರ್ಷ ಮಕ್ಕಳನ್ನು ಒಟ್ಟುಗೂಡಿಸಿಕೊಂಡು ಕನ್ನಡ ರಾಜ್ಯೋತ್ಸವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಮಕ್ಕಳಲ್ಲಿ ಹಾಗೂ ಜನರಲ್ಲಿ ಕನ್ನಡದ ಬಗೆಗೆ ಅಭಿಮಾನ, ಪ್ರೀತಿ ಮೂಡಿಸುವಲ್ಲಿ ಕಂಕಣಬದ್ಧರಾಗಿದ್ದಾರೆ. ಸುತ್ತಲಿನ ಕನ್ನಡ ಸಾಹಿತಿಗಳನ್ನು, ಬರಹಗಾರರನ್ನು, ಹೋರಾಟಗಾರರನ್ನು ಆ ದಿನ ಕರೆದು ಸನ್ಮಾನಿಸುವ ಮೂಲಕ ಅವರಿಗೆ ಗೌರವ ಸಲ್ಲಿಸುವುದರೊಂದಿಗೆ ಊರ ಜನರಲ್ಲಿ ಕನ್ನಡ ಚಟುವಟಿಕೆಗಳ ಬಗ್ಗೆ ಜಾಗೃತಿ ಮೂಡಿಸುವಲ್ಲಿ ಅವರ ಸೇವೆ ಅನನ್ಯವೆನಿಸುತ್ತದೆ. 'ನಾಡವರು ನಾವು ಧರಿನಾಡವರು, ನಾವು ತೊರಿನಾಡವರು ಎರಿನಾಡವರು' ಎಂಬಲ್ಲಿ ಸಮಗ್ರದಲ್ಲಿ ಸ್ಥಳೀಯ ಅಸ್ಮಿತೆಗಳನ್ನು ಎತ್ತಿಹಿಡಿಯುತ್ತಾರೆ. ಇದು ಅವರ ಕನ್ನಡ ಕಟ್ಟುವ ಬಗೆ ಎನ್ನಬಹುದು. ಯಾವುದೇ ಭಾಷೆ ಸಮೃದ್ಧವಾಗಿ ಬೆಳೆಯಬೇಕಾದರೆ ಅದು ಸೃಜನಶೀಲವಾಗಿರಬೇಕು; ಚಲನಶೀಲವಾಗಿರಬೇಕು. ಅನ್ಯ ಭಾಷೆಗಳಿಂದ ಅದು ನಿರಂತರವಾಗಿ ಕೊಡು-ಕೊಳ್ಳುವಿಕೆಯನ್ನು ನಡೆಸುತ್ತಿರಬೇಕು. ಅಂದಾಗಲೇ ಅದು ಇಂದಿನ ತಂತ್ರಜ್ಞಾನ ಯುಗದಲ್ಲಿ ತನ್ನ ಅಸ್ತಿತ್ವವನ್ನು ಕಂಡುಕೊಳ್ಳಲು ಸಾಧ್ಯ.

ಸಕ್ಕದಮಂ ಪೇಳ್ವೊಡೆ ನೆಳಿ
ಸಕ್ಕದಮಂ ಪೇಳ್ಗೆ ಶುದ್ಧ ಕನ್ನಡದೊಳ್ ತಂ।
ದಿಕ್ಕುವುದೇ ಸಕ್ಕದಮಂ
ತಕ್ಕುದೆ ಬೆರೆಸಲ್ಕೆ ಘೃತಮುಮಂ ತೈಲಮುಮಂ॥

ಸಂಸ್ಕೃತವನ್ನು ಹೇಳುವುದಾದರೆ ಸಂಸ್ಕೃತದಲ್ಲಿಯೇ ಪೂರ್ತಿಯಾಗಿ ಹೇಳಿ, ಶುದ್ಧವಾದ ಕನ್ನಡದಲ್ಲಿ ಸಂಸ್ಕೃತವನ್ನು ತಂದು ತುರುಕುವುದು ಸರಿಯೇ? ಇವೆರಡನ್ನು ಬೆರಸಿ ಕಾವ್ಯ ರಚನೆ ಮಾಡಿದರೆ ಅದು ಎಣ್ಣೆ-ತುಪ್ಪಗಳ ಮಿಶ್ರಣವಾಗದೇ? ಎಂದು ೧೧ನೇ ಶತಮಾನದಲ್ಲಿ ಹೇಳಿದ ನಯಸೇನನಂತೆ 'ಕನ್ನಡದೊಳ್ ನುಗ್ಗದಿರಲಿ ಆಂಗ್ಲ ಪದಗಳು, ಮಾಯವಾಗದಿರಲಿ ಸಿರಿಗನ್ನಡ ರತ್ನಗಳು' ಎಂಬಲ್ಲಿ ಅದೇ ನಮ್ಮ ಯಜಮಾನಿಕೆ ಆಗಬಾರದು ಎಂಬುದನ್ನು ಶಿವಸ್ವಾಮಿಯವರು ಬಹು ಎಚ್ಚರವಾಗಿಯೇ ಪ್ರತಿಪಾದಿಸುತ್ತಾರೆ. ಹಾಗಾಗಿ ಶಿವಸ್ವಾಮಿಯವರ ಈ ವಿವೇಕ ಎಲ್ಲರ ವಿವೇಕವಾಗಬೇಕಿದೆ. ೧೬ನೇ ಶತಮಾನದ ಕವಿ ಮಹಲಿಂಗರಂಗ ಕೂಡ 'ಸುಲಿದ ಬಾಳೆಯ ಹಣ್ಣಿನಂದದಿ....... ತಿಳಿದು ತನ್ನೊಳು ತನ್ನ ಮೋಕ್ಷವ ಗಳಿಸಿಕೊಂಡರೆ ಸಾಲದೇ ಸಂಸ್ಕೃತದಲಿನ್ನೇನು?' ಎಂದು ಪ್ರಶ್ನಿಸಿಸುತ್ತಾನೆ. 'ಇಂದಿನ ಕರ್ನಾಟಕವೂ ಒಂದೆಡೆ ಹಿಂದಿಯ ಕಡೆಗೆ, ಮತ್ತೊಂದೆಡೆ ಸಂಸ್ಕೃತದ ಕಡೆಗೆ, ಮಗದೊಂದು ಕಡೆ ಇಂಗ್ಲಿಷಿನ ಕಡೆಗೆ-ಹೀಗೆ ಎತ್ತೆಂದೆರೆತ್ತ ಗೊತ್ತುಗುರಿಯಿಲ್ಲದೆ ಓಲಾಡುತ್ತಿರುವಾಗ ಮಹಲಿಂಗರಂಗನ ಕನ್ನಡ ಪ್ರೇಮ ಮತ್ತು ಧೈರ್ಯ ನಮಗೆಲ್ಲರಿಗೂ ಆದರ್ಶವಾಗಲಿ' ಎಂಬ ಪ್ರೊ.ಪುರುಷೋತ್ತಮ ಬಿಳಿಮಲೆಯವರ ಮಾತು ನಿಜವೆನಿಸುತ್ತದೆ. ನಯಸೇನ, ಕೇಶಿರಾಜ, ಶ್ರೀವಿಜಯ, ಮಹಲಿಂಗರಂಗ, ಬಸವಾದಿ ಪ್ರಮಥರೆಲ್ಲಾ ಈಗಿದ್ದರೆ 'ಇಂಗ್ಲಿಷ್ ಭಾರತವನ್ನು ಒಂದುಗೂಡಿಸುವ ಭಾಷೆ' ಎಂಬ ಸರ್ವೋಚ್ಚ ನ್ಯಾಯಾಲಯದ ಮಾತಿಗೆ ಏನು ಪ್ರತಿಕ್ರಿಯೆ ನೀಡುತ್ತಿದ್ದರೋ ಏನೋ. ಅತ್ತ ಅವರು ಇತ್ತ

ನೋಡುತಲಿದ್ದರೆ, ಇತ್ತ ನಾವು ಎತ್ತ ನೋಡುತಲಿದ್ದೇವೆ ಎಂಬಂತಾಗಿದೆ ನಮ್ಮ ಸ್ಥಿತಿ, ಪರಿಸ್ಥಿತಿ. 'ಮನಮನೆಗಳ ಸಿರಿತನಕೆ ಎನಿತಿಲ್ಲವೊ ಕೊರತೆ, ಸದಾ ಹರಿಯುತಿಹುದು ಪದಗಂಗೆಯ ವರತೆ' ಎಂಬ ಆಶಾಭಾವವನ್ನು ಕವಿ ವ್ಯಕ್ತಪಡಿಸುತ್ತಾನೆ. ಮುಂದುವರೆದು 'ಕನ್ನಡ ಕಾವೇರಿಯ ಸುಜಲದಲಿ ಮೈದೊಳೆ, ಶರಣರ ವಚನ ಗಂಗೆಯಲಿ ಮನದೊಳೆ' ಎಂದು ಕನ್ನಡ ಮನಸ್ಸುಗಳಿಗೆ ಕರೆಕೊಡುತ್ತಾರೆ.

ಹೊರನಾಡು-ಗಡಿನಾಡಲ್ಲಿ ಕನ್ನಡ ಕಣ್ಮರೆಯಾಗುತ್ತಿದೆ. ಒಳನಾಡಿನಂತೆ ಕನ್ನಡದ ವಿಷಯದಲ್ಲಿ ಇಲ್ಲಿ ವರ್ತಿಸುವಂತಿಲ್ಲ. ರಾಜ್ಯಭಾಷೆಯ ಬಗೆಗೆ ಇಲ್ಲಿಯ ಜನರಲ್ಲಿ ಮೊದಲು ಭರವಸೆಯನ್ನು ಮೂಡಿಸುವಂತಾಗಬೇಕು. ಗಡಿಭಾಗದ ಕನ್ನಡ ಚಟುವಟಿಕೆಗಳಿಗೆ ಸರ್ಕಾರ ಹೆಚ್ಚೆಚ್ಚು ಅಣಿಗೊಳ್ಳಬೇಕು. ಹಾಗಾಗಿ ಗಡಿಭಾಗದಲ್ಲಿ ಕನ್ನಡ ಕಟ್ಟುವ ಕೆಲಸವೆಂದರೆ ಕಷ್ಟಸಾಧ್ಯವಾದ ನಡೆ ಎಂಬುದು ನಮಗೆ ಅರಿವಿರಬೇಕು. ಭಾಷೆ ಯಾವತ್ತಿಗೂ ಮನುಷ್ಯ ಸಂಬಂಧಿತ ನೆಲೆಗಳನ್ನು ಗಟ್ಟಿಗೊಳಿಸಬೇಕೆ ಹೊರತು ಸಡಿಲಗೊಳಿಸುವಂತಾಗಬಾರದು. ನಾವದನ್ನು ಬೆಳಗಾವಿ-ಕರ್ನಾಟಕ ಗಡಿ ವಿವಾದದಲ್ಲಿ ಕಾಣುತ್ತೇವೆ. 'ರಾಜಕಾರಣದ ಹೊರತಾದ ತೀರ್ಮಾನವೊಂದು ಭಾಷೆಯ ವಿಷಯದಲ್ಲಿ ಅಗತ್ಯವಿದೆ' ಎಂಬ ಶಿವಸ್ವಾಮಿಯವರ ಮಾತು ನೂರಕ್ಕೆ ನೂರರಷ್ಟು ಸತ್ಯವೆನಿಸುತ್ತದೆ. ಅದಕ್ಕಾಗಿ ದೃಢಸಂಕಲ್ಪ, ತ್ಯಾಗದ ಜೊತೆಗೆ ಮಾತೃಭಾಷೆಯ ಅನನ್ಯ ಪ್ರೀತಿ ಅವಶ್ಯಕವಾಗಿ ಬೇಕು. ಕಲ್ಯಾಣ ಕರ್ನಾಟಕದ ಶಿವಶರಣರ ನಾಡಾದ ಬೀದರ್ ಜಿಲ್ಲೆ ೩ ರಾಜ್ಯಗಳ ಗಡಿಪ್ರದೇಶವನ್ನು ಹಂಚಿಕೊಂಡಿದೆ. ಹಾಗಾಗಿ ಕನ್ನಡ ಜನ ತಮ್ಮ ಭಾಷಾ ಶುದ್ಧತೆಯನ್ನು ಉಳಿಸಿ-ಬೆಳೆಸಿಕೊಂಡು ಹೋಗುವುದು ಬಹು ಜವಾಬ್ದಾರಿಯ ಕಾರ್ಯವಾಗಿದೆ ಎನ್ನುತ್ತಾರೆ ಶಿವಸ್ವಾಮಿಯವರು. ಯಾವುದನ್ನೂ ಸರ್ಕಾರವೇ ಮಾಡಬೇಕೆಂದೇನಿಲ್ಲ. ಜನ ತಮ್ಮೂಲಕವೂ ಅದಕ್ಕೆ ಕೈಜೋಡಿಸಬೇಕೆಂಬುದನ್ನು ಅವರು ಇಲ್ಲಿ ಒತ್ತಿ ಹೇಳುತ್ತಾರೆ. ಗಾಂಧಿಜೀಯವರು ಕೂಡ ಸ್ವಾತಂತ್ರ್ಯ ಚಳುವಳಿಗೆ

ಜನ ಬೆಂಬಲ ಸಿಗದ ಹೊರತು ಅದು ಯಶಸ್ಸು ಕಾಣಲು ಸಾಧ್ಯವಿಲ್ಲ ಎಂಬುದನ್ನು ಗ್ರಹಿಸಿದಂತೆ ಶಿವಸ್ವಾಮಿಯವರು ಭಾಷೆಯ ವಿಷಯದಲ್ಲಿ ಸರ್ಕಾರಕ್ಕಿಂತ ಜನರ ಜವಾಬ್ದಾರಿಯನ್ನು ಮುನ್ನೆಲೆಗೆ ತರುತ್ತಾರೆ. ಇದು ವರ್ತಮಾನದ ತುರ್ತು ಕೂಡ ಆಗಿದೆ.

'ಕೇವಲ ಓದು, ಬರಹ, ಭಾಷಣಗಳಿಂದ ಈ ವಿಷಯದಲ್ಲಿ ನಿರೀಕ್ಷಿತ ಗುರಿ ಮುಟ್ಟಲಾಗದು. ಇಲ್ಲಿನ ಕನ್ನಡಿಗರೆಲ್ಲಾ ಒಟ್ಟಾಗಿ ಆ ದಿಸೆಯಲ್ಲಿ ಮುಂದುವರಿಯಬೇಕಾಗಿದೆ. ಉರ್ದು, ಮರಾಠಿ, ತೆಲುಗು ಭಾಷೆಗಳ ಒತ್ತಡಕ್ಕೆ ಒಳಗಾಗಿ ಕನ್ನಡ ಭಾಷೆಯೂ ಮೇಲುಗೈ ಸಾಧಿಸಲಾಗದೆ ಕೇವಲ ಆ ಭಾಷೆಗಳಿಗೆ ಸಮಾನವಾದ ಸ್ಥಾನ ಮಾತ್ರ ಉಳಿಸಿಕೊಂಡು ಬರುತ್ತಿದೆ' ಎಂಬ ಅವರ ಒಳನೋಟ ಸೂಕ್ಷ್ಮವಾದುದ್ದು. ತಮಿಳರಂತೆ ಕೆಲವು ಮಾತೃಭಾಷಾ ಪ್ರೇಮಿಗಳು ಅಲ್ಲಲ್ಲಿ ತಲೆದೂರಬೇಕಾದ ಅನಿವಾರ್ಯತೆ ಇದೆ ಎಂಬುದನ್ನು ಗ್ರಹಿಸುತ್ತಾರೆ. ಅದು ಕೆಲವು ಸಂದರ್ಭಗಳಲ್ಲಿ ಅತಿರೇಕ ಎನಿಸಿದರೂ ಸಹ ಒಕ್ಕೂಟ ವ್ಯವಸ್ಥೆಯಲ್ಲಿ ಭಾಷೆಯು ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿರುವ ಹೊತ್ತಲ್ಲಿ ಪ್ರಸ್ತುತವೆನಿಸುತ್ತದೆ. ಹಾಗಂತ ಯಾವ ಭಾಷೆಯನ್ನು ಒಪ್ಪದಷ್ಟು ಮನಸ್ಥಿತಿ, ಮತ್ಸರ ಖಂಡಿತವಾಗಿಯೂ ನಮಗೆ ಬೇಕಿಲ್ಲ; ಬೇಕಾಗಿಲ್ಲ ಎನ್ನುತ್ತಾರೆ. ಪ್ರೀತಿಯಿಂದ ಮಾತ್ರ ಗಡಿಕನ್ನಡಿಗರಲ್ಲಿ ಭಾಷಾಭಿಮಾನ ತುಂಬುವ ಕೆಲಸ ನಡೆಯಬೇಕಾಗಿದೆ. ಈ ಗಡಿನಾಡಿನ ಯುವಕರು ಕನ್ನಡತನವನ್ನು ತನ್ನತನವಾಗಿಸಿಕೊಂಡು, ಅಂಗವಾಗಿಸಿಕೊಂಡು ಭಾಷಾ ಪ್ರೇಮವನ್ನು ಬೆಳೆಸಿಕೊಳ್ಳುವ ಇಂದಿನ ಪ್ರಮುಖ ಅಗತ್ಯತೆಗಳಲ್ಲಿ ಒಂದು ಎಂದು ಅವರು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ವ್ಯವಸ್ಥಿತವಾಗಿ ಈ ಗಡಿಭಾಗದಲ್ಲಿ ಕನ್ನಡ ಕಟ್ಟಿ ಬೆಳೆಸುವಲ್ಲಿ ಕೆಲವು ವಿಶೇಷ ಅಂಶಗಳನ್ನು ಅವರು ಗುರುತಿಸುತ್ತಾರೆ. ಆ ಅಂಶಗಳ ಪಟ್ಟಿ ಈ ಕೆಳಗಿನಂತಿದೆ.

೧. ಕನ್ನಡ ಮಾಧ್ಯಮ ಶಾಲೆಗಳ ಸಂಖ್ಯೆಯನ್ನು ಹೆಚ್ಚಿಸುವುದು. ಆಂಗ್ಲ ಮಾಧ್ಯಮ ಶಾಲೆಗಳ ಸ್ಥಾಪನೆಯನ್ನು ಕೈಬಿಡುವುದು.

೨. ನಮ್ಮ ಗಡಿಭಾಗಕ್ಕೆ ಹೊಂದಿಕೊಂಡ ಆಂಧ್ರ ಮತ್ತು ಮಹಾರಾಷ್ಟ್ರ ಗಡಿಯ ಪ್ರದೇಶಗಳಲ್ಲಿ ಕನ್ನಡ ಮಾಧ್ಯಮ ಶಾಲೆಗಳ ಸ್ಥಿತಿ-ಗತಿಗಳನ್ನು ಪುನಶ್ಚೇತನಗೊಳಿಸುವುದು.

೩. ಗಡಿ ಗ್ರಾಮಗಳ ಮಟ್ಟದಲ್ಲಿ ಕನ್ನಡ ಜಾಗೃತಿ ಕಾರ್ಯಕ್ರಮಗಳನ್ನು ವ್ಯಾಪಕವಾಗಿ ಹಮ್ಮಿಕೊಳ್ಳುವುದು.

೪. ಪ್ರತಿ ಅಂಗಡಿ ವ್ಯಾಪಾರ-ಮಳಿಗೆ ಹಾಗೂ ಸರ್ಕಾರದ ಎಲ್ಲಾ ಕಾರ್ಯಾಲಯಗಳಲ್ಲಿ ಮತ್ತು ಖಾಸಗಿ ಸಂಸ್ಥೆಗಳ ಮುಖ್ಯಾಲಯಗಳ ಮೇಲೆ ಕನ್ನಡದ ನಾಮಫಲಕ ದೊಡ್ಡ ಅಕ್ಷರಗಳಲ್ಲಿ ಹಾಕಿಸುವಂತೆ ಕಠಿಣಕ್ರಮ ಜರುಗಿಸುವುದು.

೫. ಪೋಷಕರು ಆದಷ್ಟು ಮಟ್ಟಿಗೆ ತಮ್ಮ ಮಕ್ಕಳನ್ನು ಕನ್ನಡ ಮಾಧ್ಯಮ ಶಾಲೆಗಳಲ್ಲಿಯೇ ಕಲಿಸುವಂತೆ ಮನವೊಲಿಸುವಿಕೆ. ಸರ್ಕಾರಿ ಅಧಿಕಾರಿ/ನೌಕರರು ಅದಕ್ಕೆ ಮುನ್ನುಡಿ ಬರೆಯಬೇಕು.

೬. ಆಂಗ್ಲ ಮತ್ತಿತರ ಭಾಷಾ ಮಾಧ್ಯಮದ ಶಾಲೆಗಳಲ್ಲಿ ಕನ್ನಡ ಕಡ್ಡಾಯವಾಗಿದ್ದರೂ ಅದರ ಬಗ್ಗೆ ನಿರ್ಲಕ್ಷ್ಯ ಧೋರಣೆ ಮುಂದುವರೆಸಿಕೊಂಡು ಹೋಗುತ್ತಿರುವುದು ಸಂಪೂರ್ಣ ತಡೆಯಬೇಕು.

೭. ಎಲ್ಲಾ ಸರ್ಕಾರಿ ಕಛೇರಿಗಳಲ್ಲಿ ಕನ್ನಡವೇ ಆಡಳಿತ ಭಾಷೆಯಾಗಿ ಅನುಷ್ಠಾನಗೊಳ್ಳುವಂತೆ ಮಾಡುವುದು.

೮. ಕನ್ನಡ ಮಾಧ್ಯಮ ಶಾಲೆಗಳಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿಗಳಿಗೆ ಉದ್ಯೋಗ ಕೊಡುವಲ್ಲಿ ಇನ್ನೂ ಹೆಚ್ಚಿನ ಮೀಸಲಾತಿ ಕಲ್ಪಿಸಬೇಕು.

೯. ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯನ್ವಯ ರಾಜ್ಯಬಾಷೆಯನ್ನು ಪ್ರಾಥಮಿಕ ಶಿಕ್ಷಣದಲ್ಲಿ ಕಡ್ಡಾಯಗೊಳಿಸುವುದು.

೧೦. ಪದವಿಪೂರ್ವ ಹಂತದಲ್ಲಿ ಕನ್ನಡ, ಇಂಗ್ಲೀಷ್ ಮತ್ತು ಹಿಂದಿಯಲ್ಲಿ ಮಕ್ಕಳಿಗೆ ಆಯ್ಕೆಯನ್ನು ನೀಡಲಾಗಿದೆ. ಅದರ ಬದಲಿಗೆ ಹೊರರಾಜ್ಯದಿಂದ ಬರುವ ಮಕ್ಕಳನ್ನು ಹೊರತುಪಡಿಸಿ

ಉಳಿದವರಿಗೆ ಕನ್ನಡ ಕಡ್ಡಾಯಗೊಳಿಸಬೇಕು.

೧೧. ರಾಜ್ಯದ ಎಲ್ಲ ಮಾದರಿಯ (ವೃತ್ತಿ ಮತ್ತು ಸಾಮಾನ್ಯ) ಪದವಿಗಳಲ್ಲಿ ಕನ್ನಡವನ್ನು ಕಡ್ಡಾಯಗೊಳಿಸಬೇಕು.

೧೨. ಭಾಷಾ ಗಡಿ ವಿವಾದಗಳನ್ನು ಬಗೆಹರಿಸಲು ಕೇಂದ್ರ ಸರ್ಕಾರ ಕ್ರಮವಹಿಸಬೇಕು.

'ಜೀವಂತ ಭಾಷೆಗೆ ನೆನಪುಗಳಿರುತ್ತವೆ ಮತ್ತು ಕನಸುಗಳಿರುತ್ತವೆ. ಈ ಎರಡರಲ್ಲಿ ಯಾವ ಒಂದು ಕೊರತೆಯಾದರೂ ಆ ಭಾಷೆ ಆಪಾಯದಲ್ಲಿರುತ್ತದೆ. ಇನ್ನೊಂದು ಶ್ರೀಮಂತ ಭಾಷೆಯ ಸಂಪರ್ಕ ಬಂದರೆ ಆ ಭಾಷೆ ವಿನಾಶದ ದಾರಿ ಹಿಡಿಯುತ್ತದೆ. ಎರಡನ್ನೂ ಬಿಟ್ಟು ಎರಡನ್ನೂ ಎರವಲು ಪಡೆಯುವ ಸ್ಥಿತಿ ಬಂದಾಗ ಆ ಭಾಷೆ ಸಾಯುತ್ತದೆ' ಎಂಬ ಡಾ. ಚಂದ್ರಶೇಖರ ಕಂಬಾರ ಅವರ ಮಾತುಗಳನ್ನು ಶಿವಸ್ವಾಮಿಯವರ ಕನ್ನಡ ಸೌರಭ ಕವನ ಸಂಕಲನ ಸ್ಫುಟಿಸುತ್ತದೆ. ಗ್ರೀಕರ ವೀರನಾದ ಹರ್ಕ್ಯುಲಸ್ ಮತ್ತಿನಲ್ಲಿದ್ದಾಗ ತನ್ನ ತಂದೆ ತಾಯಿಯರನ್ನೇ ಕೊಂದುಹಾಕಿದನಂತೆ. ಮತ್ತು ಇಳಿದಾಗ ತಾನು ಎಸಗಿದ ಪಾಪಕೃತ್ಯಕ್ಕೆ ಮರುಗಿದನಂತೆ. ಇಂಗ್ಲಿಷಿನ ಮತ್ತಿನಲ್ಲಿರುವ ನಾವು ಮತ್ತು ನಮ್ಮನ್ನಾಳುವ ಪ್ರಭುಗಳು ತಾಯಿ ಭಾಷೆಯನ್ನೇ ಕೊಲ್ಲುವ ಪಾಪಕೃತ್ಯಕ್ಕೆ ಇಳಿಯದಂತೆ ಆದಷ್ಟುಬೇಗ ಮತ್ತಿನಿಂದ ಎಚ್ಚೆತ್ತುಕೊಳ್ಳಬೇಕಿದೆ. 'ಕುಂಬಾರನ ಸೂಕ್ಷ್ಮ ಕಸುಬುದಾರಿಕೆ, ಮೇದರವನ ಬುಟ್ಟಿ ಹಣೆಯುವ ಕಲೆಗಾರಿಕೆ ಮಾನ್ಯತೆ ಕಳೆದುಕೊಂಡು ಓದುಬರಹ, ಜ್ಞಾಪಕ ಶಕ್ತಿ, ಇಂಗ್ಲಿಷ್ ಮಾತುಗಳು ಪರೀಕ್ಷೆಗಳಲ್ಲಿ ಮೆರಿಟ್ಗಳಾದವು. ಮೇದರವನೂ, ಕುಂಬರನೂ, ಅಗಸನೂ ಮೆರಿಟ್ ಇಲ್ಲದವನಾಗಿ ಕೆಲಸ ಮತ್ತು ಅನ್ನ ಕಳೆದುಕೊಂಡ' ಎಂಬ ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರ ಮಾತನ್ನು ಆಡಳಿತ ವರ್ಗ ಮನಗಾಣಬೇಕಿದೆ.

ಆಪ್ತೇಷ್ಠರ ದೃಷ್ಟಿಯಲ್ಲಿ ಶಿವಸ್ವಾಮಿ.

ವಚನ ಸಾಹಿತ್ಯದ ವಾರಸುದಾರ.

ಜಾಗತಿಕ ಇತಿಹಾಸದಲ್ಲಿ ದೇದಿಪ್ಯಮಾನವಾಗಿ ಬಾಳಿ ಬೆಳಗಿದವರು ಬಸವಾದಿ ಶರಣರು. ಸತ್ಯ ಸದಾಚಾರ ಸಂಪನ್ನರಾಗಿ, ಅರಿವು ಆಚಾರ ಅನುಭಾವ ಅಳವಡಿಸಿಕೊಂಡವರು. ಅವರು ಶಿವಯೋಗ ಸಂಪನ್ನರಾಗಿ ನಿತ್ಯಸತ್ಯ ಸಂತೃಪ್ತ ಸಂಪತ್ತನ್ನು ಸಂಪಾದಿಸಿ ಲೋಕಕ್ಕೆ ಸಮತೆ ಶಾಂತಿಯ ಸಂದೇಶ ಸೌರಭ ಸಾರಿದವರು ಶರಣರು. ಶರಣರು ಸರ್ವಸಮಾನತೆಯ ಸಂಸ್ಥಾಪಕರು. ಶೋಷಣೆರಹಿತ ವ್ಯವಸ್ಥೆಯ ಪ್ರತಿಪಾದಕರು. ಅವರು ಜಾತಿ, ವರ್ಣ, ವರ್ಗ ಆಶ್ರಮ, ಹೆಣ್ಣು, ಗಂಡು, ಹಿರಿಯ, ಕಿರಿಯ, ಬಡವ, ಬಲ್ಲಿದ, ಆಳು–ಅರಸ ಮುಂತಾದ ಆಧಾರಿತ ಮೇಲು ಕೀಳಿನ ತಾರತಮ್ಯ ರಹಿತ ಮಾನವ ಬದುಕಿನ ನಿರ್ದೇಶಕರು. ಯಾವುದೇ ವಿಧ್ವ ಸ್ವಜನ ಪಕ್ಷಪಾತಕ್ಕಾಗಲೀ ದ್ವೇಶಾಸೂಯೆಯ ದೋಷಕ್ಕಾಗಲೀ ಶರಣರಲ್ಲಿ ಸ್ವಲ್ಪವೂ ಅವಕಾಶವಿಲ್ಲ. ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸಿದ ಮಹಾಮಹಿಮರು. ವಿಶ್ವವು ಇಂದು ಎದುರಿಸುತ್ತಿರುವ ಜನಾಂಗೀಯ ವಿಭೇಧದಿಂದ ದ್ವೇಶದ ದಳ್ಳುರಿ ಧಗ ಧಗ ಎಂದು ಉರಿದು ಮಾನವ ಕುಲಕೋಟಿಯನ್ನು ದಣಿಸುತ್ತ ತನ್ನ ನಯವಾದ ನಾಲಿಗೆ ಚಾಚುತ್ತಿದೆ. ಇಂತಹ ವಿಷಮ ಸಂದರ್ಭದಲ್ಲಿ ಶರಣರ ಸಮತೆ ಶಾಂತಿಯ ಸಂದೇಶ ಜಲವು ವಿಶ್ವವನ್ನೆಲ್ಲ ಆವರಿಸಿದ ದ್ವೇಷದ ದಳ್ಳುರಿಯನ್ನಾರಿಸುವಲ್ಲಿ ಸಮರ್ಥವಾಗಿದೆ. ಆದರೆ ಶರಣರು ಸಾರಿದ ಸಮರ್ಥ ಸಂದೇಶದ ಹೊರತು ಪ್ರಾಮಾಣಿಕವಾಗಿ ಜನಮನಕ್ಕೆ ಮುಟ್ಟಿಸುವ ಸಹೃದಯಿಗಳು ಇಂದು ಅತಿ ವಿರಳ. ತನ್ನ ದೋಷಗಳನ್ನು ಮುಚ್ಚಿಕೊಂಡು ಸಾಧುವೆನಿಸಿಕೊಳ್ಳಲೆಂದೋ ಅಥವಾ ಸ್ವಾರ್ಥ ಸಾಧನೆಗೆಂದೋ, ಸ್ವಜನಪಕ್ಷದ ಗುಂಪು ಕಟ್ಟಿ ಅದರ ನಾಯಕ ತಾನಾಗಬೇಕೆಂದೋ ಅಥವಾ ಅಧಿಕಾರ ಅಂತಸ್ತಿನ ಆಸೆಗೊಂಡು ಹಾಗೂ ಅನಾಯಾಸವಾಗಿ ಅಂಧಶ್ರದ್ಧೆಯ

ಅನುಯಾಯಿಗಳಿಂದ ಮುಗ್ಧ ಭಕ್ತರಿಂದ ಬಂದೊದಗುವ ಗೌರವಾದರ ಸುಖ ಸೌಲಭ್ಯಕ್ಕೆಂದೇ ಅನೇಕರು ಬಸವಾದಿ ಶರಣರ ನಾಮ ಲಾಂಛನಗಳನ್ನು ಬಳಸುವರು. ಬಸವಾದಿ ಶರಣರ ಸತ್ಯ ಶುದ್ಧ ವಿಶ್ವ ಬಂಧುತ್ವ ತತ್ವವೇ ತನ್ನ ಉಸಿರಾಗಿ ಬಾಳುವ ಬಯಕೆಯುಳ್ಳ ಬಸವಭಕ್ತರು ಅತ್ಯಂತ ಅಪರೂಪ. ಅಂಥವರಲ್ಲಿ ಸಹೃದಯಿಗಳು ಅಪ್ಪಟ ಬಸವತತ್ವ ನಿಷ್ಠರುಗಳಾದ ಆತ್ಮೀಯ ಶ್ರೀ ಶಿವಸ್ವಾಮಿ ಚೀನಕೇರಿ ಅವರು ಅಪರೂಪದಲ್ಲಿ ಅತಿ ಅಪರೂಪದವರು.

ಶ್ರೀ ಶಿವಸ್ವಾಮಿಯರಂತಹ ಪರಿಶುದ್ಧ ಸರಳ ಸದಾಚಾರ ಸದ್ಭಕ್ತಿ ಸಂಪನ್ನ ಸರಣ ಸಂತತಿಗಳು, ಈಗಿನ ಪರಿಸ್ಥಿತಿಯಲ್ಲಿ ದೊರೆಯುವುದು ಅತಿ ಅಪರೂಪ. ಅವರು ಅಂತರಂಗ ಬಹಿರಂಗದಲ್ಲಿಯೂ ಪರಿಶುದ್ಧರು. ಒಳಹೊರಗೊಂದಾಗಿ ತಳಬೆಳಗುತ್ತಿರುವ ನಿತ್ಯ ಸತ್ಯ ನಿಷ್ಠರು. ವಿನಯ ವಿವೇಕಗಳೊಂದಿಗೆ ವಿಷಮತಾಭಾವರಹಿತ ಮನವುಳ್ಳವರು. ಬಸವಾದಿ ಶರಣರ ಸತ್ಯ ಸಂತತಿಗಳಾಗಿ ಕಲ್ಯಾಣ ನಾಡಿನಲ್ಲಿ ಬಸವ ತತ್ವ ಸಂದೇಶ ಸಾರುವ ಪ್ರವಚನ ಕಾಯಕ ಕೈಗೊಂಡ ಅವರು ತಮ್ಮ ಅಂತರಂಗದ ಅನುಭಾವವನ್ನು ಅತಿ ಸರಳ ಶೈಲಿಯಲ್ಲಿ ವಚನ ರೂಪದಲ್ಲಿ ಬರೆದಿಟ್ಟಿರುವುದು ತುಂಬಾ ಸಂತೋಷದ ಸಂಗತಿ. ತಮ್ಮ ಅಂತರಾಳದಿಂದ ಅರಳಿಬಂದ ಅನುಭಾವ ಸಂಕಲನಕ್ಕೆ 'ಲಿಂಗದೇವನ ವಚನದೀಪ್ತಿ' ಎಂಬ ಅಭಿದಾನವನ್ನಿಟ್ಟು ಅಹಂಭಾವದ ಅಮಲಿನಲ್ಲಿ ಅವರ ಶರಣರ ವಚನಾಂಕಿತ ಬದಲಿಸುವ ಅತಿರೇಕದ ವಿಪರೀತ ಮತಿಗಳಿಗೆ ವಿವೇಕದ ಕಣ್ಣತೆರೆವ ಸಾಹಸ ಮೂಡಿಬಂದಿದೆ. ಚುರುಕು ಬುದ್ಧಿಯ ಚಾಣಾಕ್ಯಚೋರರಿಗೆ ಚಾಟಿ ಏಟು ನೀಡಿದಂತಿದೆ. ಸಮಾಜದ ಸಕಲ ಕ್ಷೇತ್ರಗಳಲ್ಲಿಯೂ ತೋರುವ ಅಲ್ಲಸಲ್ಲದ ಅನಾಚಾರ ದುರಾಚಾರ ದೌರ್ಜನ್ಯ ದಬ್ಬಾಳಿಕೆಗಳನ್ನು ಅತಿ ಸರಳ ನುಡಿಯಲ್ಲಿ ಸುಧಾರಿಸುವ ಪ್ರಯತ್ನ ಮಾಡಿದ್ದಾರೆ. ಅವರ ಒಂದೊಂದು ಮಾತಿನಲ್ಲಿ

ಅಂಬಿಗರ ಚೌಡಯ್ಯ, ಮಡಿವಾಳ ಮಾಚಯ್ಯ, ಘಟ್ಟಿವಾಳಯ್ಯಗಳಂಥ ಘಟ್ಟಿ ತತ್ವ ನಿಷ್ಠ ಶರಣರ ಬೋಧೆಯ ಬೆಳಕು ಬೆಳಗುತ್ತಿದ್ದಂತಿದೆ.

'ಸಾಧನೆಯ ಹಾದಿಯಲ್ಲಿ ಸಿದ್ಧಿಯನರಿಯದೆ ಕೆಟ್ಟರಯ್ಯ, ಬೋಧನೆಯ ಹಾದಿಯಲ್ಲಿ ಸತ್ಯವನ್ನರಿಯದೆ ಕೆಟ್ಟರಯ್ಯ, ತತ್ವಪ್ರಸಾರದ ಹಾದಿಯಲ್ಲಿ ಸ್ವಾರ್ಥ ಮೀಸಲಿಟ್ಟು ಕೆಟ್ಟರಯ್ಯ' ಎಂಬ ಮಾತಿನಲ್ಲಿ ಅವರ ಪ್ರಾಮಾಣಿಕ ತತ್ವಪ್ರಸಾರದ ಪ್ರಯತ್ನ ಪ್ರತಿಬಿಂಬಿಸುತ್ತದೆ. 'ಬಲ್ಲವರು ನಾವೆಂದು ಅಲ್ಲದಾಟವಾಮಾಡಿದರೆ, ಗುಲ್ಲೇಳದಿಪ್ಪುದೆ ಜಗದೊಳಗೆ, ...ಬಸವ ವಚನಾಂಕಿತ ಕೂಡಲಸಂಗಮದೇವನೆಂಬುದ ಜರಿದು ಲಿಂಗದೇವನೆಂಬುದ ಸಾಧಿಸುವಡೆ ಅಂತಪ್ಪ ಹಗರಣವ ಮರೆಮಾಚಬಹುದೆ?' ಎಂದು ಪ್ರಶ್ನಿಸುವ ಎದೆಗಾರಿಕೆ ಅವರ ಅಪ್ಪಟ ಬಸವನಿಷ್ಠೆಗೆ ನಿದರ್ಶನವಾಗಿದೆ. ಸಂಪ್ರದಾಯ ನಿಷ್ಠರಿಗೆ ಈ ಎದೆಗಾರಿಕೆ ಮೂಡದು.

ಅವರು ತಮ್ಮ ಸಂಪ್ರದಾಯದಲ್ಲಿ ಬಂದವರು ಅದೆಂತಹ ಅಪರಾಧ ಮಾಡಿದರು ಅವರು ತಮ್ಮವರೆಂದು ಸಹಿಸಿಕೊಳ್ಳುತ್ತಾರೆ. ಇಂತಹವರಿಗೆ ವಚನ ಸಾಹಿತ್ಯ ಬಸವತತ್ವಕ್ಕಿಂತ ತಮ್ಮವರ ಸಂಘಟನೆಯೇ ಬಹುಮುಖ್ಯವಾಗಿರುತ್ತದೆ. ವಚನ ರಕ್ಷಣೆ ಅವರಿಗೆ ಗೌಣ. ಶ್ರೀ ಶಿವಸ್ವಾಮಿಯವರು ತತ್ವನಿಷ್ಠ ನಿಜ ಬಸವ ಸಂತತಿಗಳು. ವಚನ ಸಾಹಿತ್ಯದ ವಾರಸುದಾರರು. ಅದರ ಅಳಿವು ಅದೆಂದಿಗೂ ಸಹಿಸದ ಕಳಕಳಿ ಇವರಲ್ಲಿ ಮೂಡಿದ್ದು ಸೂರ್ಯಪ್ರಕಾಶದಷ್ಟು ಸ್ಪಷ್ಟ. 'ವ್ಯಾಧನಿಗೊಂದು ಚಿಂತೆ, ಮೊಲನಿಗೊಂದು ಚಿಂತೆ, ಧರ್ಮಿಗೊಂದು ಚಿಂತೆ, ಕರ್ಮಿಗೊಂದು ಚಿಂತೆ, ಎಮಗೆ ಬಸವ ತತ್ವ ಪ್ರಸಾರದ ಚಿಂತೆ, ಲಿಂಗದೇವಾ ಬಸವಣ್ಣನ ಹಿತಶತ್ರುಗಳಿಂದ, ಬಸವ ವಚನ ಅಳಿಯುವುದೊ, ಉಳಿಯುವುದೊ ಎಂಬ ಚಿಂತೆ' ಎಂಬ ಮಾತಿನಲ್ಲಿ ಅವರ ಹೃದಯದಾಳದಲ್ಲಿ ಹುದುಗಿದ ವಚನ ಸಾಹಿತ್ಯ ರಕ್ಷಣೆಯ ಕಳಕಳಿಗೆ ಮತ್ತಷ್ಟು ಪುಷ್ಠಿ ದೊರೆತಂತಾಗಿದೆ. ಹೀಗೆ ಅನೇಕ ರೀತಿಯಲ್ಲಿ ಅವರ ವಚನ ರಕ್ಷಣೆಯು ಕಳಕಳಿ ಕಟಿಬದ್ಧವಾಗಿರುವುದನ್ನು ತೋರಿದ್ದಾರೆ.

'ಕ್ರಾಂತಿಕಾರಿ ಧರ್ಮ ಪ್ರಸಾದರೆಂದು ನಂಬಿ ಕೆಟ್ಟವರು ಕೆಲವರು ಜಗದ್ಗುರುವೆಂದು ನಂಬಿ ಕೆಟ್ಟರು ಕೆಲವರು .....ಉತ್ತಮವಾಗ್ಮಿ ಎಂದು ನಂಬಿ ಕೆಟ್ಟವರು ಕೆಲವರು' ಎಂಬ ಮಾತಿನಲ್ಲಿ ನಿರ್ಭೀತಿ ನಿರ್ಭಯವಾದ ಅವರ ನಿಲುವಿನಲ್ಲಿ ಮಡಿವಾಳಯ್ಯ, ಅಂಬಿಗರ ಚೌಡಯ್ಯ, ಘಟ್ಟಿವಾಳಯ್ಯಗಳಂಥ ಘನ ಶರಣರ ಧ್ವನಿ ಪ್ರತಿಬಿಂಬಿತವಾದಂತಿದೆ. ಸತ್ಯಶುದ್ಧ ಸಾದಾಚಾರ ತತ್ವನಿಷ್ಠರಲ್ಲಿ ಮತ್ತು ಇಂತಹ ನಿರ್ಭಯದ ನಿಜನಿಷ್ಠೆ ಮಾತು ಮೂಡಿ ಬರುತ್ತವೆ.

ಹೀಗೆ ಹಲವು ವಿಷಯಗಳಲ್ಲಿ ಬದುಕಿನಲ್ಲಿ ಬಹು ಮಗ್ಗುಲಲ್ಲಿ ತೋರಿ ಬರುವ ಕುಂದುಕೊರತೆಗಳು, ಢಾಂಬಿಕತನ, ಶುಷ್ಕ ವಾಕ್‌ಚಾತುರ್ಯವನ್ನು ಅವರು ಬರೆದಿರುತ್ತಾರೆ. ತಮ್ಮ ವಚನ ಸಂಕಲನಗಳಲ್ಲಿ ಬಂಧಿಸಿದ್ದಾರೆ. ಅವರ ಮನದಾಸೆಯ ತತ್ವ ನಿಷ್ಠೆಯನರಿತು ಕಸಾಪ ಬೀದರ ಘಟಕ ಶ್ರೀ ಶಿವಸ್ವಾಮಿಯವರ ಜೀವನ ಕುರಿತು ಪುಸ್ತಕ ಹೊರತರುತ್ತಿರುವುದು ಸಂದರ್ಭೋಚಿತವೆನಿಸುತ್ತದೆ. ಶುಭವಾಗಲಿ.

*** ಬಸವಶ್ರೀ ಸಿದ್ಧರಾಮೇಶ್ವರ ಶರಣರು, ಬೆಲ್ದಾಳ.**

ಅರಳಿದ ಸಾಹಿತ್ಯ ಬಳ್ಳಿ.

ಕನ್ನಡ ಸಾಹಿತ್ಯ ಬಳ್ಳಿಯಲ್ಲಿ ಜಿಲ್ಲೆಯಿಂದ ಅರಳಿರುವವರಲ್ಲಿ ಶಿವಸ್ವಾಮಿಯವರು ಒಬ್ಬರು. ಕನ್ನಡ ಭಾಷೆ, ಸಂಸ್ಕೃತಿ, ಇತಿಹಾಸ, ನೆಲ-ಜಲ ಮುಂತಾದವುಗಳ ಕುರಿತಾದ ಹಿರಿಮೆ ಗರಿಮೆಗಳು ಅವರ ಸದ್ಭಾವನೆಯಲ್ಲಿ ಗರಿಗೆದರಿನಿಂತಿವೆ. ಓದುಗರ ನಾಡು-ನುಡಿಗಳ ದಿವ್ಯತೆಯ ಬಗೆಗೆ ಸ್ವಾಭಿಮಾನ ಮೂಡಿಸುವಲ್ಲಿ ಯಶಸ್ವಿಯಾಗಿವೆ.

ಹನ್ನೆರಡನೇ ಶತಮಾನದಿಂದ ಇಲ್ಲಿಯವರೆಗೆ ಅನೇಕ ಶರಣರು, ಸಾಧಕರು, ಶಿವಯೋಗಿಗಳು ವಚನ ರಚಿಸಿದ್ದಾರೆ. ೧೫ನೇ ಶತಮಾನದಲ್ಲಿ ಶ್ರೀ ಯಡಿಯೂರು ಸಿದ್ದಲಿಂಗೇಶ್ವರರು, ಸ್ವಾತಂತ್ರ್ಯ ಸಿದ್ಧಲಿಂಗೇಶ್ವರರು, ಕಾಡ ಸಿದ್ಧೇಶ್ವರರು ಮುಂದೆ ೧೭ನೇ ಶತಮಾನದಲ್ಲಿ ಷಣ್ಮುಖ

ಶಿವಯೋಗಿಗಳು ಹೀಗೆ ಬೆಳೆದು ಬಂದ ವಚನಗಳು ೨೦-೨೧ನೇ ಶತಮಾನದಲ್ಲಿ ನೂತನ ವಚನಕಾರರು, ವಚನ ರಚನೆಯಲ್ಲಿ ತೊಡಗಿರುವುದು ಸಂತೋಷದ ವಿಷಯ. ಶ್ರೀ ಸಿದ್ದಯ್ಯ ಪುರಾಣಿಕ, ಮಹಾದೇವ ಬಡಕಾರ, ಮಾತಾಜಿ ಜಚನಿ, ಸಿ.ಪಿ.ಕೆ ಶ್ರೀ ಶಿವಮೂರ್ತಿ ಶರಣರು ಚಿತ್ರದುರ್ಗ, ಶ್ರೀ ಮೂಜಗಂ ಇನ್ನೂ ಹಲವಾರು ವಚನಕಾರರ ಬಳಗದಲ್ಲಿ ಶ್ರೀ ಶಿವಸ್ವಾಮಿ ಚೇನಕೇರಿ ಸೇರಿರುವುದು ಸ್ವಾಗತದ ವಿಷಯ. ಚಿಕ್ಕವರಾದರೂ ಚೊಕ್ಕದಾಗಿ ಬಹಳ ಮಾರ್ಮಿಕವಾಗಿ ವಚನಗಳನ್ನು ಬರೆಯುತ್ತಾರೆ. ಅವರ ಬರಹದಲ್ಲಿ ಸಾಮಾಜಿಕ ಕಳಕಳಿಯಿದೆ. ಸಮಾಜವನ್ನು ಎಚ್ಚರಿಸುವ ಕೆಚ್ಚೆದೆಯಿದೆ. ಭ್ರಾಂತಿಗೆಟ್ಟಿರುವ ಮನುಷ್ಯರಿಗೆ ದಿವ್ಯ ಔಷಧಿಯಾಗಿ ಕಾಯಿಲೆ ವಾಸಿ ಮಾಡುತ್ತವೆ.

ಶ್ರೀ ಶಿವಸ್ವಾಮಿಯವರ ಬದುಕು ಬಹಳ ವಿಚಿತ್ರವಾಗಿದ್ದರೂ ಸತ್ಯವಾಗಿದೆ. ದೈವೀ ಸಂಕಲ್ಪದಂತೆ ಸಂಪ್ರದಾಯಿಗಳ ಕಾಟಾಚಾರದಿಂದ ಹೊರಗೆ ಬಂದು, ಅವರ ಮಾತುಗಳಿಂದ ಚುಚ್ಚಿಸಿಕೊಂಡು ಅಪ್ಪಟ ಚಿನ್ನವಾಗಿ ಕಂಗೊಳಿಸುವ ಮಹಾವ್ಯಕ್ತಿಯೇ ಶರಣ ಶ್ರೀ ಶಿವಸ್ವಾಮಿ ಚೇನಕೇರಿಯವರು. ಇತಿಹಾಸದ ಪುಟದಲ್ಲಿ ಮಹಾತಾಯಿಯಾದ ಅಕ್ಕನಾಗಮ್ಮನವರ ಪತಿಯಾದ ಶ್ರೀ ಶಿವಸ್ವಾಮಿಯ ಹೆಸರು ನೀವು ಕೇಳಿದ್ದೀರಿ. ಶ್ರೀ ಬಸವಣ್ಣನವರ ದಾಸೋಹದಲ್ಲಿ ಎಲೆಮರೆ ಕಾಯಿಯಾಗಿ ಬೆಳಗಿದ ಶಿವಸ್ವಾಮಿಯವರು ೨೦-೨೧ನೇ ಶತಮಾನದ ಶಿವಸ್ವಾಮಿಯಾಗಿ ವಚನಗಳನ್ನು ರಚಿಸಿ ಇತಿಹಾಸದ ಪುಟದಲ್ಲಿ ಧೃವತಾರೆಯಂತೆ ಮಿನುಗುವ ನಕ್ಷತ್ರವಾಗಿ ಕಲ್ಯಾಣ ಕರ್ನಾಟಕದ ಶ್ರೇಷ್ಠ ವಚನಕಾರರಾಗುವುದರಲ್ಲಿ ಯಾವ ಸಂದೇಹ ಇರುವುದಿಲ್ಲ. ಇವರ ಜೀವನಗಾಥೆಯ ಕುರಿತು ಗ್ರಂಥವನ್ನು ಕನ್ನಡ ಸಾಹಿತ್ಯ ಪರಿಷತ್‌ನವರು ಪ್ರಕಟಪಡಿಸುತ್ತಿರುವುದು ಸಂತೋಷದ ವಿಷಯ, ಅವರಿಗೆ ಶರಣುಗಳು.

*** ಶ್ರೀ ಶಿವಾನಂದ ಮಹಾಸ್ವಾಮಿಗಳು**

ಶ್ರೀ ಗುರುಬಸವೇಶ್ವರ ಸಂಸ್ಥಾನ ಮಠ, ಹುಲಸೂರು.

ಮನದ ತಿರುಳ ಹುರಿದ ಚಿಂತಕ.

ಈ ಕೃತಿಯ ವಿಷಯವಸ್ತುವಾದ ಶ್ರೀ ಶಿವಸ್ವಾಮಿ ಚೀನಕೇರಿ ಯವರನ್ನು ನಾನು ನೋಡಿಲ್ಲ. ಆದರೆ ಅವರ ಆಪ್ತ ಮಿತ್ರರಾದ ಡಾ.ವೀರಶೆಟ್ಟಿಯುವರು ನನ್ನ ಮಿತ್ರರು. ಅವರ ಪುಸ್ತಕರೂಪಕ್ಕೆ ಸಿದ್ಧಗೊಳ್ಳುತ್ತಿರುವ ಬರಹದ ಕಟ್ಟನ್ನು ಕೊಟ್ಟು ಶಿವಸ್ವಾಮಿಯವರ ಹೆಸರು, ಪರಿಚಯ ಹೇಳಿ ಅಭಿಪ್ರಾಯ ಬರೆದುಕೊಡುವಂತೆ ನನ್ನನ್ನು ಕೇಳಿದರು. ಶಿವಸ್ವಾಮಿಯವರ ಬದುಕಿನ ಬದ್ಧತೆ, ಅವರ ಸತ್ಯಶುದ್ಧ ಜೀವನ ವಿವರಗಳನ್ನು ಕೇಳಿದ ನನಗೆ ಇಲ್ಲವೆನ್ನಲಾಗಲಿಲ್ಲ. ಪ್ರತಿಯಾಡದೆ ಒಪ್ಪಿಕೊಂಡೆ. ಹೀಗಾಗಿ ಶಿವಸ್ವಾಮಿಯವರ ಪರಿಚಯ ಅವರ ಬರಹವನ್ನೋದುತ್ತಾ ಹೋದಂತೆ ನನ್ನಲ್ಲಿ ತೆರೆದುಕೊಳ್ಳುತ್ತಾ ಹೋಯಿತು. ಕಣ್ಣನ್ನು ಕುರಿತು ಅಲ್ಲಮಪ್ರಭುಗಳು ಒಂದು ವಚನದಲ್ಲಿ ಹೀಗೆ ಹೇಳಿದ್ದಾರೆ.

ಕಂಗಳ ಕರುಳ ಕೊಯ್ದವರ
ಮನದ ತಿರುಳ ಹುರಿದವರ
ಮಾತಿನ ಮೊದಲ ಬಲ್ಲವರ
ಎನಗೊಮ್ಮೆ ತೋರಾ ಗುಹೇಶ್ವರ

ಪ್ರಭುವಿನ ಅರಿವು ಮಾತಿನ ಪಸರದಲ್ಲಿ ಶಬ್ದಾರ್ಥದ ಹಂಗಿನದಲ್ಲ. ಅನುಭವಕ್ಕೆ ಒಡ್ಡಿಕೊಂಡ ಪರಿಣಾಮದಲ್ಲಿ ಫಲಶ್ರುತಿಯಾಗಿ ನುಡಿಗೊಡುವುದು. ಕಂಗಳ ಕರುಳ ಕೊಯ್ಯುವುದು ಸುಕಾಸುಮ್ಮನೆ ಲಭ್ಯವಾಗುವ ಸುಲಭದ ಪರಿಣಾಮವಲ್ಲ. ಇದು ಹೊರಗಣ್ಣಿನ ಕ್ರಿಯೆ ಮಾತ್ರವಲ್ಲ, ಒಳಗಣ್ಣಿನ ಸಾಧನೆ ಕೂಡ. ಋಣಭಾರದ ಹಂಗಿನ ಸಂಗದ ಎಲ್ಲ ಬಂಗಬವಣೆಗಳಿಂದ ಬಿಡುಗಡೆ ಪಡೆಯುವ ಯೋಗ. ಇದು ಎಷ್ಟು ತಾರ್ಕಿಕವೋ ಅಷ್ಟೇ ಅಧ್ಯಾತ್ಮಿಕ. ಈ ಅರಿವು ಶಬ್ದಾರ್ಥದ ಹಂಗು ಹರಿದುಕೊಂಡಾಗ ಮಾತ್ರ ವೇದ್ಯವಾಗುವುದು. ಶಿವಸ್ವಾಮಿಯವರ ಬರಹದ ನೋಟ ಬದುಕಿನ ಬಗೆಗಿನ

ಅವರ ಸತ್ಯಶುದ್ಧ ಭಾವಶುದ್ಧ ಸಂಬಂಧಗಳ ನಿರೀಕ್ಷೆಯಲ್ಲಿ ಹರಿದದ್ದು, ಅವರು ಹೇಳುವುದರಲ್ಲಿ ಯಾವುದೇ ಹೊಸವಿಚಾರಗಳು ಕಾಣುತ್ತಿಲ್ಲವೆನ್ನಿಸಬಹುದು. ಆದರೆ ಕಳೆದುಕೊಳ್ಳುತ್ತಿರುವ ನೆಲೆಯಲ್ಲಿನ ಆತಂಕ ಕಂಗಾಲುಗಳ ಅವರ ಒಳಸಂಕಟ ಮಾಮೂಲಿ ವಿಚಾರಗಳಿಗೆ ಮಾನವೀಯ ಆದ್ರತೆಯನ್ನು ಪ್ರಾಪ್ತವಾಗಿಸಿದೆ. ಹೀಗಾಗಿ ಸಾಮಾನ್ಯ ನೋಟದಲ್ಲಿ ಸಾಧಾರಣವಾಗಿ ಕಾಣುವ ಸಂಗತಿ ಒಳನೋಟದ ವಿಶೇಷತೆಯಲ್ಲಿ ಮತ್ತೊಮ್ಮೆ ಚಿಂತಿಸುವಂತೆ ಪ್ರೇರೇಪಿಸುತ್ತದೆ. ಇದು ಇವರ ಮೌಲ್ಯ ನಿರೀಕ್ಷೆಯ ವಿಶೇಷ. ಧಾರ್ಮಿಕ ಸ್ವಾರ್ಥ ಎಂಬಲ್ಲಿ ದೇವರು–ಪೂಜಾರಿಗಳು ಮತ್ತು ಭಕ್ತಜನರು ಇವರನ್ನು ಕುರಿತು ಕೇವಲ ಮೌಢ್ಯದ ಮಾತುಗಳನ್ನು ಮಾತ್ರ ಪ್ರಸ್ತಾಪಿಸುವುದಿಲ್ಲ. ಅಸಂಬಂಧ ನಿಷ್ಪ್ರಯೋಜಕತೆ ಯನ್ನು ಹೇಳುತ್ತಲೇ ಅರ್ಥವ್ಯವಹಾರದ ವಹಿವಾಟಿನ ಬಗ್ಗೆ ಹೇಳುತ್ತಾರೆ. ದೇಶದ ಅರ್ಥವ್ಯವಸ್ಥೆಯ ಸಂದರ್ಭದಲ್ಲಿನ ಇಂಥ ಗುಡಿ ಗುಂಡಾರಗಳ ನಿಷ್ಕ್ರೀಯ ಅರ್ಥ ಸಂಗ್ರಹಣೆಗೆ ವ್ಯವಹಾರದ ಕಾಲಶ್ರಮಗಳ ಪೋಲು ನಿರರ್ಥಕತೆಯನ್ನು ಕುರಿತು ವಿವರಿಸುತ್ತಾರೆ. ಹೀಗೆ ಇಡೀ ಚಿಂತನೆ ಒಂದು ವಿಚಾರಕ್ಕೆ ಮಾತ್ರ ಸೀಮಿತಗೊಳ್ಳದೆ ಅದರ ಸ್ಥೂಲ ಸೂಕ್ಷ್ಮಗಳ ವ್ಯಾಪ್ತಿಯಲ್ಲಿ ವಿಸ್ತರಿಸಿಕೊಳ್ಳುತ್ತದೆ. ಮನದ ತಿರುಳ ಹುರಿದ ಬಗೆಯ ಚಿಂತನೆ ಇದಾಗುತ್ತದೆ. ಮಾತು ವೃಥಾ ಆಗದೆ ಅರ್ಥ ಮತ್ತು ಅನುಭವದ ಸಂಬಂಧಗಳ ಬಲ್ಲ ನೆಲೆಯ ಪ್ರಯೋಗವಾಗುತ್ತದೆ. ಹೀಗಾಗಿ ಶಿವಸ್ವಾಮಿಯವರ ಚಿಂತನೆ ನಿಜವಾದ ಅರ್ಥದಲ್ಲಿ ಸೀಮೋಲ್ಲಂಘನೆಯ ಬರಹವಾಗಿದೆ. ಸೀಮೆ ಅಂದರೆ ಮನುಷ್ಯ, ಸಮಾಜ ಹಾಕಿಕೊಂಡಿರುವ ಸ್ವಾರ್ಥ ಚೌಕಟ್ಟುಗಳ ಸೀಮೆ; ಅವುಗಳನ್ನು ಉಲ್ಲಂಘಿಸುವುದೆಂದರೆ ಜೀವಪರ ಪ್ರಗತಿಪರ ದಾರಿಯಲ್ಲಿ ಬದುಕುವುದು. ಇಂಥ ದಾರಿಯ ನಡಿಗೆಗೆ ಅಗತ್ಯವಾದ ಬೆಳಕಿನ ಸಾಧನಗಳನ್ನು ಅಂದರೆ ದೀಪಗಳನ್ನು, ದೀಪದಾರಿಗಳನ್ನು ಕುರಿತು ಚಿಂತನಾದ್ರವ್ಯ ಇವರಲ್ಲಿದೆ.

ಇವರ ಕೃತಿಗಳಲ್ಲಿ ಪ್ರಸ್ತಾಪಿತವಾಗಿರುವ ವಿಚಾರಗಳು ಕೇವಲ ವರ್ತಮಾನದ ವಿದ್ಯಮಾನಗಳಿಗೆ ಮಾತ್ರ ಸೀಮಿತಗೊಂಡವಲ್ಲ. ಇವು ಪರಂಪರೆಯ ಮೂಲದ್ರವ್ಯಕ್ಕೂ ಸಂಬಂಧಿಸಿದವು. ಪುರಾಣ ಲೋಕದಲ್ಲಿ ಪ್ರಶ್ನೆ ಇಲ್ಲದೆ ಒಪ್ಪಿತ ಸಂಗತಿಗಳಿಗಾಗಿ ರೂಢಿಗತ ಜಾಡಿಗೆ ಬಿದ್ದ ಕಥನಗಳಾಗಿ ಅಪವ್ಯಾಖ್ಯೆಯಲ್ಲಿ ಸತ್ಯವನ್ನು ಸುಳ್ಳೆನ್ನಿಸಿಯೂ, ಸುಳ್ಳನ್ನೇ ಸತ್ಯವೆನ್ನಿಸಿಯೂ ನಂಬಿಸಿ ಪ್ರಶ್ನಾತೀತವಾಗಿದ್ದವು. ಪ್ರಶ್ನಿಸುವ ಗುಣವನ್ನೇ ವಿದ್ರೋಹದ ನೆಲೆಯಲ್ಲಿ ತನಿಖೆಗೊಡ್ಡುತ್ತಿದ್ದವು. ಇಂಥವುಗಳನ್ನು ಸರಳವಾದ ಪ್ರಶ್ನೆಗಳನ್ನು ಹಾಕುತ್ತಲೇ ಪಲ್ಲಟಗೊಳಿಸುತ್ತಾರೆ ಶಿವಸ್ವಾಮಿ. ಕಂಗಳ ಕರುಳಕೊಯ್ದ ದಾರಿಯ ಮಾತಾಗಿ ಈ ಚಿಂತನೆಯನ್ನು ಬೆಳೆಸುತ್ತಾರೆ. ಹೀಗಾಗಿ ಇಡೀ ಭಾರತದ ಜನಜೀವನಕ್ಕೆ ಅಂಟಿರುವ ಭ್ರಮಾತ್ಮಕ ಮೌಲ್ಯ ಮೂಲಗಳನ್ನು ಇವರು ಪ್ರಶ್ನಿಸುತ್ತಾ ನಡೆಯುತ್ತಾರೆ. ವೇದ ಪುರಾಣಗಳ ಕಥೆ ಉಪವ್ಯಾಖ್ಯಾನಗಳ ಹಿಂದಿನ ನೀತಿ ಚರಿತ್ರೆಯನ್ನು ತನಖೆಗೊಡ್ಡುತ್ತಾರೆ. ಮಹಾಮರೆವಿನಲ್ಲಿ ಮುಳುಗಿ ಇದೇ ಅರಿವೆಂದು ಬದುಕುತ್ತಿರುವ ಶೂದ್ರಾದಿ ಶೋಷಿತ ಜನರ ವಿವೇಕವನ್ನು ಎಚ್ಚರಿಸುವ ಕಾರ್ಯವನ್ನು ಇವರ ಬರಹಗಳು ಮಾಡುತ್ತಿವೆ. ಜಾತಿ ವ್ಯವಸ್ಥೆಗೆ ಕಾರಣವಾಗಿರುವ ಚಾತುವರ್ಣವು ಈ ದೇಶಕ್ಕೆ ಅಂಟಿದ ಶಾಪ. ಐದು ಸಾವಿರ ವರ್ಷಗಳಿಂದಲೂ ಅದು ಈ ದೇಶವನ್ನು ಹುಚ್ಚಾಸ್ಪತ್ರೆಯನ್ನಾಗಿ ರೂಪಿಸಿದೆ. ಈ ಹುಚ್ಚಾಸ್ಪತ್ರೆಯಲ್ಲಿ ಶೂದ್ರರು ಹುಚ್ಚರಾದರೆ, ಬ್ರಾಹ್ಮಣರು ಅವರನ್ನು ಹುಚ್ಚರನ್ನಾಗಿಸಿಯೇ ಹೊಟ್ಟೆಹೊರೆಯುವವರಾಗಿದ್ದಾರೆ. ಇವರ ಈ ತಂತ್ರಕ್ಕೆ ಹಣಸುರಿಯುವ ವ್ಯಾಪಾರೀವರ್ಗ ತಾನೂ ತಿಂದು ಬ್ರಾಹ್ಮಣ್ಯವನ್ನು ಸಾಕುವ ಕೊಳ್ಳೆಗೆ ತೊಡಗಿದೆ. ಇವರಿಗೆ ನೆರವಾದಂತೆ ಕ್ಷತ್ರಿಯತ್ವದ ಅಧಿಕಾರ ಬಳಕೆಯಾಗುತ್ತಿದೆ. ಇದು ಪ್ರಭುತ್ವದ ಕಾಲದಲ್ಲಿಯೂ ಇದ್ದ ರೀತಿ ನೀತಿ, ಈಗ ಪ್ರಜಾಪ್ರಭುತ್ವದ ಕಾಲದಲ್ಲಿಯೂ ಮುಂದುವರಿದ ಜಾತಿನೀತಿ. ಈ ರಾಜಕೀಯ ವಿದ್ಯಮಾನಗಳ ತಲಸ್ಪರ್ಶಿ ಗ್ರಹಿಕೆಗಳನ್ನೊಳಗೊಂಡಂತೆ

ಶಿವಸ್ವಾಮಿಯವರು ಭೂತ ವರ್ತಮಾನವನ್ನು ವಿಶ್ಲೇಷಿಸುತ್ತಿದ್ದಾರೆ. ಈ ಕಾರಣದಿಂದಲೇ ಅಲ್ಲಮಪ್ರಭುವಿನ ವಚನದ ಮಾತಿನ ಮೊದಲ ಬಲ್ಲ ನೋಟ ಇದು ಎಂದು ನಾನು ಹೇಳಿದ್ದು.

*** ಪ್ರೊ.ಎಸ್.ಜಿ.ಸಿದ್ದರಾಮಯ್ಯ**

ಖ್ಯಾತ ಸಾಹಿತಿಗಳು ಮತ್ತು ಸಂಸ್ಕೃತಿ ಚಿಂತಕರು, ಬೆಂಗಳೂರು.

ಜೀವದ್ರವ್ಯ ಶಿವಸ್ವಾಮಿ.

ಇಂದು ಆಧುನಿಕತೆಯ ಹೆಸರಿನಲ್ಲಿ ಪೂರ್ವಜರಿಂದ ಬಳುವಳಿಯಾಗಿ ಬಂದ ಮೌಢ್ಯಗಳೊಡನೆ ನಾವೂ ಹೆಚ್ಚೆಚ್ಚು ಮೌಢ್ಯಗಳನ್ನು ಸೇರಿಸುತ್ತಾ ಅವುಗಳನ್ನೇ ಇದಮಿತ್ಥಂ ಎಂದು ಆಚರಿಸುತ್ತ ನಡೆದಿದ್ದೇವೆ. ಬಸವಾನುಯಾಯಿಗಳೂ ಇದಕ್ಕೆ ಹೊರತಾಗಿಲ್ಲ. ವಚನಗಳನ್ನು ಹೇಳುತ್ತಲೇ, ಬರೆಯುತ್ತಲೇ ಭಾಷಣ ಕೊರೆಯುತ್ತಲೇ ಹಣಮಂದೇವರ ಗುಡಿ ಸುತ್ತುತ್ತಿದ್ದಾರೆ. ಇಷ್ಟೊಂದು ವೈಚಾರಿಕ ಕ್ರಾಂತಿಯ ಫಲಶ್ರುತಿಗಳಾದ ವಚನಗಳ ಅಧ್ಯಯನ ಇನ್ನೂ ವೈಜ್ಞಾನಿಕವಾಗಿ ನಡೆದೇ ಇಲ್ಲ. ಮುಂದಿನ ತಲೆಮಾರಿನವರು ಇದನ್ನು ಪೂರ್ಣಗೊಳಿಸಬೇಕಾಗಿದೆ.

ಶ್ರೀಯುತ ಶಿವಸ್ವಾಮಿ ಚೀನಕೇರಿಯವರು ವಚನ ಚಳುವಳಿಯನ್ನು ವೈಚಾರಿಕ ಮತ್ತು ವೈಜ್ಞಾನಿಕ ನೆಲೆಯಲ್ಲಿ ಅಧ್ಯಯನ ಮಾಡಲು ಓದುಗರಿಗೆ ತಮ್ಮ ಪುಸ್ತಕಗಳ ಮುಖಾಂತರ ಪ್ರೇರಣೆ ನೀಡುತ್ತಾರೆ. ಏಕೆಂದರೆ ಈ ದೇಶದಲ್ಲಿ ದೇವರು, ಧರ್ಮ ಮತ್ತು ಜಾತಿಗೆ ಸಂಬಂಧಿಸಿದಂತೆ ನಡೆದಷ್ಟು ಸಂಘರ್ಷ ಹಾಗೂ ರಕ್ತಪಾತಗಳು ಯಾವ ಯುದ್ಧಗಳಲ್ಲಿಯೂ ನಡೆದಿಲ್ಲ. ಇಂತಹ ಸೂಕ್ಷ್ಮ ವಿಚಾರಗಳನ್ನಿಟ್ಟುಕೊಂಡು ಬರೆಯವುದು ಇಂದಿನ ಸಾಹಿತ್ಯಿಕ ವಾತಾವರಣದಲ್ಲಿ ಸವಾಲಿನ ಮಾತೇ ಆಗಿದೆ. ಏಕೆಂದರೆ ಸಾಹಿತ್ಯ ಕ್ಷೇತ್ರದಲ್ಲಿ ದೊಡ್ಡ ದೊಡ್ಡ ಪ್ರಶಸ್ತಿಗಳನ್ನು ಪಡೆದುಕೊಂಡವರು ಸಹ ರೇಖೆ, ಪ್ರಾದಿಕ, ಕ್ಲಾಸಿಕ್ ಹೀಲಿಂಗ್, ಜ್ಯೋತಿಷ್ಯ, ವಾಸ್ತು, ಮಣಿ, ಮೂರ್ತಿ, ದಾರ ತಿಥಿ, ರಾಹುಕಾಲ, ಗುಳಿಕಕಾಲ, ಯಮಗಂಡಕಾಲ,

ದಿನ, ಹುಣ್ಣಿಮೆ, ಅಮವಾಸ್ಯೆಗಳಿಗನುಸಾರವಾಗಿ ಬದುಕುತ್ತಿದ್ದಾರೆ. ಕಾಯಕವೇ ಪೂಜೆಯಾದಾಗ ಎಲ್ಲ ಭಯಗಳು ದೂರವಾಗಿ ಪ್ರಜ್ಞಾವಂತ ಮನುಷ್ಯರು ಹುಟ್ಟುವುದು ಸಾಧ್ಯವಾಗುತ್ತದೆ. ಜ್ಞಾನವೇ ಮೋಕ್ಷ ಎಂಬ ಬುದ್ಧಿಜೀವಿಗಳು ಪ್ರಭುತ್ವದ ಭಾಗವಾಗಿ ಜನರನ್ನು ತುಳಿಯಲು ಸಹಕರಿಸುತ್ತಿದ್ದಾರೆ.

ಪ್ರಭುತ್ವದ ಹಿಡಿತವನ್ನು ಪ್ರಶ್ನಿಸುವ ವಿಶ್ಲೇಷಿಸುವ ಕೆಲಸ ಸಾಹಿತ್ಯದ್ದೇ ಹೊರತು ಪ್ರಭುತ್ವಕ್ಕೆ ಕೈ ಜೋಡಿಸುವುದಲ್ಲ. ಚೀನಕೇರಿಯವರು ತಮ್ಮ ಪುಸ್ತಕಗಳಲ್ಲಿ ಅಂತಹ ಪ್ರಭುತ್ವವಿರುವ ದೇವರನ್ನು ಅವರ ಅಸ್ತಿತ್ವವನ್ನು ಪ್ರಶ್ನಿಸುವಂತಹ ವಚನಗಳನ್ನು ಆಯ್ಕೆ ಮಾಡಿ ಅವುಗಳನ್ನು ವಿಶ್ಲೇಷಿಸಿದ್ದಾರೆ. ವಚನಕಾರರು ದೇವರ ಹೆಸರಿನ ಮೇಲೆ ದುಡಿಯದೇ ಉಣ್ಣುವ ಮೇಲ್ಜಾತಿಯವರ ಹುನ್ನಾರಗಳನ್ನೂ ದುಡಿದರೂ ದೇವರ ಹೆಸರಿನಲ್ಲಿ ಉಪವಾಸವಿದ್ದು ಮೋಸ ಹೋಗುವ ಕೆಳಜಾತಿ ದೈವಗಳನ್ನು ತಿರಸ್ಕರಿಸಿದರೆಂಬುದನ್ನು ಚೀನಕೇರಿಯವರು ಮನಮುಟ್ಟುವಂತೆ ಹೇಳಿದ್ದಾರೆ. ಭಯಮೂಲವಾದ ದೇವರು ಭಕ್ತರಲ್ಲಿ ಭಯೋತ್ಪಾದನೆಯನ್ನುಂಟು ಮಾಡುತ್ತಾನೆಯೇ ವಿನಾಃ ಪ್ರೀತಿ ಅಂತಃಕರಣಗಳನ್ನು ಬೆಳೆಸುವುದಿಲ್ಲ. ಭಕ್ತರನ್ನು ಹೀಗೆ ತಿರಿದುಂಬ ದೈವಗಳು ಭಕ್ತರಿಗೆ ಏನನ್ನೂ ಕೊಡುವುದಿಲ್ಲ. ಬದಲಿಗೆ ಹಿಂಸೆ, ದುರಾಸೆ ನೋವುಗಳನ್ನು ನೀಡುತ್ತವೆಂಬ ಮಾತನ್ನು ಅವರು ಒತ್ತಿ ಹೇಳುತ್ತಾರೆ.

ಕಾಯಕ ಮತ್ತು ಕುಲಜಾತಿಗಳ ವಿಶ್ಲೇಷಣೆಗಾಗಿ ಚೀನಕೇರಿಯವರು ಆರಿಸಿಕೊಂಡ ವಚನಗಳು ಹೊಸದನ್ನು ಹೇಳಲು ತಹತಹಿಸುತ್ತವೆ. ವ್ಯಾಸ, ಮಾರ್ಕಂಡೇಯ, ದಧೀಚಿ ಮುಂತಾದ ಹೀನಕುಲದವರು ತಮ್ಮ ಹೆಗಲ ಮೇಲಿದ್ದಾರೆ. ಇತರೆ ಶೂದ್ರರು ನಮ್ಮ ಕಾಲಬಳಿಯಿದ್ದಾರೆ ಎಂಬ ಅವರ ಮಾತಂತೂ ಇಂದು ಗೋತ್ರವನ್ನು ಹೇಳಿಕೊಂಡು ತಿಂದುಣ್ಣುವವರು ಮುಟ್ಟಿ ನೋಡಿಕೊಳ್ಳುವಂತೆ ಮಾಡುತ್ತದೆ. ಜಾತಿಗಳ ವೈಜ್ಞಾನಿಕ ವಿಶ್ಲೇಷಣೆಯನ್ನು ಮಾಡಿದ ಶರಣರ ವಚನಗಳಿಗೆ ಈ ಕಾಲಕ್ಕೆ

ತಿಳಿಯುವಂತೆ ಹೇಳುವ ಅವರ ಸಾಹಸ ಮೆಚ್ಚತಕ್ಕುದಾಗಿದೆ. ಬೇರೆ ಜಾತಿಗಳವರು ಅವರ ಮೂಲಜಾತಿಗಳ ಮೂಲಪುರುಷನ್ನಿಟ್ಟುಕೊಂಡು ಪರಸ್ಪರ ಬಡಿದಾಡುತ್ತಿರುವವರ ಮಧ್ಯೆ ಸಾಮರಸ್ಯ ಬರಬೇಕೆಂಬ ಅವರ ಕಳಕಳಿ ಇಂದು ಎಲ್ಲ ಬುದ್ಧಿಜೀವಿಗಳಿಗೂ ಇರಲೇಬೇಕಾದ ಜೀವದ್ರವ್ಯವಾಗಿದೆ. ಆ ಕಾಲದಲ್ಲಿ ಇಷ್ಟಲಿಂಗವು ಜಾತಿ ನಿರ್ಮೂಲನೆಯ ಅಸ್ತ್ರವಾಗಿತ್ತೆಂಬ ಚೀನಕೇರಿಯವರ ಮಾತು ಸರಿಯಾದುದೇ ಆಗಿದೆ. ಆದರೆ ಇಷ್ಟಲಿಂಗಧಾರಿಗಳೂ ಜಾತಿವಾದಿಗಳಾಗಿರುವುದು ಇಂದಿನ ದುರಂತ. ಶಿವಸ್ವಾಮಿ ಚೀನಕೇರಿಯಂತಹವರು ಈ ದಿಸೆಯಲ್ಲಿ ಇನ್ನೂ ಹೆಚ್ಚಿನ ಓದು ಬರಹ ನಡೆಸಿದ್ದೇ ಆದಲ್ಲಿ ಅವರೊಬ್ಬ ವಸ್ತುನಿಷ್ಠ ಬರಹಗಾರರಾಗಿ ಹೊರಹೊಮ್ಮುವುದರಲ್ಲಿ ಆಶ್ಚರ್ಯವಿಲ್ಲ. ಅವರ ಕುರಿತ ಈ ಪುಸ್ತಕವು ಜನಬದುಕನ್ನು ಹಸನುಗೊಳಿಸುವ ಕಾರ್ಯಕ್ಕೆ ನಮ್ಮನ್ನು ಅಣಿಗೊಳಿಸುತ್ತದೆ. ಅಷ್ಟೇ ಅಲ್ಲ ಜಾಗತೀಕರಣದ ಇಂದಿನ ಯುಗದಲ್ಲಿ ವಚನಕಾರರ ನಿಲುವುಗಳ ಪರಿಶೀಲನೆಗೂ ನಮ್ಮನ್ನು ಕರೆದೊಯ್ಯುತ್ತದೆ. ಕನ್ನಡ ಸಾಹಿತ್ಯ ಲೋಕ ಅವರಿಂದ ಇನ್ನೂ ಹೆಚ್ಚಿನ ಸಾಹಿತ್ಯ ಕೃಷಿಯನ್ನು ಈ ಮೂಲಕ ಅಪೇಕ್ಷಿಸುವಂತಾಗಲೆಂದು ಆಶಿಸುತ್ತೇನೆ.

*** ಡಾ.ಶಿವಗಂಗಾ ರುಮ್ಮಾ,**
ಪ್ರಾಧ್ಯಾಪಕರು, ಕನ್ನಡ ವಿಭಾಗ,
ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ, ಗುಲಬರ್ಗಾ.

ಜ್ಞಾನದಾಸೋಹಿಯ ಸಾರ್ಥಕ ಬದುಕು.

ಶಿವಸ್ವಾಮಿ ಚೀನಕೇರಿ ಅವರ ಪವಾಡ ಸದೃಶ ಬದುಕು ಇಲ್ಲಿ ಸ್ವಾರಸ್ಯಕರವಾಗಿ ನಿರೂಪಿತವಾಗಿದೆ. ಬಡತನದಲ್ಲಿ ಸಾಗಿದ ಬದುಕಿಗೆ ಬೆಳಕನ್ನು ನೀಡಲು ಪ್ರಾರಂಭವಾಗಿದ್ದ ಕಲಿಕೆ, ಪ್ರಾಥಮಿಕ ಹಂತದಲ್ಲಿಯೇ ಮೊಟಕಾಗುವುದಕ್ಕೆ ನೆಪವಾಗುತ್ತದೆ ದೈಹಿಕ ನ್ಯೂನತೆಯಾಗಿ ಎರಗಿದ ಅಂಧತ್ವ. ಆದರೆ ದೃಷ್ಟಿ ಮುಸುಕಾಗುವ ಮೊದಲೇ ಕನ್ನಡದ ಸಾಕಷ್ಟು

ಸಾಹಿತ್ಯ ಕೃತಿಗಳನ್ನು ಅಧ್ಯಯನ ಮಾಡಿದ ಶಿವಸ್ವಾಮಿಯವರು ಅಷ್ಟರಿಂದಲೇ ತಮ್ಮ ಮುಂದಿನ ಸಾಹಿತ್ಯ ಕೃಷಿಗೆ ಅವಶ್ಯಕವಾದ ಜೀವದ್ರವ್ಯವನ್ನು ಸಂಗ್ರಹಿಸಿರುತ್ತಾರೆ. ಅಂಧತ್ವವನ್ನು ಎದುರಿಸಲು ಅವರನ್ನು ಕೈಹಿಡಿದ ಸಂಗೀತ ಸಾಧನೆಗೆ ಗದುಗಿನ ವೀರಶೈವ ಪುಣ್ಯಾಶ್ರಮ ಆಸರೆಯಾಗುತ್ತದೆ. ಬಾಲ್ಯದಿಂದಲೂ ಸಾತ್ವಿಕ ಪ್ರವೃತ್ತಿಯನ್ನು ರೂಢಿಸಿಕೊಂಡ ಶಿವಸ್ವಾಮಿಯವರು ತಮ್ಮ ಆಧ್ಯಾತ್ಮ ವ್ಯಕ್ತಿತ್ವಕ್ಕೆ ಪೂರಕವಾಗುವ ನಡವಳಿಕೆಯನ್ನು ಪೋಷಿಸಿಕೊಂಡೇ ಬರುತ್ತಾರೆ.

ಬದುಕಿಗೆ ಅವಲಂಬಿಸಿದ ಶಿಕ್ಷಕ ವೃತ್ತಿಯನ್ನು ಸಮಾಜದ ಓರೆಕೋರೆಗಳನ್ನು ತಿದ್ದಲು ಶ್ರಮಿಸುವುದಕ್ಕೆ ತಮ್ಮದೇ ಮಿತಿಯಲ್ಲಿ ಪ್ರವಚನಗಳ ಮೂಲಕ ತೊಡಗುವ ಶಿವಸ್ವಾಮಿ ಅವರದು ಅನನ್ಯ ಸ್ವರೂಪದ ವ್ಯಕ್ತಿತ್ವ. ಅದನ್ನೇ ಲೇಖಕರು ಸೂತ್ರರೂಪದಲ್ಲಿ ಈ ಮಾತುಗಳಲ್ಲಿ ಹಿಡಿದಿಟ್ಟಿದ್ದಾರೆ: 'ಲೇಖಕರಾದವರು, ಸಾಹಿತ್ಯಿಕವಾಗಿ ಬರೆದಿದ್ದನ್ನು ವೈಯಕ್ತಿಕವಾಗಿ ಬದುಕಬೇಕು; ಸಾಮಾಜಿಕವಾಗಿ ಅದನ್ನು ಜಾರಿಗೆ ತರಬೇಕು ಎಂಬ ಮಾತನ್ನು ಶಿವಸ್ವಾಮಿ ಅವರು ಅಕ್ಷರಶಃ ಪಾಲಿಸಿದವರು. ಪಾಲಿಸದ ಹೊರತು ಬೋಧಿಸುವ ಹಕ್ಕಿಲ್ಲ ಎಂಬ ಶರಣರ ನುಡಿಯನ್ನು ಚಾಚು ತಪ್ಪದೆ ಅನುಸರಿಸಿದವರು. ಇಷ್ಟಲಿಂಗ ದೀಕ್ಷೆಯಾದ ಬಳಿಕ ಶರಣ ಸಂಕುಲವೆಲ್ಲ ಒಂದೇ ಎಂಬ ನಿಲುವು ತಾಳಬೇಕಾಗುತ್ತದೆ. ಅದರಂತೆ ಬಾಳಿ ಬದುಕುವ ನಡೆಯನ್ನು ಶಿವಸ್ವಾಮಿಯವರು ಆರಂಭದಲ್ಲಿಯೇ ಪ್ರದರ್ಶಿಸಿದ್ದಾರೆ. ಹೋದ ಕಡೆಗಳೆಲ್ಲ ಜಾತಿ ತಾರತಮ್ಯದ ವಿರುದ್ಧ, ಮೇಲ್ವರ್ಗದವರ ಶೋಷಣೆಗಳ ವಿರುದ್ಧ ಮಾತನಾಡುತ್ತಲೇ ಅದನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ಮೂಲಕ ಉಳಿದವರಿಗೆ ಮಾದರಿಯಾಗಿದ್ದು ಈಗ ಇತಿಹಾಸ. ತತ್ವ, ಧರ್ಮ, ದೇವರು, ಸಾಹಿತ್ಯ ಈ ವಿಷಯಗಳನ್ನು ಬಾಳಿನ ಉಸಿರಾಗಿ ಮಾಡಿಕೊಂಡು ಅನುಗಾಲವೂ ಒಂದು ನೀತಿಬದ್ಧವಾದ ಜೀವನವನ್ನು ನಡೆಸುತ್ತ ಬಂದವರು. ಬಾಲ್ಯದಿಂದಲೂ ತಮ್ಮ ಸರಿದೊರೆಯ ತರುಣ ವೃಂದಕ್ಕೆ

ಆದರ್ಶಪ್ರಾಯವಾಗಿ ಕೆಲಸ ಮಾಡಿದವರು. ಕತ್ತಲಿನಿಂದ ಬೆಳಕಿನ ಕಡೆಗೆ ಕ್ರಮಕ್ರಮವಾಗಿ ಮುಖ ತಿರುಗಿಸಿ ತನ್ನ ಪಯಣದ ಹಾದಿಯನ್ನು ತಾನೇ ಹುಡುಕಿಕೊಂಡು ದಟ್ಟಡಿಯಿಡುವ ದಿಟ್ಟತನವನ್ನು ಸ್ವಬುದ್ಧಿಯಿಂದ ಕಂಡುಕೊಂಡವರು...'

ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕೃಷಿ ಮಾಡಿರುವ ಶಿವಸ್ವಾಮಿಯವರು ಲಿಂಗಾಯತ ಧರ್ಮದ ಅನುಯಾಯಿಯಾಗಿ ಕಾಯಕನಿಷ್ಠೆ ಮತ್ತು ಜ್ಞಾನ ದಾಸೋಹದ ಮಾರ್ಗವನ್ನು ಅನುಸರಿಸುತ್ತಾ ತಾವು ಒಪ್ಪಿಕೊಂಡ ಮತಧರ್ಮಕ್ಕೆ ಬದ್ಧತೆಯಿಂದ ಬದುಕುತ್ತಾ ಉತ್ತಮ ಮಾದರಿಯನ್ನು ನೀಡಿದ್ದಾರೆ. ಅದು ಇಂದಿನ ಸಾಮಾಜಿಕ ಜೀವನಕ್ಕೆ ಅವಶ್ಯಕವಾದ ಮಾದರಿಯಾಗಿದೆ. ಅವರ ಜೀವನ ವಿವರಗಳನ್ನು ಓದುತ್ತಿದ್ದರೆ ಹಣ್ಣು ಹೂವುಗಳಿಂದ ತನ್ನಷ್ಟಕ್ಕೆ ತಾನೇ ಸೊಂಪಾಗಿ ಬೆಳೆದ ಉದ್ಯಾನದಲ್ಲಿ ವಿಹಾರ ಮಾಡಿದಂತಾಗುತ್ತದೆ.

*** ಲಕ್ಷ್ಮಣ ಕೊಡಸೆ,**
ನಿವೃತ್ತ ಪತ್ರಕರ್ತರು, ಪ್ರಜಾವಾಣಿ, ಬೆಂಗಳೂರು.

ಶ್ರೀಗಂಧದ ಕೊರಡು.

ಶಿವಸ್ವಾಮಿ ಚೀನಕೇರಿ, ಇದೊಂದು ಚಿತ್ತಾಕರ್ಷಕ ಹೆಸರು. ಶುಭ್ರತೆಗೆ ಸಿಕ್ಕ ಅದ್ಭುತವಾದ ಹೆಸರು. ವೇಷದ ಶುಭ್ರತೆಗಲ್ಲ; ಅಂತರಂಗದ ಶುಭ್ರತೆಗೆ, ನಡೆನುಡಿಯ ಸಮನ್ವಯತೆಗೆ ಸಿಕ್ಕ ಸತ್ವಭರಿತ ಹೆಸರು. ಹೆಸರಿನಿಂದ ದೊಡ್ಡವರಾದವರು ಅತಿ ವಿರಳ. ಶಿವಸ್ವಾಮಿ ಚೀನಕೇರಿಯವರು ತಮ್ಮ ಪಾವನ ಜೀವನದ ಮುಖಾಂತರ ತಮ್ಮ ಹೆಸರಿಗೆ ಇನ್ನಷ್ಟು ಮೆರಗು ಕೊಟ್ಟಿದ್ದಾರೆ. ಶರಣರ ಭಕ್ತಿ ಪಥದಲ್ಲಿ ಮುನ್ನಡೆದವರು ಶಿವಸ್ವಾಮಿ ಚೀನಕೇರಿಯಾಗಿದ್ದಾರೆ. ಅವರ ದಾಂಪತ್ಯ ಒಂದು ಶ್ರೀಗಂಧದ ಕೊರಡಾಗಿ ಸವೆಸವೆದು ಸುಗಂಧ ಬೀರುತ್ತಲಿದೆ.

ಹತ್ತನೇ ತರಗತಿ ಓದುವಾಗಲೇ ಅವರು ನರದೌರ್ಬಲ್ಯದಿಂದ

ಅಂಧತ್ವವನ್ನು ಅಪ್ಪಿದವರು. ಅವರ ಹೊರಗಣ್ಣು ಅಳಿದರೂ ಒಳಗಣ್ಣು ಮಾತ್ರ ಜಾಗೃತವಾಗಿದೆ. ಒಳ್ಳೆಯದನ್ನು ಅರಸುವ ಶಕ್ತಿಯನ್ನು ಹೊಂದಿದೆ. ಅವರಲ್ಲಿ ಕಾಯಕ, ದಾಸೋಹ ಮತ್ತು ಅನುಭಾವಗಳು ಮುಪ್ಪುರಿಯಾಗಿ ಮನೆ ಮಾಡಿವೆ. ಆ ಕಾರಣದಿಂದಲೇ ಅವರು ಉಸುರಿದೆಲ್ಲಾ ವಚನವಾಗಿದೆ. ಹಲವಾರು ಕೃತಿರೂಪ ತಾಳಿವೆ. ಸಂಗೀತ ಶಕ್ತಿಯೂ ಅವರನ್ನು ವಚನ-ನಿರ್ವಚನಕಾರರನ್ನಾಗಿ ಮಾಡಿದೆ. ಅವರಿಟ್ಟ ಹೆಜ್ಜೆಗಳೆಲ್ಲಾ ಮಾದರಿಯಾಗಿವೆ.

ಅವರ ಬಗ್ಗೆ ಬರೆಯುವುದು ನನ್ನ ಸೌಭಾಗ್ಯವಾಗಿದೆ. ಅವರ ವಚನಗಳ ಸಾಲುಗಳನ್ನು ಓದುತ್ತಿದ್ದಂತೆಯೇ ಹನ್ನೆರಡನೇ ಶತಮಾನದ ವಚನಕಾರರೆಲ್ಲಾ ನಮ್ಮ ಕಣ್ಣೆದುರು ಸಾಲಾಗಿ ಹಾದುಹೋದ ಅನುಭವವು ವೇದ್ಯವಾಗುತ್ತದೆ. ಅವರು ಬಸವ ಮಾರ್ಗಿಗಳು. ಬಸವಣ್ಣನವರೇ ಅವರ ಅನ್ನ-ನೀರು-ಗಾಳಿ ಎಲ್ಲವೂ ಆಗಿದ್ದಾರೆ. ಈ ಕಾರಣದಿಂದಾಗಿ ಅವರ ವಚನಗಳೆಲ್ಲಾ ಮುತ್ತಿನ ಮಾಲೆ ಹೆಣೆದಂತಿವೆ.

ಅವರ 'ವಚನ ಸಂಜೀವಿನಿ'ಯ ಬಗ್ಗೆ ಒಂದೆರಡು ಮಾತುಗಳು, ಆ ಕೃತಿಯೊಂದು ನಿಶ್ಚಳ ನಿರಾಭರಣ ಸುಂದರಿಯಾಗಿದೆ. ಕಲ್ಲು ಸಕ್ಕರೆಯ ಪೆಂಟೆಯಾಗಿದೆ. ಯಾವ ಮಗ್ಗುಲಿನಿಂದ ಸವಿದರೂ ಸ್ವಾದವೇ ಸ್ವಾದ. ಅವರು ತನ್ನನ್ನು ತಾನು ಬಸವಣ್ಣನಿಗೆ ಅರ್ಪಿಸಿಕೊಂಡ ಬಗೆಯನ್ನು ಅವರ ಕೆಳಗಿನ ವಚನದಲ್ಲಿ ಮನನ ಮಾಡಿಕೊಳ್ಳಬಹುದಾಗಿದೆ. 'ಎನ್ನ ಕುಲಸೂತಕದ ಭ್ರಮೆಯ ಬಿಡಿಸಿ ಕೀಳರಿಮೆಯಿಂದ ಮೇಲೆತ್ತಿದ ಬಸವ ಎನ್ನ ಧನಮದದ ಭ್ರಮೆಯ ಬಿಡಿಸಿ ದಾಸೋಹಿಯನ್ನಾಗಿಸಿದ ಬಸವ ಎನ್ನ ಭವಿತನದ ಕತ್ತಲೆಯ ಕಳೆದು ಸುಜ್ಞಾನದ ಬೆಳಕಿನತ್ತ ಬಸವ ಎನ್ನ ವಿಷಯದ ಗುಣಗಳ ಕಳೆದು ತ್ರಿಕರಣವ ಹಸನುಗೊಳಿಸಿದ ಬಸವ ಎನ್ನ ಕರಸ್ಥಲದ ಪರಶಿವನ ನಿಜವ ತೋರಿ ಬದುಕಿಸಿದ ತಂದೆ ಬಸವಣ್ಣನಯ್ಯಾ ಲಿಂಗದೇವಾ! ಬಸವಣ್ಣನೇ ತನ್ನ ಎಲ್ಲಾ ಆಗು-ಹೋಗುಗಳಿಗೆ ಕಾರಣವೆಂಬ ಭಾವವು ಇಲ್ಲಿ ಸರ್ವವಿದಿತವಾಗಿದೆ. ಶಿವಸ್ವಾಮಿ ಚೀನಕೇರಿಯವರ

ವಚನಾಂಕಿತ 'ಲಿಂಗದೇವ' ನನ್ನನ್ನು ಬೆಚ್ಚಿಬೀಳುವಂತೆ ಮಾಡಿದೆ. ಮಾತೆ ಮಹಾದೇವಿಯವರು ಬಸವಣ್ಣನವರ ವಚನಾಂಕಿತ 'ಕೂಡಲಸಂಗಮದೇವ'ವನ್ನು ತಿರುಚಿ 'ಲಿಂಗದೇವ' ಮಾಡಿ ಜಗದ ಕೆಂಗಣ್ಣಿಗೆ ಗುರಿಯಾಗಿದ್ದವರು. ಆ 'ಲಿಂಗದೇವ'ವನ್ನೇ ಶಿವಸ್ವಾಮಿ ಚೀನಕೇರಿಯವರು ತಮ್ಮ ವಚನಾಂಕಿತ ಮಾಡಿಕೊಂಡಿದ್ದು ಸೋಜಿಗದ ಸಂಗತಿಯಾಗಿದೆ. ಇದು ಅವರ ವೈಯಕ್ತಿಕ ವಿಷಯವಾಗಿದೆ. ಇರಲಿ, ಸರಳಜೀವಿಗಳ ಕಂಡು ಅಸಡ್ಡೆ ತೋರುವವರ ಕುರಿತು ಚೀನಕೇರಿಯವರು ಹೇಳುವ ಚೆನ್ನದಂತಹ ಈ ಸೂಳ್ನುಡಿಯ ಅಂತರಂಗವನ್ನು ನೀವೂ ತುಸು ಮನನ ಮಾಡಿಕೊಳ್ಳಿರಿ.

'ಸೌಜನ್ಯ ಉಳ್ಳವರ ಹುಚ್ಚರೆಂಬುವರು ದಯವ ತೋರುವವರ ಹೇಡಿಯೆಂಬುವರು ಸರಳತೆಯನಳವಡಿಸಿಕೊಂಡವರ ಜಿಪುಣನೆನ್ನುವರು ನಿಜವನುಡಿವವರ ಕಂಡು ಗೇಲಿ ಮಾಡುವರು ಲಿಂಗದೇವಾ ನಿಮ್ಮ ನಿಜ ಭಕ್ತಿಯಲ್ಲಿಪ್ಪವರ ಕಂಡು ಗಮನಿಸದಿಹರು' ಇಂದು ಎಲ್ಲರೂ ರೊಕ್ಕದ ಬೆನ್ನು ಹತ್ತಿ, ಲೆಕ್ಕಮೀರಿ ವರ್ತಿಸುತ್ತಿದ್ದಾರೆ. ರೊಕ್ಕ ಇದ್ದವರೆಲ್ಲಾ ಲೆಕ್ಕಕ್ಕೆ. ಇಲ್ಲದವರೆಲ್ಲಾ ಯಾತಕ್ಕೆ! ಎಂಬ ಭಾವ ಎಲ್ಲೆಡೆ ಬೆಳೆದು ಬಿರುಸಾಗಿದೆ. ಪಾಲಕರು, ಬಾಲಕರು, ಶಿಕ್ಷಕರು, ವೈದ್ಯರು, ಅಭಿಯಂತರರು, ನಾಯಕರು, ಮಂತ್ರಿಗಳೆಲ್ಲರು ದುಡ್ಡು ದುಡ್ಡು ಎಂದು ಹಪಹಪಿಸುತ್ತಿದ್ದಾರೆ. ನಾಯಿ-ನರಿ-ಹಂದಿಗಿಂತ ಹೀನರಾಗಿದ್ದಾರೆ.

ಅಂಥವರಿಗೆ ಸುಜನರು, ದಯಾಳುಗಳು, ಸರಳ ಜೀವಿಗಳು, ನಿಜವ ನುಡಿವವರು, ನಿಜಭಕ್ತಿಯುಳ್ಳವರೆಲ್ಲಾ ಗಮನಕ್ಕೆ ಬಾರದಿರುವುದು ಸಹಜ. ಅಪ್ಪ ಬಸವಣ್ಣ ಹೇಳಿದಂತೆ ಬಡತನವೆಂಬ ಮಂತ್ರವಾದಿ ಬರಲು ಅವರು ತಾನಾಗಿಯೇ ಮನುಷ್ಯರಾಗುವರು. ಬೆಳಗ್ಗೆ ಒಬ್ಬ ಗಂಡನನ್ನು, ಸಂಜೆಯೊಬ್ಬ ಹೆಂಡತಿಯನ್ನು ಹುಡುಕುವವರಿಗೆ ನೀತಿಯ ಮಾತು ಯಾತಕ್ಕೆ? ಇರಲಿ!

ಅಗುಳು ಕಿವುಚಿದರೆ ಅನ್ನದ ಹದ ತಿಳಿಯುತ್ತದೆ. ಹನಿ ಅದುಮಿದರೆ ಸಕ್ಕರೆಯ ಹದ ತಿಳಿಯುತ್ತದೆ. ಒಂದೆರಡು ವಚನ ಓದುವುದರಲ್ಲೇ

ಶಿವಸ್ವಾಮಿ ಚೀನಕೇರಿಯವರ ಹದವು ನನ್ನೆದೆಯನ್ನು ಆಳಿತು. ಅವರು ಉತ್ತರೋತ್ತರ ಬಸವತ್ವಕ್ಕೇರಲೆಂದು ಹಾರೈಸುವೆ.

*** ಶ್ರೀ ದೇಶಾಂಶ ಹುಡಗಿ,**
ಬೀದರ.

ಕೊನೆಯ ಮಾತು.

ಶಿವಸ್ವಾಮಿ ಚೀನಕೇರಿ ಅವರು ಬಸವಾಭಿಮಾನಿಯಾಗಿರುವುದೆಷ್ಟು ನಿಜವೋ, ಅಷ್ಟೇ ಅಪ್ಪಟ ಕನ್ನಡಭಿಮಾನಿಗಳು. ಹಾಗೆ ನೋಡಿದರೆ ಅದು ಸಾಂಕೇತಿವೂ ಹೌದು. ಶರಣರು ಕನ್ನಡದಲ್ಲಿ ವಚನಗಳನ್ನು ಬರೆಯುವ ಮೂಲಕ ಕನ್ನಡ ಭಾಷೆಯನ್ನು ದೈವತ್ವಕ್ಕೇರಿಸಿದವರು. ಅದಕ್ಕೆ ಪ್ರತಿಯಾಗಿ ಕನ್ನಡಿಗರು ೯೦೦ ವರ್ಷಗಳಿಂದ ಬಸವಾದಿ ಶರಣರನ್ನು ತಮ್ಮ ತಲೆಯ ಮೇಲೆ ಹೊತ್ತುಕೊಂಡು ಇಂದಿಗೂ ಮುಖಾಮುಖಿಗೊಳ್ಳುತ್ತಿರುವರು. ಹಾಗಾಗಿಯೇ ಬಸವಾದಿ ಶರಣರು ಮತ್ತು ಕನ್ನಡ ಭಾಷೆ ಎರಡೂ ಒಂದೇ ನಾಣ್ಯದ ಎರಡು ಭಿನ್ನ ಮುಖಗಳಷ್ಟೆ. ಶಿವಸ್ವಾಮಿಯವರು ೨೦೦೯ರಲ್ಲಿಯೇ 'ಕನ್ನಡ ಸೌರಭ' ಎಂಬ ಕವನ ಸಂಕಲನವನ್ನು ಬರೆಯುವ ಮೂಲಕ ಕನ್ನಡ ಭಾಷೆಯ ಮೇಲಿನ ತಮ್ಮ ಬದ್ಧತೆಯನ್ನು, ಗೌರವವನ್ನು ವ್ಯಕ್ತಪಡಿಸಿದವರು.

ಬೀದರ ಜಿಲ್ಲಾ ಕಸಾಪದವರು 'ಸಾಂಸ್ಕೃತಿಕ ಚಿಂತಕರು ಮಾಲೆ'ಯಲ್ಲಿ ಶಿವಸ್ವಾಮಿಯಂತಹ ಸಾಧಕರನ್ನು ಪರಿಚಯಿಸುವ ಬಗ್ಗೆ ಯಾರಲ್ಲೂ ಅನುಮಾನಗಳಿರಲಿಕ್ಕಿಲ್ಲ. ಆದರೆ ಅಂತಹ ಸಾಧಕನ ಜೀವನವನ್ನು ಅಕ್ಷರರೂಪಕ್ಕಿಳಿಸುವ ಜವಾಬ್ದಾರಿಯನ್ನು ಶಿವಸ್ವಾಮಿಯವರು ಮತ್ತು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ನನಗೆ ನೀಡಿರುವುದು ನನ್ನ ಸೌಭಾಗ್ಯವೆಂದೇ ಭಾವಿಸುತ್ತೇನೆ.

ಒಮ್ಮೆ 'ನಿಮಗಿಂತ ಕಿರಿಯರಾದ ಕುವೆಂಪು ಅವರಿಗೆ ಜ್ಞಾನಪೀಠ ಬಂತು. ನಿಮಗೆ ಇನ್ನು ಬಂದಿಲ್ಲವಲ್ಲ ಎಂದು ಯಾರೋ ಮಾಸ್ತಿಯವರಿಗೆ

ಕೇಳಿದಾಗ, ಮನೆಯಲ್ಲಿ ಸಿಹಿತಿಂಡಿ ಮಾಡಿದಾಗ ಮೊದಲು ಕೊಡೋದು ಚಿಕ್ಕವರಿಗೆ ಅಂದಿದ್ದರಂತೆ' ಅದಕ್ಕೆ ಅವರನ್ನು ಕನ್ನಡದ ಆಸ್ತಿ ಎನ್ನುವುದು. ಹಾಗೆ ಕಸಾಪದವರು ಶಿವಸ್ವಾಮಿಯವರೊಂದಿಗೆ ಕೂಡಿ ಮಾಡಿದ ಸಿಹಿತಿಂಡಿಯನ್ನು ಚಿಕ್ಕವನಾದ ನನಗೆ ಮೊದಲು ನೀಡಿದ್ದಾರೆ ಎಂದು ವಿನಮ್ರವಾಗಿ ಭಾವಿಸುವೆ. ಎಲ್ಲರಿಗೂ ಅನಂತ ಶರಣು.

ಅನುಬಂಧ

ಶಿವಸ್ವಾಮಿಯವರ ಕೃತಿಗಳು.

೧. ವಚನಾಂಕುರ–ಆಧುನಿಕ ವಚನ ಸಂಕಲನ, ೧೯೯೫.
೨. ಲಿಂಗದೇವನ ವಚನದೀಪ್ತಿ–ಆಧುನಿಕ ವಚನ ಸಂಕಲನ, ೨೦೦೩.
೩. ಹುಲಸೂರು ಶ್ರೀಗಂಧ–ಭಕ್ತಿ ಕವನ ಸಂಕಲನ, ೨೦೦೪.
೪. ಕನ್ನಡ ಸೌರಭ–ಕವನ ಸಂಕಲನ, ೨೦೦೯.
೫. ಪಂಚಾಚಾರ ಪ್ರಭೆ–ವಚನ ವಿಶ್ಲೇಷಣೆ, ೨೦೧೨.
೬. ವಚನ ಸಂಜೀವಿನಿ–ಆಧುನಿಕ ವಚನ ಸಂಕಲನ, ೨೦೧೫.
೭. ಕಣಗಿಲು ಬಾವಿ–ಕಥಾ ಸಂಕಲನ, ೨೦೧೭.
೮. ಸೀಮೋಲ್ಲಂಘನ–ವೈಚಾರಿಕ ಕೃತಿ, ೨೦೧೯.
೯. ಮುಂಬೆಳಕು–ಕಥಾ ಸಂಕಲನ, ೨೦೨೦.

ಅಪ್ರಕಟಿತ ಕೃತಿಗಳು.

೧. ಅಗ್ನಿಪಥ–ಕಾದಂಬರಿ.
೨. ಪ್ರಕೃತಿ–ಬಾನುಲಿ ನಾಟಕ.
೩. ಮೂರು ಸೂತ್ರಗಳು–ಬಾನುಲಿ ನಾಟಕ.
೪. ಕರಗದ ಕಂಬನಿ–ಕಾದಂಬರಿ.
೫. ನನ್ನ ಕರ್ತವ್ಯ–ಕಾದಂಬರಿ.
೬. ಸರೋವರದ ಹತ್ತಿರ–ಸಾಮಾಜಿಕ ನಾಟಕ.
೭. ಮಳೆ ಹನಿಗಳು–ಕಿರು ಲೇಖನಗಳ ಸಂಗ್ರಹ.

ಪ್ರಶಸ್ತಿಗಳು.

೧. ಚಿತ್ರದುರ್ಗದ ಮುರುಘಾಮಠದಿಂದ ೧೯೯೫ರಲ್ಲಿ ರಾಷ್ಟ್ರಕವಿ ಜಿ.ಎಸ್.ಶಿವರುದ್ರಪ್ಪನವರಿಂದ ಸನ್ಮಾನ.

೨. ಹುಲಸೂರಿನ ಶ್ರೀಮಠದಿಂದ ೨೦೦೩ರಲ್ಲಿ 'ಪ್ರವಚನ ರತ್ನ'.

೩. ಅನುಭವ ಮಂಟಪ ಬಸವಕಲ್ಯಾಣದಿಂದ ೨೦೦೪ರಲ್ಲಿ 'ಅಂಬಿಗರ ಚೌಡಯ್ಯ ಪ್ರಶಸ್ತಿ'.

೪. ಬಸವಸೇವಾ ಪ್ರತಿಷ್ಠಾನ ಬೀದರ ವತಿಯಿಂದ ೨೦೦೯ರಲ್ಲಿ 'ಕಾಯಕ ರತ್ನ ಪ್ರಶಸ್ತಿ'.

೫. ಬಸವ ಮಹಾಮಠ ಮನ್ನಾಎಖೇಳಿ ವತಿಯಿಂದ ೨೦೧೪ರಲ್ಲಿ 'ಶ್ರೀ ಗುರು ಭದ್ರೇಶ್ವರ ಪ್ರಶಸ್ತಿ'.

೬. ದೇಶಪಾಂಡೆ ಪ್ರತಿಷ್ಠಾನ ಬೀದರ ವತಿಯಿಂದ ೨೦೧೫ರಲ್ಲಿ 'ಸಾಹಿತ್ಯ ಚೂಡಾರತ್ನ'.

೭. ಪ್ರಭುದೇವ ಜ್ಞಾನಕೇಂದ್ರ ಶರಣಬಸವ ನವಲಿಂಗ ಶರಣರು ಸಂತೆಕಡೂರು, ಶಿವಮೊಗ್ಗ ವತಿಯಿಂದ ೨೦೦೯ರಲ್ಲಿ 'ಮಹಾಶರಣ ಪ್ರಶಸ್ತಿ'.

೮. ೨೦೧೪ರಲ್ಲಿ ಹುಮನಾಬಾದ ತಾಲೂಕಿನ ೪ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷ.

ಶಿವಸ್ವಾಮಿಯವರ ಜೀವನಕ್ಕೆ ಸಂಬಂಧಿಸಿದ ಪ್ರಮುಖ ಘಟನಾವಳಿಗಳು.

೧. ಜನನ – ೨೨ ಮೇ, ೧೯೬೭, ಸೋಮವಾರ, ತಾಯಿಯ ತವರು ಮನೆ ಧುಮ್ಮನಸೂರಿನಲ್ಲಿ.

೨. ತಂದೆ – ಲಿಂಗಪ್ಪ.

೩. ತಾಯಿ – ರೇವಮ್ಮಾ.

೪. ಹುಟ್ಟೂರು – ಚೀನಕೇರಾ, ಹುಮನಾಬಾದ ತಾಲೂಕು, ಬೀದರ ಜಿಲ್ಲೆ.

೫. ಚಿಂಚೋಳಿಕರ್ ಎಂಬುದು ಮೂಲ ಮನೆತನದ ಹೆಸರು. ಧರ್ಮಸಂಕರದ ನಂತರ ಚೀನಕೇರಿ ಎಂಬ ಮನೆತನದ ಹೆಸರಿನಲ್ಲಿ ಚಿರಪರಿಚಿತರು.

೬. ಪ್ರಾಥಮಿಕ ಶಿಕ್ಷಣ – ಸರ್ಕಾರಿ ಪ್ರಾಥಮಿಕ ಶಾಲೆ, ಧುಮ್ಮನಸೂರು ೧ರಿಂದ ೩ನೇ ತರಗತಿ (೧೯೭೪ ರಿಂದ ೧೯೭೭) ಮತ್ತು ಚೀನಕೇರಾ ೪ರಿಂದ ೭ನೇ ತರಗತಿ (೧೯೭೮ ರಿಂದ ೧೯೮೧).

೭. ಪ್ರೌಢ ಶಿಕ್ಷಣ – ಸರ್ಕಾರಿ ಜೂನಿಯರ್ ಕಾಲೇಜು, ಹುಮನಾಬಾದ ೮ರಿಂದ ೧೦ನೇ ತರಗತಿ (೧೯೮೨ ರಿಂದ ೧೯೮೪).

೮. ಇಷ್ಟಲಿಂಗದೀಕ್ಷೆ ಪಡೆದಿದ್ದು – ೧೯೮೬, ಗುರುಗಳು–ಶ್ರೀ ಕಲ್ಲಪ್ಪ ದೇವಣೆ.

೯. ೧೯೮೭ರ ಅಕ್ಟೋಬರ್ ೨ರಿಂದ ೨೨ರವರೆಗೆ ಕೂಡಲ ಸಂಗಮದಲ್ಲಿ ನಡೆದ 'ಬಸವರಾಜದೇವರ ರಗಳೆ' ಶಿಬಿರದಲ್ಲಿ ಭಾಗಿ.

೧೦. ಮದುವೆ – ೧೯೯೫ರ ದಸೆಂಬರ್ ೧೫, ಶುಕ್ರವಾರ.

೧೧. ಪತ್ನಿ – ಲಿಂಗಾರ್ಚನಾ.

೧೨. ಮಗ – ಚನ್ನಬಸವ (೧೯೬೬ರ ಅಕ್ಟೋಬರ್ ೦೮).

೧೩. ಮಗಳು – ಕಲ್ಯಾಣಮ್ಮ (೧೯೯೮ರ ಅಗಸ್ಟ್ ೦೬).

೧೪. ಸಂಗೀತ ಕಲಿಕೆ – ವೀರಶೈವ ಪುಣ್ಯಾಶ್ರಮ, ಗದಗ, ೧೯೮೬.

೧೫. ಹಿಂದುಸ್ಥಾನಿ ವಿದ್ವತ್ ಗ್ರೇಡ್ ಪಾಸ್ – ಎ.ಎಸ್. ವಠಾರ್ ಸಂಗೀತ ಶಿಕ್ಷಕರು, ಹುಮನಾಬಾದ, ೨೦೦೫.

೧೬. ಸಂಗೀತ ಶಿಕ್ಷಕರಾಗಿ ಸೇವೆ – ಸರ್ಕಾರಿ ಪ್ರೌಢ ಶಾಲೆ, ಮನ್ನಾಎಖೇಳಿ, ೨೦೧೦ರ ಜುಲೈ ೧೫.

೧೭. ೨೦೧೪ರಲ್ಲಿ ಹುಮನಾಬಾದ ತಾಲೂಕಿನ ೪ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷ.

೧೮. ೧೯೯೦ರಿಂದ ೨೦೦೫ರವರೆಗೆ ರಾಜ್ಯದ ೨೦೦ಕ್ಕೂ ಹೆಚ್ಚು ಹಳ್ಳಿ/ ನಗರಗಳಲ್ಲಿ ಪ್ರವಚನ ಸೇವೆ.

೧೯. ೧೯೯೧ರಿಂದ ೧೯೯೫ರವರೆಗೆ ಚೀನಕೇರಾ ಗ್ರಾಮದ ಹತ್ತಿರವೇ ಬರುವ ಕನಕದಾಸ ಪ್ರೌಢ ಶಾಲೆ, ಸೆಡೋಳದಲ್ಲಿ ಸಂಗೀತ ಶಿಕ್ಷಕರಾಗಿ ಸೇವೆ.

೨೦. ೨೦೦೩ರಿಂದ ೨೦೦೫ರವರೆಗೆ ಬಸವತೀರ್ಥ ವಿದ್ಯಾಪೀಠ (ಬಿಟಿವಿಪಿ), ಹುಮನಾಬಾದದಲ್ಲಿ ಸಂಗೀತ ಶಿಕ್ಷಕರಾಗಿ ಸೇವೆ..

೨೧. ೨೦೦೫ರಿಂದ ೨೦೦೭ರವರೆಗೆ ನೆಹರೂ ಡಿಇಡಿ ಕಾಲೇಜು, ಚಿಟಗುಪ್ಪಾದಲ್ಲಿ ಸಂಗೀತ ಶಿಕ್ಷಕರಾಗಿ ಸೇವೆ.

೨೨. ೨೦೦೭ರಿಂದ ೨೦೧೦ರವರೆಗೆ ರಾಮ ಮತ್ತು ರಾಜ ಡಿಇಡಿ ಕಾಲೇಜು, ಹುಮನಾಬಾದದಲ್ಲಿ ಸಂಗೀತ ಶಿಕ್ಷಕರಾಗಿ ಸೇವೆ.

೨೩. ೨೦೧೦ರ ಜುಲೈ ೧೫ರಿಂದ ಮನ್ನಾಎಖೇಳಿಯ ಸರ್ಕಾರಿ ಪ್ರೌಢ ಶಾಲೆಯಲ್ಲಿ ಸಂಗೀತ ಶಿಕ್ಷಕರಾಗಿ ಸೇವೆ.

ಪುಸ್ತಕ ದಾಸೋಹಿಗಳು.



ದಿ. ಶ್ರೀ ಸಂಗಪ್ಪ ಹುಣಸಗೆರೆ ಅವರು ಭಾಲ್ಕಿ ತಾಲೂಕಿನ ಮದಕಟ್ಟಿ ಗ್ರಾಮದವರು. ಶ್ರೀ ಸಿದ್ಧಪ್ಪ ಮತ್ತು ಶ್ರೀಮತಿ ಸಂಗವ್ವ ಎಂಬುವವರ ಮಗನಾಗಿ ಸ್ವಾತಂತ್ರ್ಯಪೂರ್ವದಲ್ಲಿ ಜನಿಸಿದವರು. ಇವರದು ಮೂಲತಃ ಬಡ ಕೃಷಿಕೂಲಿ ಮಾಡುವ ಕುಟುಂಬ. ಇವರ ತಂದೆ-ತಾಯಿಗಳ ಬಳಿ ತಮ್ಮದೂ ಎಂದು ಹೇಳಿಕೊಳ್ಳಲು ಯಾವ ಆಸ್ತಿಯೂ ಇರಲಿಲ್ಲ. ಊರ ಗೌಡರ ಜಾಗದಲ್ಲಿ ಗುಡಿಸಲೊಂದನ್ನು ಕಟ್ಟಿಕೊಂಡು ಬದುಕಿನ ಬಂಡಿ ನೂಕಿದವರು. ಸಂಗಪ್ಪ ಅವರು ೨೦-೨೧ ವರ್ಷದವರಿರುವಾಗಲೇ ಅವರ ತಂದೆತಾಯಿಗಳಿಬ್ಬರು ತೀರಿಕೊಳ್ಳುತ್ತಾರೆ. ಇವರಿಗೆ ಓರ್ವ ಅಕ್ಕ ಮತ್ತು ಓರ್ವ ತಂಗಿ ಇದ್ದಾರೆ. ಶ್ರೀಮತಿ ನಾಗಮ್ಮ ಇವರ ಮಡದಿ. ಶ್ರೀ ಗುರುನಾಥ ಮತ್ತು ಶ್ರೀ ಪ್ರಭು ಇವರ ಮಕ್ಕಳು. ಸಹಧರ್ಮಿಣಿಯಾಗಿ ನಾಗಮ್ಮನವರು ಗಂಡನ ಕಷ್ಟಸುಖಗಳಲ್ಲಿ 'ನೊರೆವಾಲೊಳಗಿನ ತುಪ್ಪದಂತೆ' ಒಂದಾಗಿ ಬಾಳಿದವರು. ಒಂದುಂಟು-ಒಂದಿಲ್ಲದ ಬದುಕಾದರೂ ಎಂದೂ ಜಿಗುಪ್ಸೆಗೊಂಡವರಲ್ಲ. ಊರ ಸಾಹುಕಾರರ ಬಳಿ ಕೂಲಿ ಮಾಡಿ ಜೀವನ ನಡೆಸುವುದು ಸಂಗಪ್ಪನವರ ದೈನಂದಿನ ಬದುಕಾಗಿತ್ತು. ದಿನಒಂದಕ್ಕೆ ೨೫ ಪೈಸೆ ಕೂಲಿ ಪಡೆದು ಜೀವನ ಮಾಡಿದ ಬಗೆಯನ್ನು ಕೊನೆ ಉಸಿರಿರುವವರೆಗೂ ಮಕ್ಕಳಿಗೆ ನೆನಪಿಸಿದವರು. 'ನನಗೆ ತೊಡಲು ಬಟ್ಟೆ ಕೂಡ ಇರಲಿಲ್ಲ. ಊರವರು ಕೊಟ್ಟ ಹಳೆಯ ಬಟ್ಟೆಗಳನ್ನೇ ಹಾಕಿಕೊಂಡು ಅರ್ಧ ಜೀವನ ಕಳೆದೆ' ಎಂಬ ಅವರ ಮಾತುಗಳು ಅಂದಿನ ಅವರ ದಾರುಣ ಸ್ಥಿತಿಯನ್ನು ಅರಹುತ್ತವೆ. ಅತ್ಯಂತ ಕಷ್ಟಸಹಿಷ್ಣುವಾಗಿ ಬದುಕಿದ ಸಂಗಪ್ಪನವರು ತಾವೇ ದುಡಿದು ಕೂಡಿಟ್ಟ ಹಣದಲ್ಲಿ ೫ ಎಕರೆ ಭೂಮಿಯನ್ನು ಖರೀದಿಸಿ, ಮಡದಿ-ಮಕ್ಕಳಿಗೊಂದು ಸೂರನ್ನು ಮಾಡಿದವರು. ಜೀವನದ ಕೊನೆಯವರೆಗೂ ಎತ್ತುಗಳು ಎಂದರೆ ಅವರಿಗೆ ಎಲ್ಲಿಲ್ಲದ ಪ್ರೀತಿ. ಅನ್ಯರಬಳಿ ದುಡಿಮೆಗೆ ಇದ್ದಾಗಲೂ ಮಧ್ಯರಾತ್ರಿ ಎದ್ದುಹೋಗಿ ಅವುಗಳಿಗೆ ಮೇವು ಹಾಕುತ್ತಿದ್ದರಂತೆ. ಎತ್ತುಗಳು ನಮ್ಮನೆ ದೇವರು ಎನ್ನುತ್ತಿದ್ದರಂತೆ. ಅವುಗಳ ಪುಣ್ಯದಿಂದಲೇ ನಾನು ಭೂಮಿ ಖರೀದಿಸಿ, ಎರಡ್ಹೊತ್ತು ಉಣ್ಣಲು ಸಾಧ್ಯವಾಗಿದ್ದು ಎಂದು ಸದಾ ಹೇಳುತ್ತಿದ್ದರು. 'ಬಾಹತ್ತರ ಬರಗಾಲ'ದಲ್ಲಿ ಹೊಟ್ಟೆಗೆ ಗಂಜೀಯೂ ಸಿಗದೆ, ತಪ್ಪಲು ಬೇಯಿಸಿ ತಿಂದು ಬದುಕಿದ ಜೀವ.

ದಿ. ಶ್ರೀ ಸಂಗಪ್ಪ ಹುಣಸಗೆರೆ ಅವರು ಕಷ್ಟದ ಬದುಕಿನಲ್ಲೂ ಮಕ್ಕಳಿಗೆ ಶಿಕ್ಷಣ ಕೊಡಿಸುವುದನ್ನು ತಪ್ಪಿಸಿದವರಲ್ಲ. ಶ್ರೀ ಪ್ರಭು ಸಂಗಪ್ಪ ಹುಣಸಗೆರೆ ಅವರಿಗೆ ಸ್ನಾತಕೋತ್ತರ ಪದವಿಯವರೆಗೂ ಓದಿಸಿ ವಿದ್ಯಾವಂತರನ್ನಾಗಿ ಮಾಡಿದ್ದಾರೆ. ಅವರ ಕಾಯಕನಿಷ್ಠೆಯ ಸ್ಮರಣಾರ್ಥ ಅವರ ಮಗ ಮತ್ತು ಸೊಸೆಯಾದ ಶ್ರೀ ಪ್ರಭು ಮತ್ತು ಶ್ರೀಮತಿ ಪದ್ಮಾವತಿ ಅವರು 'ಹಾವಸೆಗಲ್ಲಿನ ಪಥಿಕ ಶಿವಸ್ವಾಮಿ ಚೀನಕೇರಿ' ಎಂಬ ಪುಸ್ತಕ ಮುದ್ರಣಕ್ಕೆ ದಾಸೋಹಗೈದಿದ್ದಾರೆ. ಅವರಿಗೆ ಎಲ್ಲ ಕನ್ನಡ ಮನಸ್ಸುಗಳ ಪರವಾಗಿ ಶರಣು ಶರಣಾರ್ಥಿಗಳು.



ಕನ್ನಡ ಭಾಷೆ, ಸಾಹಿತ್ಯ ಮತ್ತು ಸಾಂಸ್ಕೃತಿಕ ನೆಲೆಗಳನ್ನು ಕಟ್ಟುವ, ಹಾಗೂ ಕನ್ನಡ, ಕನ್ನಡಿಗ, ಕರ್ನಾಟಕದ ಸಮಗ್ರ ಏಳಿಗೆಯ ಮಹದುದ್ದೇಶದಿಂದ ಕನ್ನಡ ಸಾಹಿತ್ಯ ಪರಿಷತ್ತು ಹುಟ್ಟಿಕೊಂಡಿದೆ. ಅದರ ಆಶಯಕ್ಕೆ ತಕ್ಕಂತೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಕ್ರಿಯಾಶೀಲವಾಗಿದೆ. ಐತಿಹಾಸಿಕ, ಸಾಹಿತ್ಯಿಕ, ಸಾಂಸ್ಕೃತಿಕ ಶ್ರೀಮಂತಿಕೆ ಹೊಂದಿರುವ ಬೀದರ ಜಿಲ್ಲೆಯ ಪ್ರಬಲ ಇಚ್ಛಾಶಕ್ತಿ, ಇಚ್ಛಾಸಕ್ತಿಯ ಕೊರತೆಯಿಂದಾಗಿ ಈ ಭಾಗ ಹಿಂದುಳಿದ ಹಣೆಪಟ್ಟಿ ಹೊತ್ತಿರುವುದರಿಂದ ಕನ್ನಡ ಸಾಹಿತ್ಯ ಪರಿಷತ್ತು ಸ್ಥಳೀಯ ಕಲೆ, ಸಾಹಿತ್ಯ, ಸಂಸ್ಕೃತಿಯ ಸಂವರ್ಧನೆಗಾಗಿ ಅನೇಕ ಕಾರ್ಯಚಟುವಟಿಕೆಗಳನ್ನು ಆಯೋಜಿಸಿದೆ. ಜಾಗತೀಕರಣದ ಕರಿನೆರಳಿನಿಂದ ಸ್ಥಳೀಯ ಭಾಷೆ ಸಂಸ್ಕೃತಿ ನಲುಗುತ್ತಿರುವಾಗ ಅವನ್ನು ಉಳಿಸುವ ಹೋರಾಟದ ಹಲವು ದಾರಿಗಳು ಕಟ್ಟಿಕೊಳ್ಳಬೇಕಾಗಿದೆ. ಅದರಲ್ಲಿ ಗಡಿಭಾಗದಂಥ ಬೀದರ ನೆಲದಲ್ಲಿ ಇನ್ನೂ ಹೆಚ್ಚು ರಚನಾತ್ಮಕ ಕಾರ್ಯಗಳ ಮೂಲಕ ಪಾಶ್ಚಾತ್ಯ ಸಂಸ್ಕೃತಿ, ಪರಭಾಷೆಗಳಿಗೆ ಸವಾಲಾಗಿ ನಿಲ್ಲುವ ಅಗತ್ಯತೆ ಇದೆ. ಈ ಹಿನ್ನಲೆಯಲ್ಲಿ ಪರಿಷತ್ತು ಕಾರ್ಯನಿರತವಾಗಿದೆ. ಮಾಹಿತಿ ತಂತ್ರಜ್ಞಾನ ಬೆಳೆದಂತೆ ಆಧುನಿಕತೆ ಹೆಚ್ಚಾಗಿ ಜೀವನ ಪ್ರೀತಿ ಕಡಿಮೆಯಾಗುತ್ತಿದೆ. ವಿದ್ಯುನ್ಮಾನ (ಎಲೆಕ್ಟ್ರಾನಿಕ್) ಗ್ಯಾಜೆಟ್ ಲೋಕದಲ್ಲೇ ಮುಳುಗುತ್ತಿರುವ ನಮಗೆ ಅಕ್ಷರ ಲೋಕದ ಪುಸ್ತಕ ಸಂಸ್ಕೃತಿಯ ಉಳಿವು ಅಷ್ಟೇ ಮುಖ್ಯವಾಗಿದೆ. ಆದ್ದರಿಂದ ಸ್ಥಳೀಯ ಲೇಖಕರು, ಕಲಾವಿದರನ್ನು, ಪ್ರತಿಭೆಗಳನ್ನು ಪ್ರೋತ್ಸಾಹಿಸುವುದು, ಸ್ಥಳೀಯ ಕಲೆ, ಸಾಹಿತ್ಯವನ್ನು ಸಾಂಸ್ಕೃತಿಕವಾಗಿ ದಾಖಲಿಸುವುದು, ಕನ್ನಡಿಗರಲ್ಲಿ ಓದುವ ಅಭಿರುಚಿಯನ್ನು ಮೂಡಿಸುವುದು. ಒಟ್ಟಾರೆ ಕನ್ನಡ ನಾಡು, ನುಡಿ, ನೆಲ, ಜಲ, ಜನ ಭಾಷೆ, ಸಾಹಿತ್ಯ ಈ ಎಲ್ಲವುಗಳ ಹಿತಚಿಂತನೆಯೊಂದೆ ನಮ್ಮ ಮೊದಲ ಮತ್ತು ಕೊನೆಯ ಆಶಯವಾಗಿದೆ. ಈ ಹಿನ್ನೆಲೆಯಲ್ಲಿ ಈಗಾಗಲೇ ಕೆಲ ಕೃತಿಗಳನ್ನು ಪ್ರಕಟಿಸಲಾಗಿದೆ.

ಬಹುಮುಖ್ಯವಾಗಿ ಸ್ಥಳೀಯ ಕಲೆ, ಸಾಹಿತ್ಯ, ಶಿಕ್ಷಣ, ಸಮಾಜ ಮೊದಲಾದ ಸಾಂಸ್ಕೃತಿಕ ಸಂಗತಿಗಳನ್ನು ರಚನಾತ್ಮಕವಾಗಿ ಕಟ್ಟುವಲ್ಲಿ ಅನೇಕ ಮಹನೀಯರ ಪರಿಶ್ರಮವಿದೆ. ಸಮಾಜೋಸಾಂಸ್ಕೃತಿಕ ಏಳಿಗೆಗೆಗಾಗಿ ತಮ್ಮನ್ನು ಗಂಧದ ಕೊರಡಂತೆ ಸವೆಸಿಕೊಂಡಿದ್ದಾರೆ. ಅಂಥವರ ಜೀವನ ಸಾಧನೆ ಕಾಲಗರ್ಭದಲ್ಲಿ ಮರೆಯಾಗದೆ ಒಂದು ಸಾಂಸ್ಕೃತಿಕ ದಾಖಲೆಯಾಗಬೇಕೆಂಬ ಸದಾಶಯದಿಂದ ಸಾಂಸ್ಕೃತಿಕ ಚಿಂತಕರು ಮಾಲಿಕೆ ಆರಂಭಿಸಲಾಗಿದೆ. ಇದು ಚಾರಿತ್ರಿಕವಾಗಿ ಮಹತ್ವದ ಯೋಜನೆಯಾಗಿದೆ.

ಉದಯೋನ್ಮುಖ ಬರಹಗಾರರಾದ ನಮ್ಮ ಮಧ್ಯದ ಪ್ರಮುಖ ಸಾಹಿತಿಗಳಾದ ಡಾ. ವೀರಶೆಟ್ಟಿ ಗಾರಂಪಳ್ಳಿ ಅವರು ಬರೆದ ಹಾವಸೆಗಲ್ಲಿನ ಪಥಿಕ ಶಿವಸ್ವಾಮಿ ಚೀನಕೇರಿ ಜೀವನ ಸಾಧನೆ ಎಂಬ ಪುಸ್ತಕ ಪ್ರಕಟಿಸಲು ಹೆಮ್ಮೆ, ಸಂತೋಷವೆನಿಸುತ್ತದೆ. ಶಿವಸ್ವಾಮಿ ಚೀನಕೇರಿ ಶರಣ ಸಾಹಿತ್ಯ ಕುರಿತ, ಹಲವಾರು ವೈಚಾರಿಕ ಕೃತಿಗಳನ್ನು ರಚಿಸಿ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ. ಬಸವ ತತ್ವವನ್ನು ನಿಜಾಚರಣೆಯಲ್ಲಿ ತಂದ ಶ್ರೀಯುತರ ಬದುಕು ಬರಹ ಕುರಿತ ಚಿಂತನೆ ಮಾಡುವುದು, ಅದನ್ನು ಪುಸ್ತಕ ರೂಪದಲ್ಲಿ ಹೊರತರುವುದು ನಾಗರಿಕ ಸಮಾಜದ ಆದ್ಯ ಕರ್ತವ್ಯವೆಂದು ಭಾವಿಸಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಈ ಕೈಂಕರ್ಯ ಪೂರೈಸುತ್ತಿದೆ. ಆದ್ದರಿಂದ ಸಹೃದಯರು ಸಹಸ್ಪಂದಿಸಿ ಈ ಪುಸ್ತಕ ಓದುವ ಮೂಲಕ ಅಕ್ಷರ ಪ್ರೀತಿ ಮೆರೆದರೆ ಪರಿಷತ್ತಿನ ಶ್ರಮ ಸಾರ್ಥಕವೆಂದು ಭಾವಿಸಲಾಗಿದೆ.

ಸುರೇಶ ಚನಶೆಟ್ಟಿ

ಅಧ್ಯಕ್ಷರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಬೀದರ